
ಗೌರಿ ಲಂಕೇಶರ
ಲಂಕೇಶ್
ನವೆಂಬರ್ 1, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಗೌಡರ ಕಟಾಕ್ಷ ಗಿಟ್ಟಿಸಲಿದ್ದ

ಕೋರೆ ದುರಂತ

ಮಂಗಳೂರು : ಪೊಲೀಸ್ ಟೆರ್ರರ್!

ರಿವೇಂಜ್ ಕಿಲ್ಲಿಂಗ್

ಕೋದಂಡರಾಂಪುರ ಎಂಬ ರೌಡಿ ಕೊಂಪೆ

ಕೊರಂಗು ಶಿಕಾರಿಯಲ್ಲಿ ಯಾರ್ಯಾರು?




ಲಂಕೇಶ್

ಸದ್ಯದ ತುರ್ತಿನ ಪರಿಹಾರದಲ್ಲಿ ಶಾಶ್ವತ ದಾಸ್ಯದ ಸಂಕೋಲೆಗಳಿದ್ದಾಗ...

ನೊಬೆಲ್ ಪ್ರಶಸ್ತಿಯ ಬಗ್ಗೆ ಸಂಪಾದಕರ ಟಿಪ್ಪಣಿಯ ಕುರಿತು...

ಕಳೆದ ಸಂಚಿಕೆಯಲ್ಲಿ ಈ ಅಂಕಣದಲ್ಲಿ ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಬಾಂಗ್ಲಾದೇಶದ ಗ್ರಾಮೀಣ ಬ್ಯಾಂಕ್‌ನ ಹರಿಕಾರ ಮೊಹಮದ್ ಯೂನಸ್‌ರವರ ಆರ್ಥಿಕತೆ ದೊಡ್ಡವರ ಆರ್ಥಿಕತೆಯ ಚೌಕಟ್ಟಿನ ಒಳಗೆ ಸಣ್ಣವರು ಸಣ್ಣವರಾಗಿಯೇ ಉಳಿಯುವ ಆರ್ಥಿಕತೆಯೆಂದು ವಿವರಿಸಲಾಗಿತ್ತು. ಹಾಗೆಯೇ ಈಗ ಸಾಮ್ರಾಜ್ಯಶಾಹಿ ಅರ್ಥ ವ್ಯವಸ್ಥೆಯು ಯೂನಸ್‌ರವರ ಅರ್ಥಶಾಸ್ತ್ರವನ್ನು ಮೂರನೇ ಜಗತ್ತಿನ ಬಡತನದ ಪರಿಹಾರಕ್ಕೆ ಇರುವ ಒಂದು ಪರ್ಯಾಯವಾಗಿ ಮುಂದಿಡುತ್ತಿರುವುದರ ಹಿಂದೆ ತಾನು ಮಾಡಿದ ಗಾಯಕ್ಕೆ ತಾನೇ ಮುಲಾಮು ಹಚ್ಚಿ ಗಾಯ ಮಾಡಿದವರ ವಿರುದ್ಧ ಆಕ್ರೋಶ ತಿರುಗದಂತೆ ಮಾಡುವ ಸಾಮ್ರಾಜ್ಯಶಾಹಿ ಹುನ್ನಾರವಿದೆಯೆಂದೂ ವಿವರಿಸಲಾಗಿತ್ತು. ಆದರೆ ನಮ್ಮ ಸಂಪಾದಕರು ತಮ್ಮ ಅಂಕಣದಲ್ಲಿ ನನ್ನ ಈ ಅಭಿಪ್ರಾಯಕ್ಕೆ ಭಿನ್ನಮತವನ್ನು ವ್ಯಕ್ತ ಪಡಿಸಿದ್ದಾರೆ. ಪಶ್ಚಿಮದ ಮಾರುಕಟ್ಟೆ ಬಡದೇಶಗಳನ್ನು ನುಂಗುವ ಹೊತ್ತಿನಲ್ಲಿ "ಯೂನಸ್‌ರವರ ಗ್ರಾಮೀಣ ಬ್ಯಾಂಕ್, ಪ್ರಸನ್ನರ ಚರಕದಂತ ಸಂಸ್ಥೆಗಳು ಹಳ್ಳಿಗಾಡಿನ ಸಾಮಾನ್ಯ ಮಹಿಳೆಯರ ಬದುಕಿನಲ್ಲಿ ಅಪಾರ ಬದಲಾವಣೆ ತರಬಲ್ಲವು ಎಂಬುದನ್ನೂ ಗ್ರಹಿಸಬೇಕು" ಎಂದು ಆಗ್ರಹಿಸಿದ್ದಾರೆ. ಅದೇ ರೀತಿ ಮತ್ತೊಬ್ಬ ಆತ್ಮೀಯರು ಈ ರೀತಿಯ ಮುಲಾಮು ಹಚ್ಚುವ ವ್ಯವಸ್ಥೆ ಇಲ್ಲದಿದ್ದರೆ ಗ್ರಾಮಿಣ ಬಡವರು ಮತ್ತು ಸ್ಲಂ ನಿವಾಸಿಗಳು ಬದುಕುಳಿಯಲೇ ಸಾಧ್ಯವಾಗುತ್ತಿರಲಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇವೆಲ್ಲದರ ಹಿನ್ನೆಲೆಯಲ್ಲಿ ಈ ಮುಲಾಮು ಆರ್ಥಿಕತೆಯ ಬಗ್ಗೆ ಮತ್ತು ಬದುಕುಳಿಯುವ ತುರ್ತು ಹಾಗೂ ಬದುಕು ಬದಲಾಗಬೇಕೆಂಬ ಆರ್ತತೆಯ ನಡುವಿನ ತಾಕಲಾಟಗಳನ್ನು ಬಳಸಿಕೊಳ್ಳುವ ಜಾಗತಿಕ ಅರ್ಥವ್ಯವಸ್ಥೆಯ ಬಗ್ಗೆ ಮತ್ತೊಂದಷ್ಟು...



ಬಡಜನತೆಯ ಇಂದಿನ, ಈಗಿನ, ಸಮಸ್ಯೆಗಳಿಗೆ ಪರಿಹಾರ ತೋರದೆ ಎಲ್ಲಕ್ಕೂ ಮುಂದೆಂದೋ ಆಗ ಬಹುದಾದ ಬದಲಾವಣೆಯಲ್ಲೇ ಶಾಶ್ವತ ಪರಿಹಾರ ವಿರುತ್ತದೆಂದು ವಾದಿಸುವವರಿಗೆ ಎರಡರ ಬಗ್ಗೆಯೂ ಆಳವಾದ ಬದ್ಧತೆ ಮತ್ತು ತಿಳವಳಿಕೆ ಇರುವುದಿಲ್ಲ. ವಾಸ್ತವವಾಗಿ ಇಂದಿನ ನಿತ್ಯದ ಹೋರಾಟವೇ ನಾಳಿನ ಬದಲಾವಣೆಗೆ ದಾರಿಯನ್ನು ತೋರಬೇಕು. ಹಾಗಿಲ್ಲದಿದ್ದಾಗಲೇ ಅದನ್ನು ಆಚರಣೆಗೆ ಬರದ ಐಡಿಯಲಿಸಂ ಎಂದೆನ್ನುತ್ತಾರೆ. ಗಾಯವಾದಾಗ ಮೊದಲು ಆಗಬೇಕಿರುವುದು ಮುಲಾಮು ಹಚ್ಚುವುದೇ. ಆ ನಂತರ ಗಾಯವಾದ ಕಾರಣಗಳನ್ನು ಹುಡುಕಬೇಕು. ಮತ್ತು ಅದು ಮರುಕಳಿಸದಂತೆ ಮಾಡಲು ಸೂಕ್ತ ಮತ್ತು ಶಾಶ್ವತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದರೆ ಕೇಳಬೇಕಾದ ಪ್ರಶ್ನೆಗಳು ಇಂದಿನಾಚೆಗಿನ ದಲ್ಲ-ಇಂದಿನದ್ದೇ..... ಆದರೆ ಇನ್ನೂ ಆಳದ್ದು...! ಇದರಾಚೆಗಿನವು.. ಮಾತ್ರವಲ್ಲ ಇಂದಿನ ಮತ್ತು ಈಗಿನ ಬದುಕು ಮೈಕ್ರೋ ಕ್ರೆಡಿಟ್ ಹೆಸರಲ್ಲಿ ಇನ್ನಷ್ಟು ಹದಗೆಡುತ್ತಿರುವ ಬಗೆಗಿನದು..ಮತ್ತು ಮೈಕ್ರೊ ಕ್ರೆಡಿಟ್ ಹೆಸರಲ್ಲಿ ಸರ್ಕಾರಗಳು ಬಡಜನರ ಇಂದಿನ ಸಮಸ್ಯೆಗಳನ್ನು ಬಗೆಹರಿಸಬೇಕಾದ ಜವಾಬ್ದಾರಿಯಿಂದ ಹಿಂದೆ ಸರಿದು ಬಡವರಿಗೆ ಮ್ಯಾಕ್ರೋ ಸಮಸ್ಯೆಗಳನ್ನು ತಂದೊಡ್ಡುತ್ತಿರುವ ಬಗೆಗಿನದು..ಇಂಥ ಸಂದರ್ಭದಲ್ಲೇ ತನ್ನ ಮ್ಯಾಕ್ರೋ ನೀತಿಗಳಿಂದ ಬಡಜನರ ಇಂದಿನ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿರುವ ವಿಶ್ವಬ್ಯಾಂಕ್ ಮತ್ತು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ವ್ಯವಸ್ಥೆ ತಾನು ಮಾಡಿರುವ ಮ್ಯಾಕ್ರೋ ಅನಾಹುತಕ್ಕೆ ಈ ಮೈಕ್ರೊವನ್ನೇ ಪರಿಹಾರವೆಂದು ಪ್ರತಿಪಾದಿಸುತ್ತಿರುವ ಬಗೆಗಿನದು..

ಚಾರ್ವಾಕ

- ಶಿವಸುಂದರ್-

ಬಾಂಗ್ಲಾ ದೇಶದ ಗ್ರಾಮೀಣ ಮಹಿಳೆಯರ ಬದುಕು ಕಳೆದ ಎರಡು ದಶಕಗಳಿಂದ ಎಷ್ಟು ಬದಲಾಗಿದೆ? ಇಂದು ವಿಶ್ವಬ್ಯಾಂಕ್ ತನ್ನೆಲ್ಲಾ ವರದಿಗಳಲ್ಲಿ ಕೋಟ್ ಮಾಡುತ್ತಿರುವಂತೆ ಅಲ್ಲಿನ ಮಹಿಳೆಯರು ಈ ಸಾಲದಿಂದ ಸಣ್ಣ ಪುಟ್ಟ ವ್ಯವಹಾರಸ್ಥರಾಗಿ ಬದಲಾಗಿದ್ದಾರಾ? ಇದು ಮಹಿಳೆಯರಿಗೇ ಕೊಡುತ್ತಿರುವ ಸಾಲವಾದ್ದರಿಂದ ಇದು ಅವರಿಗೆ ಆರ್ಥಿಕ ಸ್ವಾವಲಂಬನೆ ಒದಗಿಸಿ ಅವರನ್ನು ವಿಮೋಚಿತರನ್ನಾಗಿ ಮಾಡಿದೆಯೆ? ಇವೆಲ್ಲವೂ ದೊಡ್ಡ ಪ್ರಮಾಣದಲ್ಲಿ ಆಗಿಲ್ಲ, ಆದ್ದರಿಂದಲೇ ಇದು ನಿರರ್ಥಕ ಎಂದು ವಾದಿಸುವುದು ಈ ಯೋಜನೆಯನ್ನು ಖಂಡಿಸಲೇಬೇಕೆಂಬ ಮೊಂಡುತನದಿಂದ ಮಾಡುವ ವಾದ. ಆದರೆ ಇಲ್ಲಿ ಕೇಳುತ್ತಿರುವ ಪ್ರಶ್ನೆ ಅದಲ್ಲ, ಇದನ್ನು ಇಡೀ ಜಗತ್ತಿಗೆ ಮಾಡೆಲ್ ಎಂದು ವಿಶ್ವಬ್ಯಾಂಕ್ ಘೋಷಿಸುತ್ತಿರುವ ಮಟ್ಟಿಗಾದರೂ ಅದು ಅಂಥ ಯಶೋಗಾಥೆಯಾಗಿದೆಯೆ? ಎಂಬುದು..

ಪ್ರಪಂಚದ ಅರ್ಥವ್ಯವಹಾರದ ಪ್ರಮುಖ ವಿಮರ್ಶಾತ್ಮಕ ಪತ್ರಿಕೆಯಾದ ಲೆಫ್ಟ್ ಬಿಸಿನೆಸ್ ಅಬ್ಸರ್‌ವರ್ ಎಂಬ ಪತ್ರಿಕೆಯ ಹಿರಿಯ ಸಂಪಾದಕಿ ಗಿನಾ ನೆಫ್ ಎಂಬುವರು ಕಳೆದ ಹತ್ತು ವರ್ಷಗಳಿಂದಲೂ ಬಾಂಗ್ಲಾದೇಶದ ಗ್ರಾಮಿಣ ಮಹಿಳೆಯರ ಮೇಲೆ ಈ ಮೈಕ್ರೋ ಕ್ರೆಡಿಟ್ಟಿನ ಪ್ರಭಾವವೇನೆಂಬುದರ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವರ ಅಧ್ಯಯನದ ಪ್ರಕಾರ "ಕಳೆದ 8 ವರ್ಷಗಳಿಂದ ಸಾಲ ಪಡೆಯುತ್ತಿರುವ ಬಾಂಗ್ಲಾದೇಶದ ಗ್ರಾಮೀಣ ಮಹಿಳೆಯರಲ್ಲಿ ಶೇ.55 ಭಾಗದಷ್ಟು ಮಹಿಳೆಯರು ಈಗಲೂ ತಮ್ಮ ಪೌಷ್ಟಿಕ ಅಗತ್ಯಗಳನ್ನೂ ಪೂರೈಸಿಕೊಳ್ಳಲಾಗುತ್ತಿಲ್ಲ, ಬಹಳಷ್ಟು ಮಹಿಳೆಯರು ತಮ್ಮ ಸಾಲವನ್ನು ಆಹಾರದ ಅಗತ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆಯೇ ವಿನಃ ವ್ಯವಹಾರದಲ್ಲಿ ತೊಡಗಿಸುತ್ತಿಲ್ಲ." ಅದೇ ರೀತಿ ವಿಶ್ವಬ್ಯಾಂಕ್ ಪ್ರಾಯೋಜಿತ ಅಧ್ಯಯನದ ಭಾಗವಾಗಿ ಈ ಮೈಕ್ರೋ ಸಾಲಗಳಿಂದ ಮಹಿಳೆಯರು ಎಷ್ಟರ ಮಟ್ಟಿಗೆ ಸಬಲರಾಗಿದ್ದಾರೆ ಮತ್ತು ಪಿತೃಸ್ವಾಮ್ಯದಿಂದ ಎಷ್ಟರಮಟ್ಟಿಗೆ ವಿಮೋಚಿತರಾಗಿದ್ದಾರೆ ಎಂಬ ಬಗೆಗಿನ ಮತ್ತೊಂದು ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದ ರೀತ ಸೇನ್ ಎನ್ನುವರು ತಮ್ಮ ಅಧ್ಯಯನದಲ್ಲಿ ಈ ಅಂಶಗಳನ್ನು ಕಂಡುಕೊಂಡಿದ್ದಾರೆ "ತಾವು ಅಧ್ಯಯನ ಮಾಡಿದ ಒಟ್ಟಾರೆ ಪ್ರಕರಣದಲ್ಲಿ ಶೆ.37ರಷ್ಟು ಮಹಿಳೆಯರು ಮಾತ್ರ ತಾವು ಪಡೆದ ಹಣದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದ್ದರು. ಶೆ. 22ರಷ್ಟು ಮಹಿಳೆಯರಿಗೆ ತಾವು ತಂದ ಹಣವನ್ನು ತಮ್ಮ ಗಂಡ ಮತ್ತು ಮಕ್ಕಳು ಹೇಗೆ ವೆಚ್ಚ ಮಾಡಿದರೆಂಬುದೇ ತಿಳಿದಿರಲಿಲ್ಲ." ಏಕೆಂದರೆ ಈ ಸಾಲ ಹಾಲಿ ಇರುವ ಶೋಷಕ ವ್ಯವಸ್ಥೆಯ ಪಿತೃಸ್ವಾಮ್ಯ ದಿಂದ ಚೌಕಟ್ಟನ್ನು ಬದಲಾಯಿಸುವುದಿಲ್ಲ, ಬದಲಿಗೆ ಆ ಹೊರೆಯೊಂದಿಗೆ ಮಾರುಕಟ್ಟೆಯ ಭರ್ಜಿಗೂ ಈಡಾಗುವಂತೆ ಮಾಡುತ್ತದೆ. ಅವರ ಅಧ್ಯಯನದ ಕೊನೆಯಲ್ಲಿ ಕಂಡುಕೊಂಡಿದ್ದೇನೆಂದರೆ ಗ್ರಾಮೀಣ ಹೆಣ್ಣು ಮಕ್ಕಳನ್ನು ಮತ್ತು ಅವರ ಶ್ರದ್ಧೆ ಮತ್ತು ವಿಶ್ವಸಾರ್ಹತೆಗಳನ್ನು ಬ್ಯಾಂಕುಗಳು ತಾವು ನೀಡುವ ಸಾಲದ ಹಣದ ಮರುಪಾವತಿಗೆ ನಂಬಲರ್ಹ ಮಧ್ಯವರ್ತಿಯನ್ನಾಗಿ ಬಳಸಿಕೊಂಡಿದ್ದಾರೆಯೇ ವಿನಃ ಇದರಲ್ಲಿ ನೊಬೆಲ್ ಆಶಯಗಳೇನೂ ಕಂಡುಬರಲಿಲ್ಲ ಎನ್ನುತ್ತಾರೆ. ಇದನ್ನು ವಿಶ್ವಬ್ಯಾಂಕ್ ಸಹಾ ನಿರಾಕರಿಸುವುದಿಲ್ಲ. ತನ್ನ ಇತ್ತೀಚಿನ ವಿಶ್ವ ಅಭಿವೃದ್ಧಿ ವರದಿಯಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳನ್ನೂ ಜಾಗತಿಕ ಮಾರುಕಟ್ಟೆಯ ತೆಕ್ಕೆಗೆ ತರಲು ಮೈಕ್ರೋ ಕ್ರೆಡಿಟ್ ಒಂದು ಉತ್ತಮ ಸಾಧನ ಎಂದು ಬಣ್ಣಿಸುತ್ತದೆ.

ಇದೆಲ್ಲಾ ಹೀಗೆ ಇದ್ದರೂ ಈ ಜಾಗತಿಕ ಮಾರುಕಟ್ಟೆಯ ಚೌಕಟ್ಟಿನೊಳಗೆ ಬಂದರೂ ಬಡಜನತೆಗೆ ಒಳ್ಳೆಯದಾಗು ವುದಾದರೆ ಸೈದ್ಧಾಂತಿಕ ಕಾರಣಗಳಿಗೆ ಮಾತ್ರ ಅದನ್ನು ವಿರೋಧಿಸಬೇಕೇಕೆ? ನಿಜ. ಹಾಗೆ ಮಾಡಿದಲ್ಲಿ ಅದೂ ಒಂದು ಮೂಲಭೂತವಾದವೇ.

ಆದರೆ ವಾಸ್ತವ ಹಾಗಿಲ್ಲ. ಮೈಕ್ರೊ ಕ್ರೆಡಿಟ್ಟಿಗೆ ಬದಲಾಗಿ ಬಡಜನತೆಗೆ ಮಾಕ್ರೋ(ದೊಡ್ಡ) ಮಟ್ಟದ ಪ್ರಭುತ್ವ ಬೆಂಬಲ ಹಿಂದೆ ಸರಿಯುತ್ತಿದೆ. ಹಲವಾರು ಕಡೆ ಈ ಮೈಕ್ರೋ ಕ್ರೆಡಿಟ್ಟು(ಸ್ತ್ರೀ ಶಕ್ತಿ..ಇತ್ಯಾದಿ) ಮತ್ತು ಅದನ್ನು ಅನುಸರಿಸುವ ಸಂಸ್ಥೆಗಳಿಗೆ ಇತರ ಜವಾಬ್ದಾರಿಯನ್ನು ಹೊರಿಸಿ ಸರ್ಕಾರಗಳು ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿವೆ. ಬ್ಯಾಂಕುಗಳು ಕಡಿಮೆ ದರದಲ್ಲಿ ಬಡಜನತೆಗೆ, ರೈತ ಕುಟುಂಬಗಳಿಗೆ ಕೊಡಬೇಕಾದ ಕಡಿಮೆ ದರದ ಸಾಲವನ್ನು ಕ್ರಮೇಣ ಕಡಿಮೆ ಮಾಡುತ್ತಿದೆ. ತಾನು ಗ್ರಾಮಿಣ ಕ್ಷೇತ್ರಕ್ಕೆ ಕೊಡಬೇಕಾದ ಸಾಲವನ್ನೆಲ್ಲಾ ಸರಾಸರಿ ಕನಿಷ್ಟ ಶೇ.20-24ರಷ್ಟು ಬಡ್ಡಿ ಕಟ್ಟುವ ಈ ಮೈಕ್ರೊ ಯೋಜನೆಗಳಿಗೆ ವ್ಯಯಿಸಿ ಲಾಭವನ್ನೇ ಮಾಡುತ್ತಿವೆ. ಹಲವಾರು ಕಡೆ ಅರ್ಹ ಫಲಾನುಭವಿ ಇದ್ದರೂ ಕಡಿಮೆ ದರದಲ್ಲಿ ಸಾಲನೀಡದೆ, ಸಾಲ ಮರುಪಾವತಿ ಖಾತರಿ ಇರುವ ಇದರ ಮೂಲಕವೇ ಹಣವನ್ನು ಹರಿಯಬಿಡುತ್ತದೆ. ಏಕೆಂದರೆ ಈ ಯೋಜನೆಯ ಪ್ರಕಾರ ಸಾಲ ನೀಡಿಕೆಗೆ ಪ್ರಾರಂಭದಲ್ಲಿ ಯಾರೂ ಕೌಂಟರ್ ಗ್ಯಾರಂಟಿ ನಿಲ್ಲಬೇಕಿಲ್ಲ. ಆದರೆ ಅವರು ಸಾಲ ಕೊಡುವುದು ಗುಂಪಿಗೇ. ಹೊರತು ವ್ಯಕ್ತಿಗಲ್ಲ. ಒಂದು ವೇಳೆ ಗುಂಪಿನ ಒಬ್ಬ ವ್ಯಕ್ತಿ ಸಾಲ ಮರುಪಾವತಿ ನಿಲ್ಲಿಸಿದರೆ ಇಡಿ ಗುಂಪಿಗೆ ಸಾಲ ನಿಲ್ಲುತ್ತದೆ. ಆದ್ದರಿಂದ ಸಾಲ ಮರುಪಾವತಿಗೆ ಒಬ್ಬ ಕೌಂಟರ್ ಗ್ಯಾರಂಟಿಯಲ್ಲ, ಇಡಿ ಗುಂಪೇ ಗ್ಯಾರಂಟಿಯಾಗುತ್ತದೆ. ಹೀಗಾಗಿ ಬ್ಯಾಂಕುಗಳು ಹಾಕುವ ಹಣಕಾಸು ಬಂಡವಾಳಕ್ಕೆ ನಿಯತ್ತಾಗಿ ದೊಡ್ಡ ಬಡ್ಡಿಯ ಜೊತೆಗೆ ಸಾಲ ಮರುಪಾವತಿಯಾಗುತ್ತದೆ. ಆದ್ದರಿಂದಲೇ ಈ ವ್ಯವಸ್ಥೆಯನ್ನೂ ಒಬ್ಬ ಅರ್ಥಶಾಸ್ತ್ರಜ್ಞ "ಅತಿ ಹಿಂದುಳಿದ ಪ್ರದೇಶಗಳನ್ನು ಮತ್ತು ಅತಿ ದುರ್ಬಲ ವರ್ಗಗಳನ್ನು ಹಣಕಾಸು ಬಂಡವಾಳದ ಸುಲಿಗೆಯಡಿ ತರುವ ವ್ಯವಸ್ಥೆ" ಎಂದು ಕರೆಯುತ್ತಾನೆ. ಮತ್ತೊಂದು ಕಡೆ ಸರ್ಕಾರ ತನ್ನೆಲ್ಲಾ ಸಾಮಾಜಿಕ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿರುವ ಈ ಹೊತ್ತಿನಲ್ಲಿ "ಮೈಕ್ರೋ ಕ್ರೆಡಿಟ್ ಎಂಬ ಈ ವ್ಯವಸ್ಥೆ ಸಾರ್ವಜನಿಕ ಬೆಂಬಲ ವ್ಯವಸ್ಥೆಯ ಖಾಸಗೀಕರಣ" ಎಂದು ಗಿನಾ ನೆಫ್ ಬಣ್ಣಿಸುತ್ತಾರೆ.

ಆದ್ದರಿಂದಲೇ ಮೈಕ್ರೋ ಕ್ರೆಡಿಟ್ ಬಗ್ಗೆ ಆಗಬೇಕಿರುವ ಚರ್ಚೆ ಸಣ್ಣ ಸಾಲದಿಂದ ಬಡಜನತೆಯ ತುರ್ತುಕಷ್ಟಗಳು ಬಗೆಹರಿಯ ಲಾರವೇ ಎಂಬುದಲ್ಲ. ಏಕೆಂದರೆ ಅದನ್ನು ವಿರೋಧಿಸುವವರು ಮುಠ್ಠಾಳರು ಮಾತ್ರ. ಜನ ಅದಕ್ಕೆಂದೇ ಪಾರಂಪರಿಕವಾಗಿ ಚೀಟಿ, ಕೈ ಸಾಲ ಇನ್ನಿತ್ಯಾದಿ ದಾರಿಗಳನ್ನು ಕಂಡುಕೊಂಡಿದ್ದಾರೆ. ಆದರೆ ಸರ್ಕಾರ ಮತ್ತು ಯೂನಸರ ಗ್ರಾಮಿಣ ಬ್ಯಾಂಕ್ ಯೋಜನೆ ಹಾಗೂ ಈ ಮೈಕ್ರೋ ಕ್ರೆಡಿಟ್ ಯೋಜನೆ ಆ ರೀತಿಯದ್ದಲ್ಲ. ಅಷ್ಟೆ. ಅದನ್ನು ದೊಡ್ಡ ರೀತಿಯಲ್ಲಿ ವಿಶ್ವಬ್ಯಾಂಕ್ ಹಾಗೂ ಇನ್ನಿತರ ಸಾಮ್ರಾಜ್ಯಶಾಹಿ ಶಕ್ತಿಗಳು ಉತ್ತೇಜಿಸುತ್ತಿರುವುದು ಅದನ್ನೇ ಪರ್ಯಾಯ ಎಂದು ಮುಂದಿಡುತ್ತಿರುವುದು ಬಡಜನತೆಯ ತುರ್ತು ಕಷ್ಟಗಳನ್ನು ಬಗೆಹರಿಸು ವುದಕ್ಕಲ್ಲ. ಅಸಲು ಈ ಸಾಲವಿರುವುದು ಬಡಜನತೆ ತಮ್ಮ ತುರ್ತು ಕಷ್ಟಗಳನ್ನು ತೀರಿಸಿಕೊಳ್ಳಲೆಂದೇನಲ್ಲ. ಬದಲಿಗೆ ಅವರನ್ನು ಪೂರ್ವನಿಗದಿತ ಯಾವುದಾದರೂ ಸಣ್ಣ ವ್ಯವಹಾರದಲ್ಲಿ ತೊಡಗಿಸುವುದು ಅಂದರೆ ಮಾರುಕಟ್ಟೆಯ ಭಾಗವಾಗಿ ಮಾಡುವುದು ಇದರ ಉದ್ದೇಶ. ಆದರೆ ಮಾರುಕಟ್ಟೆಯಲ್ಲಿರುವ ದೈತ್ಯ ಶಕ್ತಿಗಳ ವಿರುದ್ಧ ಈ ಸಣ್ಣವರಿಗೆ ಯಾವುದೇ ರಕ್ಷಣಾ ಜಾಲವನ್ನು ಸರ್ಕಾರ ಒದಗಿಸಿ ಕೊಡುವುದಿಲ್ಲ, ಹೀಗಿರುವಾಗ ಮೈಕ್ರೋ ಕ್ರೆಡಿಟ್ಟೆಂಬ ಹಿಡಿಯಿಲ್ಲದ ಕತ್ತಿಯೊಂದಿಗೆ, ಸರ್ಕಾರಿ ಬೆಂಬಲದ ಗುರಾಣಿ ಇಲ್ಲದೇ ಮಾರುಕಟ್ಟೆಗೆ ಬಂದುಬೀಳುವ ಗ್ರಾಮೀಣ ಬಡ ಮಹಿಳೆ ಗೆಲ್ಲುವಳೇ? ಅಥವಾ ಈ ಸಾಲಜಾಲದ ಪ್ರಕ್ರಿಯೆಯಲ್ಲಿ ಜಾಗತಿಕ ಹಣಕಾಸು ಬಂಡವಾಳಕ್ಕೆ ಇನ್ನಷ್ಟು ಲಾಭಗಳಿಕೆಯ ಸಾಧನವಾಗಿ ಬಿಡುವಳೇ? ಇದು ಚರ್ಚೆಯಾಗಬೇಕಾದ ಸಂಗತಿ. ■

No Comments




"ಇಂಗ್ಲಿಷ್ ವಿಷಯದಲ್ಲಿ ಹೊರಟ್ಟಿ ಆಮಿಷಕ್ಕೆ ಮಣಿದಿದ್ದಾರೆ"

-ಚಂಪಾ

"ನಮ್ಮ ಗ್ರಾಮದಲ್ಲಿ ಬಂದು ವಾಸ್ತವ್ಯ ಹೂಡಿ ಎಂದು ಹಲವಾರು ಗ್ರಾಮಗಳಿಂದ ಅರ್ಜಿಗಳು ಬರುತ್ತಿವೆ"

-ಹೆಚ್.ಡಿ.ಕುಮಾರಸ್ವಾ

"ಕರ್ಲಾನ್ ಬೆಡ್ಡು, ಸೊಳ್ಳೆ ಪರದೆ, ಅಡುಗೆ ಭಟ್ಟ-ಇದೆ ಹಳ್ಳಿ ವಾಸ್ತವ್ಯ?"



-ಸಿದ್ಧರಾಮಯ್ಯ.

"ಕವಿಗಳ ನಡುವೆ ಹೋಲಿಕೆ ಸಲ್ಲ"

-ವೀರಪ್ಪ ಮೊಯಿಲಿ.

"ಮಾರುಕಟ್ಟೆ ಶಕ್ತಿಗಳೇ ನಿಜವಾದ ಶುಲ್ಕ ನಿಯಂತ್ರಕರು"

-ಬರಲಿರುವ ಶಿಕ್ಷಣ ಮಂತ್ರಿಗಳ ಸಭೆಯ
ಕರ್ನಾಟಕ ಸರ್ಕಾರ ಮಂಡಿಸಲಿರುವ ವಾ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಮುಖ್ಯಮಂತ್ರಿಗೆ ನನ್ನನ್ನು ಕಂಡರೆ ಕನಸಿನಲ್ಲೂ ಭಯ

-ಸಿದ್ಧರಾಮ

"ನಾನು ನಿದ್ದೇನೇ ಮಾಡಲ್ಲ..ಇನ್ನು ಕನಸೆಲ್ಲಿಂದ ಬರಬೇಕು

-ಕುಮಾರಸ್ವಾ



"ಒಂದನೇ ತರಗತಿಯಿಂದ ಕನ್ನಡ ಕಲಿಸುವುದರಿಂದ ಯಾವುದೇ ಅನಾಹುತವೂ ಆಗುವುದಿಲ್ಲ. ಯಾವುದೇ ಪವಾಡವೂ ಸಂಭವಿಸುವುದಿಲ್ಲ"

-ಪೂರ್ಣಚಂದ್ರ ತೇಜಸ್ವಿ



"ನನ್ನ ಮದುವೆ ದಿನಾಂಕವನ್ನು ದೇವರೇ ನಿರ್ಧರಿಸುತ್ತಾನೆ"

-ಐಶ್ವರ್ಯ ರೈ.

"ಚಾಮುಂಡೇಶ್ವರಿಯಲ್ಲಿ ದೇವೇಗೌಡರೇ ನಿಂತರೂ ಗೆಲ್ಲಲಾಗದಂತೆ ಮಾಡುತ್ತೇವೆ"

-ಜನಾರ್ಧನ ಪೂಜಾ

ಸತ್ಯವಾಕ್ಯ:

"ಕಳೆದ 8 ವರ್ಷಗಳಿಂದ ಸಾಲ ಪಡೆಯುತ್ತಿರು ಬಾಂಗ್ಲಾದೇಶದ ಗ್ರಾಮೀಣ ಮಹಿಳೆಯರಲ್ಲಿ ಶೇ ಭಾಗದಷ್ಟು ಮಹಿಳೆಯರು ಈಗಲೂ ತಮ್ಮ ಪೌ ಅಗತ್ಯಗಳನ್ನೂ ಪೂರೈಸಿಕೊಳ್ಳಲಾಗುತ್ತಿಲ್ಲ. ಬಹಳ ಮಹಿಳೆಯರು ತಮ್ಮ ಸಾಲವನ್ನು ಆಹಾರದ ಅಗತ್ಯಗ ಬಳಸಿಕೊಳ್ಳುತ್ತಿದ್ದಾರೆಯೇ ವಿನಃ ವ್ಯವಹಾರದಲ್ಲಿ ತೊಡಗಿ ತ್ತಿಲ್ಲ."

-ಗಿನಾ ನೆಫ್, ಲೆ
ಬಿಸಿನೆಸ್ ಅಬ್ಸರ್ವರ್, ಬಾಂಗ್ಲಾದೇ
ಗ್ರಾಮೀಣ ಬ್ಯಾಂಕ್ ಬಗೆಗಿನ ಅಧ್ಯಯನದ

ವಾರದ ಸುಳ್ಳು

"ಇತಿಹಾಸದಲ್ಲಿ ಒಬ್ಬ ಹಿಂದೂ ದೊರೆಯೂ ಮಸೀದಿಯನ್ನು ನಾಶ ಪಡಿಸಿದ ಉದಾಹರಣೆಯಿಲ್ಲ"



-ಚಿದಾನಂದಮೂರ್ತಿ,
ಓದುಗರ ಪತ್ರದಲ್ಲಿ.

ಗಾದೆಗಳು ದೀಪಗಳ ಹಾಗೆ. ಮಾನ ಮನಸ್ಸುಗಳು ತಮ್ಮ ಬೇರುಗಳಿಂ ಬೇರ್ಪಟ್ಟು ವಿಸ್ಮೃತಿಯ ಕತ್ತಲೆಗೆ ಸರಿಯ ತ್ತಿದ್ದಂತೆ ಇವು ತಮ್ಮ ತಾತ್ವಿಕ ಬೆಳಕಿನಿಂ ಬೇರಿನ ದಾರಿಯನ್ನು ತೋರಿಸುತ್ತವೆ. 'ತ ಚಿಕ್ಕದು ಮಾಡು; ತಪ್ಪ ದೊಡ್ಡದು ಮಾಡು' ಎಂಬ ಗಾದೆ ಮಾನವ ವರ್ತನೆಯ ಮೂಲವನ್ನು ನಿರ್ದೇಶಿಸುತ್ತದೆ. ಇಂಥ ಕೆಲವು ಗಾದೆಗಳೇ ಈ ಸಲದ ಸೂಕ್ತಿಗಳಾಗಿವೆ. ಇವುಗಳನ್ನು ನಮ ಸಂಗ್ರಹಿಸಿ ಕೊಟ್ಟ ಮಹೇಶ್‌ಕುಮಾರ್‌ ನಮ್ಮ ಧನ್ಯವಾದಗಳು.



-ಮೂ

ಜನರನ್ನು ತೃಪ್ತಿಪಡಿಸಲು ಮರಣದಂಡನೆಯೇ

ಕಂಡಹಾಗೆ



ಮೊಹಮ್ಮದ್ ಅಫಜಲ್ ಗುರು ಒಬ್ಬ ದೇಶದ್ರೋಹಿ. ಆತನನ್ನು ಗಲ್ಲಿಗೇರಿಸಲೇ ಬೇಕು. ಹಾಗೆ ಮಾಡುವ ಮೂಲಕ ಭಯೋತ್ಪಾದಕರಿಗೂ; ಮಾನವ ಹಕ್ಕು, ನ್ಯಾಯ, ಮರಣದಂಡನೆ ಮೃಗೀಯ ಎಂದೆಲ್ಲ ಮಾತಾಡುವ ತಲೆ ಕೆಟ್ಟ ಎಡಪಂಥೀಯ 'ದೇಶದ್ರೋಹಿ'ಗಳಿಗೂ ಒಂದು ಪಾಠ ಕಲಿಸಿದಂತಾಗುತ್ತದೆ.....

ಹೀಗೆ ಸಾಗುತ್ತಿದೆ 'ದೇಶಪ್ರೇಮಿ'ಗಳ ತರ್ಕ. ರಾಜಕೀಯ ಪಕ್ಷಗಳ ನಾಯಕರ ಹಠ, ದೇಶಪ್ರೇಮವನ್ನು ಉಕ್ಕಿ ಹರಿಸುವ ಜನರ ವಾದ. "ನಮ್ಮ ಸಂಸತ್ ಭವನದ ಮೇಲೆ ದಾಳಿ ಮಾಡಿದವರಿಗೆ ಯಾಕ್ರೀ ಕ್ಷಮೆ?" ಎಂದು ಕೇಳುವ ಜನರಿಗೆ ಮರಣದಂಡನೆ ಎಂಬುದು ಅಮಾನುಷ ಕ್ರಿಯೆ ಎಂಬುದಾಗಲೀ, ಅಫ್ಜಲ್ ಗುರುವಿನ ಕೃತ್ಯ ಕುರಿತು ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿನ ಲೋಪದೋಷಗಳಾಗಲೀ, ಕಾಶ್ಮೀರದಲ್ಲಿ ಭಾರತದ ಸೈನ್ಯ ಮತ್ತು ಪೊಲೀಸರು ನಡೆಸುತ್ತಿರುವ ದೌರ್ಜನ್ಯವಾಗಲೀ, ಬಿಜೆಪಿ ಎಂಬ ಕಪಟ ಪಕ್ಷದ ಷಡ್ಯಂತ್ರಗಳಾಗಲೀ ಅರ್ಥವಾಗುವುದಿಲ್ಲ.

ಪೊಲೀಸರು ಹೇಳುವುದೆಲ್ಲ ಸತ್ಯ ಎಂದು ನಂಬಿರುವ ವರದಿಗಾರರಿರುವಾಗ, ಸೆನ್ಸೇಷನಲ್ ಹೆಡ್‌ಲೈನ್ ಸಿಕ್ಕರೆ ಸಾಕು ಎನ್ನುವ ಮಾಧ್ಯಮಗಳಿರುವಾಗ, ಮುಸ್ಲಿಮರನ್ನು ಕಂಡರೆ ಭಯೋತ್ಪಾದಕರನ್ನೇ ಕಂಡಂತೆ ಬರೆಯುವ ಪತ್ರಕರ್ತರಿರುವಾಗ, ನಮ್ಮ ಮುಖ್ಯವಾಹಿನಿಗಳಲ್ಲಿ ಸತ್ಯ ಮರೆಯಾಗಿ ಸುಳ್ಳುಗಳೇ ರಾರಾಜಿಸುವಾಗ, ಅದನ್ನೇ ನಂಬಿದ ಜನ "ಅಂಥವರಿಗ್ಯಾಕ್ರೀ ಕ್ಷಮೆ?" ಎಂದು ಕೇಳಿದರೆ ಅದು ಅವರ ತಪ್ಪಲ್ಲ. ಬದಲಾಗಿ ಈ ವ್ಯವಸ್ಥೆ ನಡೆಸುವ ಕುತಂತ್ರದ ಪಾಲಾಗಿರುವ ಮಾಧ್ಯಮಗಳ ತಪ್ಪು. ಅದರಲ್ಲೂ ದೇಶಪ್ರೇಮ, ಭದ್ರತೆ, ಭಯೋತ್ಪಾದನೆ ಮತ್ತು ಮುಸ್ಲಿಂ.... ಇವುಗಳು ಸೇರಿದರಂತೂ ಸತ್ಯ, ಸಾಕ್ಷ್ಯಾಧಾರಗಳು, ನ್ಯಾಯ, ಮಾನವೀಯತೆ ಎಂಬುದೆಲ್ಲ ಮಾಯವಾಗಿ ಬರೀ ಟೊಳ್ಳು ದೇಶಪ್ರೇಮ ಉಳಿಯುತ್ತದೆ. ಅಂದಹಾಗೆ ಸತ್ಯ, ನ್ಯಾಯ, ಮಾನವೀಯತೆ ಇಲ್ಲದ ದೇಶವನ್ನು ಪ್ರೀತಿಸುವುದಾದರೂ ಹೇಗೆ ಎಂಬ ಪ್ರಶ್ನೆ ಮಾತ್ರ ಅವರನ್ನೆಲ್ಲ ಕಾಡುವುದೇ ಇಲ್ಲ).


ಸಂಸತ್ ಭವನದ ಮೇಲಿನ ದಾಳಿ, ಪೊಲೀಸರ ಕಾರ್ಯತಂತ್ರ, ಅಫಜಲ್ ಗುರುವಿನ ವಿಚಾರಣೆ, ಈಗ ಆತನ ಸುತ್ತ ನಡೆದಿರುವ ವಾದವಿವಾದಗಳ ಬಗ್ಗೆ ಮೊನ್ನೆ 'ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯಲ್ಲಿನ ನಿರ್ಮಲಾಗ್ನುಶ್ ಮುಖರ್ಜಿಯವರ ಲೇಖನ, ಹಾಗೂ 'ಔಟ್‌ಲುಕ್'ನಲ್ಲಿ ಅರುಂಧತಿ ರಾಯ್‌ರವರು ಬರೆದಿರುವ ಲೇಖನವನ್ನು ಆಧರಿಸಿ ಇಲ್ಲಿ ಹಲವು ಮುಖ್ಯ ಅಂಶಗಳನ್ನು ನೀಡಲು ಬಯಸುತ್ತೇನೆ.

(ಹಾಗೆ ಮಾಡುವ ಮುನ್ನ ಒಂದು ಮಾತು. ಇವತ್ತು ಎಂತಹ ಪರಿಸ್ಥಿತಿ ಇದೆ ಎಂದರೆ, ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡಿದರೆ "ಹೋಗಿ ಸೌದಿ ಅರೇಬಿಯಾದಲ್ಲಿ ಹೇಗಿದೆ ನೋಡಿ" ಅನ್ನುವವರಿದ್ದಾರೆ. ಎಡಪಂಥೀಯ ನಿಲುವು ತಾಳಿದರೆ "ಇವತ್ತು ಚೈನಾದಲ್ಲಿ ಏನಾಗ್ತಿದೆ ಗೊತ್ತಾ?" ಅಂತಾರೆ. ಅಲ್ಪಸಂಖ್ಯಾತರ ಬಗ್ಗೆ ಮಾತು ಎತ್ತಿದರೆ "ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರಿಗೆ ಯಾವ ಸ್ಥಾನ ಇದೆ ಅಂತ ತಿಳಿದುಕೊಳ್ಳಿ" ಅಂತ ಹೇಳ್ತಾರೆ. ಆದರೆ ಇವತ್ತು ಸೌದಿ ಅರೇಬಿಯಾ, ಚೈನಾ, ಪಾಕಿಸ್ತಾನದಂತಹ ದೇಶಗಳು ನಮಗೆ ಮಾದರಿಯಲ್ಲ, ಮಾನದಂಡಗಳೂ ಅಲ್ಲ, ಬದಲಾಗಿ ನಮ್ಮ ಭಾರತದ ಸಂವಿಧಾನದಲ್ಲೇ ಅಡಗಿರುವ ಆಶಯಗಳು ನಮ್ಮ ಮಾನದಂಡಗಳು. ಇದಕ್ಕಿಂತ ದೇಶಭಕ್ತಿ ಇರಲಿಕ್ಕಿಲ್ಲ ಎಂದುಕೊಂಡಿದ್ದೇನೆ.)

ಡಿಸೆಂಬರ್ 13, 2001 ರಂದು ಭಾರತದ ಸಂಸತ್ ಭವನದ ಮೇಲೆ ಐದು ಜನ ದಾಳಿ ಇಟ್ಟರು. ಅವತ್ತು ನಡೆದ ಬಂದೂಕುಗಳ ಅರ್ಭಟದಲ್ಲಿ ಆ ಐವರು, ಎಂಟು ಜನ ಪೊಲೀಸರು, ಒಬ್ಬ ಮಾಲಿ: ಒಟ್ಟು 14 ಜನ ಸತ್ತರು. ಅದೆಷ್ಟೋ ಮಾಮೂಲಿ ಕೊಲೆ ಕೇಸುಗಳನ್ನು ವರ್ಷಗಟ್ಟಲೆ ತನಿಖೆ ಮಾಡಲಾಗದೆ ಇರುವ ಪೊಲೀಸರು ಈ ಕೃತ್ಯವನ್ನು ಕೇವಲ ಎರಡು ದಿನಗಳಲ್ಲಿ ಬೇಧಿಸಿ, ಅದರಲ್ಲಿ ಹನ್ನೆರಡು ಜನರ ಶಾಮೀಲಿತ್ತೆಂದು ಹೇಳಿ, ನಾಲ್ಕು ಜನರನ್ನು ಬಂಧಿಸಿದರು.

ಅವರ ಈ 'ಕ್ಷಿಪ್ರ ಕಾರ್ಯಾಚರಣೆ'ಗೆ ಭೇಷ್ ಎನ್ನಬಹುದಿತ್ತು ಅದರಲ್ಲಿ ರಾಜಕೀಯ ಕುತಂತ್ರ, ಪೊಲೀಸರ ಷಡ್ಯಂತ್ರ, ಇಡೀ ವ್ಯವಸ್ಥೆಯ ಕುಮ್ಮಕ್ಕು ಇರದಿದ್ದರೆ! ಉದಾಹರಣೆಗೆ, ಈ ಘಟನೆಯ ಒಬ್ಬ ಆರೋಪಿ, ಪ್ರಾಧ್ಯಾಪಕ ಎಸ್.ಎ.ಆರ್. ಗಿಲಾನಿಯವನ್ನು ದೆಹಲಿ ಪೊಲೀಸರು ಬಂಧಿಸಿದ್ದು ಡಿಸೆಂಬರ್ 15 ರಂದು ಬೆಳಗ್ಗೆ 10 ಗಂಟೆಗೆ. ಆದರೆ ಪೊಲೀಸರೇ ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯಾಧಾರಗಳ ಪ್ರಕಾರ ಗಿಲಾನಿ ನೀಡಿದ ಹೇಳಿಕೆಯನ್ನು ಆಧರಿಸಿ ಇನ್ನಿಬ್ಬರು ಆರೋಪಿಗಳಾದ ಶೌಕತ್ ಮತ್ತು ಅಫ್ಜಲ್‌ಗಳನ್ನು ಹುಡುಕಿರಿ ಎಂದು ಅವರು ಶ್ರೀನಗರದ ಪೊಲೀಸರಿಗೆ ವೈರ್‌ಲೆಸ್ ಮೆಸೇಜ್ ಕಳುಹಿಸಿದ್ದು ಅದೇ ದಿನದ ಬೆಳಗಿನ ಜಾವ 5.45 ಕ್ಕೆ. ಇನ್ನೂ ಬಂಧನಕ್ಕೆ ಒಳಗಾಗದಿದ್ದ, ಹೇಳಿಕೆಯನ್ನೇ ನೀಡಿರದಿದ್ದ ಗಿಲಾನಿಯವರು "ನೀಡಿದ ಮಾಹಿತಿ"ಯನ್ನು ಆಧರಿಸಿ ಪೊಲೀಸರು ಹೇಗೆ ಅವರಿಬ್ಬರಿಗಾಗಿ ಹುಡುಕಾಟ ಶುರು ಮಾಡಿದರು? ಈ ಮೂವರ ಬಂಧನ ಪೂರ್ವಯೋಜಿತ ಪ್ಲಾನ್ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ? ಈ ಅಂಶ ಕೂಡ ಕೋರ್ಟಿನ ಗಮನಕ್ಕೆ ಬಂದರೂ ಪೊಲೀಸರು ಯಾಕೆ ಸುಳ್ಳು ಹೇಳಿದರು ಎಂಬುದನ್ನು ವಿಚಾರಿಸಲೇ ಇಲ್ಲ.

ಪೊಲೀಸರ ಪ್ರಕಾರ ಅಫ್ಜಲ್ ಪರಾರಿ ಆಗುತ್ತಿದ್ದಾಗ ಅವನನ್ನು ಬಂಧಿಸಿದರಲ್ಲದೆ ಆತನಿಂದ ಒಂದು



ಲ್ಯಾಪ್‌ಟಾಪ್, ಮೊಬೈಲ್ ಫೋನ್ ಮತ್ತು ಹತ್ತು ಲಕ್ಷ ರೂಪಾಯಿಗಳನ್ನು ವಶಪಡಿಸಿಕೊಂಡರು. ಆದರೆ ಅಫ್ಜಲ್ ಪ್ರಕಾರ ಆತ ಶ್ರೀನಗರದ ಬಸ್‌ಸ್ಟ್ಯಾಂಡಿನಲ್ಲಿ ನಿಂತಿದ್ದಾಗ ಪೊಲೀಸರು ಬಂಧಿಸಿದರಲ್ಲದೆ, ಅವನ ಬಳಿ ಲ್ಯಾಪ್‌ಟಾಪ್, ಮೊಬೈಲ್ ಇರಲಿಲ್ಲ. ಆದರೂ ಅವನಿಂದ 'ವಶಪಡಿಸಿಕೊಂಡ' ಲ್ಯಾಪ್‌ಟಾಪ್ ಪೊಲೀಸರ ಕೈ ಸೇರಿತು ಮಾತ್ರವಲ್ಲ ಅದನ್ನು ಒಂದು ತಿಂಗಳ ನಂತರ 'ಸೀಲ್' ಮಾಡಿದ್ದ ಮೇಲೂ ಯಾರೋ ಅದರಲ್ಲಿನ 'ಮಾಹಿತಿ'ಯನ್ನು ಪಡೆದರು. ಇದು ಸಾಧ್ಯವಾಗಿದ್ದು ಹೇಗೆ ಮತ್ತು ಯಾರಿಗೆ? ಕಂಪ್ಯೂಟರ್ ಸಿಕ್ಕಿದ್ದು ಬಂಧನದಲ್ಲಿದ್ದ ಅಫ್ಜಲ್‌ಗೊ, ಅಥವಾ ಆತನನ್ನು ಬಂಧಿಸಿದ್ದ ಪೊಲೀಸರಿಗೋ?


ಇನ್ನು ಶೌಕತ್, ಅಫ್ಜಲ್, ಗಿಲಾನಿ ಮತ್ತು ಮೊಹ್ಮದ್ (ಹತನಾದ ದಾಳಿಕೋರ) ಸಂಪರ್ಕದಲ್ಲಿದ್ದರು ಎಂದು 'ಸಾಬೀತು' ಪಡಿಸಿದ ಮೊಬೈಲ್ ಫೋನ್‌ನ ರೆಕಾರ್ಡ್‌ಗಳ ಬಗ್ಗೆ ಒಂದಿಷ್ಟು ಹೇಳಲೇಬೇಕು. ನ್ಯಾಯಾಲಯದ ಮುಂದೆ ಪೊಲೀಸರು ಸಲ್ಲಿಸಿದ "ಕರೆಗಳ ರೆಕಾರ್ಡ್"ಗಳು ಅಧಿಕೃತ ದಾಖಲೆಗಳಾಗಿರಲಿಲ್ಲ ಮಾತ್ರವಲ್ಲ, ಅವುಗಳಲ್ಲೇ ಹಲವಾರು ವಿರೋಧಾಭಾಸಗಳಿದ್ದವು. ಉದಾಹರಣೆಗೆ ಅವರ ದಾಖಲೆಗಳ ಪ್ರಕಾರ ಒಂದೇ ಸಮಯದಲ್ಲಿ ಒಂದೇ ಸಿಮ್‌ಕಾರ್ಡನ್ನು ಉಪಯೋಗಿಸಿ ಎರಡು ಬೇರೆ ಬೇರೆ ಹ್ಯಾಂಡ್‌ಸೆಟ್‌ಗಳಿಂದ ಎರಡು ಬೇರೆ ಬೇರೆ ಫೋನ್‌ಗಳಿಗೆ ಕರೆ ನೀಡಲಾಗಿದೆ! ಇಂತಹ ಚಮತ್ಕಾರ ಹೇಗೆ ಸಾಧ್ಯವಾಯಿತು?

ಅಷ್ಟೇ ಅಲ್ಲ, ಅಫ್ಜಲ್‌ನ ಮೊಬೈಲ್ ನಂಬರ್ ಅನ್ನು ದಾಳಿ ಇಟ್ಟ ಐವರೂ ತಮ್ಮ ನಕಲಿ ಐಡಿ ಕಾರ್ಡ್‌ನ ಹಿಂಭಾಗದಲ್ಲಿ ಬರೆದುಕೊಂಡಿದ್ದರಂತೆ. ಅಲ್ಲಾ, ಭಯೋತ್ಪಾದಕರ ಗುಂಪೊಂದು ತಾವು ಸಾಯುತ್ತೇವೆ ಎಂದು ಗೊತ್ತಿದ್ದರೂ ತಮ್ಮ ಮತ್ತು ತಮ್ಮ ಜಾಲದ ಜಾತಕವನ್ನು ಬರೆದಿಟ್ಟುಕೊಂಡಿರುತ್ತಾರಾ? ಅಂದಹಾಗೆ, ಈ ಐಡಿ ಕಾರ್ಡುಗಳನ್ನು ಪೊಲೀಸರು ಎಂದೂ ಸೀಲ್ ಮಾಡಿರಲಿಲ್ಲವಾದ್ದರಿಂದ, ಅಫ್ಜಲ್‌ನ ಬಂಧನದ ನಂತರ ಆ ಮೊಬೈಲ್ ನಂಬರ್ ಆ ಕಾರ್ಡುಗಳ ಮೇಲೆ ಪ್ರತ್ಯಕ್ಷವಾಗಿರಬಹುದಲ್ಲಾ?

ಇನ್ನು ಅಫ್ಜಲ್ ಪೊಲೀಸರಿಗೆ ನೀಡಿದ ತಪ್ಪೊಪ್ಪಿಗೆ ಹೇಳಿಕೆ: ಈ ಹೇಳಿಕೆಯಲ್ಲಿ ದಾಳಿ ಇಟ್ಟವರನ್ನು ತಾನು ಭೇಟಿ ಆಗಿದ್ದು, ಅವರಿಗೆ ಕಾರ್ ಕೊಟ್ಟಿದ್ದು, ಇತ್ಯಾದಿಗಳನ್ನು ದಾಖಲಿಸಲಾಗಿದೆ. ಆದರೆ ಈ ಹೇಳಿಕೆಯನ್ನು ಪೊಲೀಸರು ಪಡೆದಿದ್ದು ಅಫ್ಜಲ್‌ನಿಗೆ ಚಿತ್ರಹಿಂಸೆ ನೀಡುವ ಮೂಲಕ. ಆ ಕಾರಣಕ್ಕಾಗಿಯೇ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳು ಆ ತಪ್ಪೊಪ್ಪಿಗೆ ಹೇಳಿಕೆಯನ್ನು ತಿರಸ್ಕರಿಸಿದವು. ಆದರೆ ಅಂದಿನ ಬಿಜೆಪಿ ನೇತೃತ್ವದ ಸರ್ಕಾರ ಈ ತಪ್ಪೊಪ್ಪಿಗೆಯನ್ನು ಆಧರಿಸಿ ಪಾಕಿಸ್ತಾನದ ಮೇಲೆ ಯುದ್ಧಕ್ಕೆ ಸಜ್ಜಾಗಿತ್ತು, ಇಡೀ ಸೈನ್ಯವನ್ನು ಗಡಿಭಾಗಕ್ಕೆ ಸಾಗಿಸಿ ದೇಶಭಕ್ತಿಯನ್ನು ಮೆರೆದಿತ್ತು, ಇದಲ್ಲದಕ್ಕೆ ಖರ್ಚಾಗಿದ್ದು ಕೇವಲ 1,00,0000 ಕೋಟಿ ರೂಪಾಯಿಗಳು. ಅರುಂಧತಿ ರಾಯ್‌ರವರು ಕೇಳಿರುವಂತೆ: ಅಫ್ಜಲನ ತಪ್ಪೊಪ್ಪಿಗೆ ಯುದ್ಧ ಸ್ಥಿತಿಗೆ ಕಾರಣವಾಗಿತ್ತೋ? ಅಥವಾ ಯುದ್ಧ ಸ್ಥಿತಿಯನ್ನು ನಿರ್ಮಿಸಬೇಕೆಂದೇ ಆತನಿಂದ ಅಂತಹ ತಪ್ಪೊಪ್ಪಿಗೆಯನ್ನು ಪಡೆಯಲಾಗಿತ್ತೋ?!

ಇದೆಲ್ಲದರಷ್ಟೇ ವಿಚಿತ್ರವಾಗಿರುವುದು ಯಾವುದೆಂದರೆ ಸಂಸತ್ ಭವನದ ಮೇಲೆ ದಾಳಿ ಇಟ್ಟು ಹತರಾದ ಐವರು ಯಾರು ಎಂಬುದು. ಪೊಲೀಸರ ಪ್ರಕಾರ ಅಫ್ಜಲ್ ಅವರೆಲ್ಲರನ್ನು ಮೊಹಮ್ಮದ್, ರಾಣಾ, ರಾಜಾ, ಹಂಜಾ ಮತ್ತು ಹೈದರ್ ಎಂದು ಗುರುತಿಸಿದ. ಇದಕ್ಕೆ ತಕ್ಕಂತೆ ಅಂದಿನ ಗೃಹಮಂತ್ರಿ ಎಲ್.ಕೆ. ಅಡ್ವಾಣಿ "ಅವರೆಲ್ಲರೂ ಪಾಕಿಸ್ತಾನಿಗಳಂತೆ ಕಾಣುತ್ತಾರೆ" ಅಂದರು. ಆನಂತರ ಪೊಲೀಸರು ಮತ್ತು ವಿಚಾರಣಾ ನ್ಯಾಯಾಲಯವೂ "ಅವರೆಲ್ಲ ಪಾಕಿಸ್ತಾನಿಗಳು" ಎಂದು ಒಪ್ಪಿಕೊಂಡವು. ಆದರೆ ನಿಜವಾಗಲೂ ಅವರ್‍ಯಾರು, ಎಲ್ಲಿಂದ ಬಂದಿದ್ದರು ಎಂಬುದರ ಬಗ್ಗೆ ಜನಸಾಮಾನ್ಯರಿಗಿರಲಿ ಅಷ್ಟೊಂದು ದಕ್ಷತೆಯಿಂದ ತನಿಖೆ ನಡೆಸಿ ಗಿಲಾನಿ, ಅಫ್ಜಲ್ ಮತ್ತು ಶೌಕತ್‌ರನ್ನು ಬಂಧಿಸಿದ ಪೊಲೀಸರಿಗೆ ಇವತ್ತಿಗೂ ಗೊತ್ತಿಲ್ಲ ಎಂದರೆ ನಿಮಗೆ ಅಚ್ಚರಿಯಾಗಬಹುದು. ಆದರೆ ಇದರಿಂದ ಅಚ್ಚರಿಗೊಳ್ಳದಿದ್ದ ನ್ಯಾಯಾಲಯ "ಅವರು ಯಾರೆಂಬುದು, ಅವರ ಹೆಸರೇನೆಂಬುದು ಮುಖ್ಯವಲ್ಲ, ಅವರನ್ನು ಈತ ಗುರುತಿಸಿದ್ದಾನೆ ಎಂಬುದು ಮಾತ್ರ ಮುಖ್ಯ" ಎಂದು ಹೇಳಿತು.

ಈಗ ಬಹಳಷ್ಟು ಜನಕ್ಕೆ ಗೊತ್ತಿರುವಂತೆ ಅಫ್ಜಲ್ 1993 ರಲ್ಲೇ ಸ್ವಯಂ ಇಚ್ಛೆಯಿಂದ ಪೊಲೀಸರಿಗೆ ಶರಣಾಗಿ, ಸಾಮಾನ್ಯರ ಬದುಕು ನಡೆಸುತ್ತಿದ್ದ ಮಾಜಿ ಭಯೋತ್ಪಾದಕ. ಮಾತ್ರವಲ್ಲ, ಬೇರೆ ಭಯೋತ್ಪಾದಕರ



ಬಗ್ಗೆ ಸೈನ್ಯಕ್ಕೆ ಮತ್ತು ಪೊಲೀಸರ ಸ್ಪೆಷಲ್ ಟಾಸ್ಕ್ ಫೋರ್ಸ್‌ಗೆ ಮಾಹಿತಿ ನೀಡುತ್ತಿದ್ದ ಬಾತ್ಮೀದಾರ! ಆದರೆ ಬಹಳಷ್ಟು ಜನಕ್ಕೆ ಗೊತ್ತಿಲ್ಲದಿರುವ ವಿಷಯ ಯಾವುದೆಂದರೆ ದಾಳಿಯಲ್ಲಿ ಸತ್ತ ಮೊಹಮ್ಮದ್ ಎಂಬಾತನನ್ನು ಅಫ್ಜಲ್‌ನಿಗೆ ಪರಿಚಯಿಸಿದ್ದು ಅವನಂತೆಯೇ STF ಬಾತ್ಮೀದಾರನಾಗಿದ್ದ ತಾರೀಖ್ ಎಂಬಾತ. ಅಂದ ಹಾಗೆ ಮೊಹಮದ್ ಕೂಡ STF ಗೆ ಕೆಲಸ ಮಾಡುತ್ತಿದ್ದವ ಎಂಬ ಗುಮಾನಿಯೂ ಇದೆ.

ಪ್ರತೀವಾರ ಪೊಲೀಸರ ಮುಂದೆ ಹಾಜರಾಗಿಬೇಕಿದ್ದ, ಪೊಲೀಸರ ಕಣ್ಗಾವಲಿನಲ್ಲೇ ಬದುಕುತ್ತಿದ್ದ ಅಫ್ಜಲ್‌ನಂತಹವನನ್ನು ಭಯೋತ್ಪಾದಕರು ತಮ್ಮ ದಾಳಿ ತಂತ್ರಕ್ಕೆ ಉಪಯೋಗಿಸಿಕೊಂಡರು ಎಂದರೆ ನಂಬಲಾಗುತ್ತದೆಯಾ? ಹಾಗೆಯೇ, STF ಪೊಲೀಸರ ಬಾತ್ಮೀದಾರರಾಗಿದ್ದವರೇ ಸಂಸತ್ ಭವನದ ಮೇಲೆ ದಾಳಿ ಮಾಡುತ್ತಾರೆಂದರೆ ಏನರ್ಥ? ಇದರ ಹಿಂದೆ ಯಾರ ಕೈವಾಡ ಇರಬಹುದು?

ಕೊನೆಯದಾಗಿ ನ್ಯಾಯಾಲಯದ ಮುಂದೆ ಅಫ್ಜಲನ ವಿಚಾರಣೆಯ ಬಗ್ಗೆ, ಹಣಬಲವಿರದಿದ್ದ ಅಫ್ಜಲನಿಗೆ ವಕೀಲನನ್ನು ನೇಮಿಸಿಕೊಳ್ಳುವ ತಾಕತ್ತಿರಲಿಲ್ಲ. ಆಗ ನ್ಯಾಯಾಲಯವೇ ಆತನಿಗೆ ಒಬ್ಬ ವಕೀಲನನ್ನು ನೇಮಿಸಿತು. ಈ ವಕೀಲನಿಗೆ ಕೇಸ್ ನಡೆಸಿದ್ದ ಅನುಭವವೇ ಇರಲಿಲ್ಲ ಮಾತ್ರವಲ್ಲ, ಆತ ಒಮ್ಮೆಯೂ ಅಫ್ಜಲ್‌ನನ್ನು ಜೈಲಿನಲ್ಲಿ ಭೇಟಿ ಆಗಲಿಲ್ಲ, ಅಫ್ಜಲ್ ಪರವಾಗಿ ಸಾಕ್ಷಿ ನೀಡಲು ಯಾರನ್ನೂ ಕರೆಯಲಿಲ್ಲ, ಹಾಗೆಯೇ ವಿರುದ್ಧ ಸಾಕ್ಷಿ ನೀಡುತ್ತಿದ್ದವರಿಗೆ ಮರುಪ್ರಶ್ನೆ ಹಾಕಲಿಲ್ಲ. ಇದನ್ನು ಕಂಡು ತನಗೆ ಬೇರೆ ವಕೀಲ ಬೇಕೆಂದು ಅಫ್ಜಲ್ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದನಲ್ಲದೆ, ತನ್ನ ಪರವಾಗಿ ವಾದಿಸಬೇಕೆಂದು ಕೋರಿ ಹದಿನೈದು ವಕೀಲರ ಹೆಸರುಗಳನ್ನು ಕೊಟ್ಟ. ಆದರೆ ಆ ಪಟ್ಟಿಯಲ್ಲಿದ್ದ ಪ್ರತಿಯೊಬ್ಬರೂ ಅಫ್ಜಲ್ ಪರವಾಗಿ ವಾದಿಸಲು ನಿರಾಕರಿಸಿದರು. ಸರ್ಕಾರ, ಪೊಲೀಸ್ ಮತ್ತು ಮಾಧ್ಯಮ–ಎಲ್ಲರೂ ಆಗಲೇ ಅಫ್ಜಲ್‌ನನ್ನು ದೇಶದ್ರೋಹಿ ಎಂದು ಬ್ರಾಂಡ್ ಮಾಡಿದ್ದಾಗ, ದೆಹಲಿಯ ವಕೀಲರು ಆತನನ್ನು ಪ್ರತಿನಿಧಿಸಬಾರದೆಂದು ನಿರ್ಣಯ ತೆಗೆದುಕೊಂಡಿದ್ದಾಗ ಯಾರಿಗೆ ತಾನೆ ಆ ಧೈರ್ಯ ಇರುತ್ತೆ ಹೇಳಿ.

ಅಷ್ಟೇ ಅಲ್ಲದೆ, ಅಫ್ಜಲ್‌ನೊಂದಿಗೆ ಬಂಧನಕ್ಕೊಳಗಾಗಿದ್ದ ಎಸ್.ಎ.ಆರ್ ಗಿಲಾನಿಯವರ ಪರವಾಗಿ ಖ್ಯಾತ ನ್ಯಾಯವಾದಿ ರಾಮ್ ಜೇಠ್ಮಲಾನಿ ವಕಾಲತ್ತು ವಹಿಸಿದಾಗ ಅವರ ಮುಂಬೈ ಆಫೀಸನ್ನು ಶಿವಸೇನೆಯವರು ಧ್ವಂಸ ಮಾಡಿದ್ದರು.

ಸರ್ಕಾರದ ವಕೀಲರು ಮಂಡಿಸುತ್ತಿದ್ದ ವಾದಗಳಿಗೆ, ಸಲ್ಲಿಸುತ್ತಿದ್ದ ದಾಖಲೆಗಳಿಗೆ ಪ್ರತ್ಯುತ್ತರ ನೀಡುವವರಿಲ್ಲದೆ ವಿಚಾರಣೆಯನ್ನು ಎದುರಿಸಿದ ಅಫ್ಜಲ್‌ಗೆ ಸರ್ವೋಚ್ಚ ನ್ಯಾಯಾಲಯ ಮರಣದಂಡನೆ ನೀಡಿದೆ. 2005 ರ ಆಗಸ್ಟ್ 4 ರಂದು ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ಮೊಹಮ್ಮದ್ ಅಫ್ಜಲ್ ಯಾವುದೇ ಭಯೋತ್ಪಾದಕ ಸಂಘಟನೆ ಅಥವಾ ಗುಂಪಿಗೆ ಸೇರಿದ್ದಾನೆಂದು ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಹೇಳಿದೆ. ಆದರೂ "ಅಪಾರ ನಷ್ಟಕ್ಕೆ ಕಾರಣವಾದ ಆ ದಾಳಿಯಿಂದಾಗಿ ಇಡೀ ದೇಶವೇ ತಲ್ಲಣಿಸಿತ್ತು, ಆದ್ದರಿಂದ ಸಾಮೂಹಿಕ ಪ್ರಜ್ಞೆ (collective conscience) ಯನ್ನು ತೃಪ್ತಿಗೊಳಿಸಬೇಕೆಂದರೆ ಅಪರಾಧಿಗೆ ಮರಣದಂಡನೆ ವಿಧಿಸಬೇಕು. ದೇಶದ ಐಕ್ಯತೆ, ಸಮಗ್ರತೆ ಮತ್ತು ಸಾರ್ವಭೌಮತ್ವಗಳು ಇಂತಹ ಭಯೋತ್ಪಾದಕ ದಾಳಿಗಳನ್ನು ಎದುರಿಸಬೇಕಾದರೆ, ಇಂತಹ ದೇಶದ್ರೋಹಿ ಕೃತ್ಯಗಳಲ್ಲಿ ಭಾಗವಹಿಸಿದರು ಎಂದು ಸಾಬೀತಾದವರಿಗೆ ಅತಿ ಕಠಿಣ ಶಿಕ್ಷೆ ನೀಡಲೇಬೇಕು" ಎಂದಿದೆ. (ಒಂದೇ ತೀರ್ಪಿನಲ್ಲಿ 'ಸಾಕ್ಷ್ಯಾಧ್ಯಾರಗಳಿಲ್ಲ' ಎಂದು ಹೇಳುತ್ತಲೇ 'ಸಾಬೀತಾಗಿದೆ' ಎಂದೂ ಹೇಳಲಾಗಿದೆ).

ಈ ಎಲ್ಲ ಕಾರಣಗಳಿಂದಾಗಿ ನಮ್ಮನ್ನೂ ಒಳಗೊಂಡಂತೆ ಸಾಮೂಹಿಕ ಪ್ರಜ್ಞೆಯನ್ನು ತೃಪ್ತಿಗೊಳಿಸಲಿಕ್ಕಾಗಿ ಅಫ್ಜಲ್ ಸದ್ಯದಲ್ಲೇ ಗಲ್ಲಿಗೇರುತ್ತಿದ್ದಾನೆ.

ಇದು ಸರಿ ಅನ್ನಿಸುತ್ತದೆಯೇ ನಿಮಗೆ?

ಹಾಗೆಯೇ ಇದಕ್ಕೆ ಸಂಬಂಧಿಸಿದಂತೆ ಒಂದೆರಡು ಪ್ರಶ್ನೆಗಳೂ ಇವೆ.

* ಸರ್ವೋಚ್ಚ ನ್ಯಾಯಾಲಯವು ಸಂಸತ್ತಿನ ಮೇಲಿನ ದಾಳಿಯಲ್ಲಿ ಅಫ್ಜಲ್ "ಪರೋಕ್ಷವಾಗಿ" ಭಾಗಿಯಾಗಿದ್ದಾನೆ ಎಂದು ಹೇಳಿ ಆತನಿಗೆ ಮರಣದಂಡನೆ ನೀಡಿದೆ. ಹಾಗಾದರೆ ಮಹಾತ್ಮ ಗಾಂಧಿಯನ್ನು ಕೊಲ್ಲುವ ಸಂಚಿನಲ್ಲಿ ಭಾಗಿಯಾಗಿದ್ದ ಸಾವರ್ಕರ್‌ಗೂ, ಗೋಪಾಲ್ ಗೋಡ್ಸೆಗೂ, ಇನ್ನಿತರ ಹಿಂದೂ ಮತಾಂಧರಿಗೂ ಏಕೆ ಗಲ್ಲು ಶಿಕ್ಷೆ ವಿಧಿಸಲಿಲ್ಲ?

* ಅಫ್ಜಲ್‌ನನ್ನು ಗಲ್ಲಿಗೇರಿಸುವುದರಿಂದ "ಸಾಮೂಹಿಕ ಪ್ರಜ್ಞೆಗೆ ತೃಪ್ತಿ" ಸಿಗುವುದಾದರೆ, ಆತನನ್ನು ಗಲ್ಲಿಗೇರಿಸಬಾರದೆಂದು ಪ್ರತಿದಿನ ಪ್ರತಿಭಟಿಸುತ್ತಿರುವ ಕಾಶ್ಮೀರದ ಜನರ "ಪ್ರಜ್ಞೆ"ಗೂ ತೃಪ್ತಿ ಸಿಗುತ್ತದೆಯೇ? ಅಥವಾ ಅವರು ಭಾರತದ "ಸಾಮೂಹಿಕ ಪ್ರಜ್ಞೆ"ಗೆ ಸೇರಿದವರಲ್ಲವೆ?

* ದೇಶದ ಸಂಸತ್ತಿನ ಮೇಲಿನ ದಾಳಿಯಲ್ಲಿ "ಪರೋಕ್ಷವಾಗಿ" ಭಾಗಿಯಾಗಿದ್ದಕ್ಕೆ ಮರಣದಂಡನೆ. ಆದರೆ 1996ರ ಮೇ ತಿಂಗಳಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಸರಕಾರ ಸಂಸತ್ ಭವನವೂ ಸೇರಿದಂತೆ ಕೇಂದ್ರ ಸರಕಾರದ ಇಡೀ ಆಸ್ತಿಯನ್ನೇ ಎನ್ರಾನಿಗೆ ಅಡವಿಟ್ಟಿತ್ತಲ್ಲ, ಅದನ್ನು ಮಾಡಿಕೊಂಡವರಿಗೆ ಯಾವ ಶಿಕ್ಷೆ?

* ಪೊಲೀಸರ ಬಂಧನದಲ್ಲಿದ್ದ ಒಬ್ಬ ನೀಡಿದ ಹೇಳಿಕೆಯನ್ನೇ ಆಧರಿಸಿ ದೇಶವನ್ನು ಯುದ್ಧದ ಅಂಚಿಗೆ ತಳ್ಳಿ, ಅಣು ಸಮರದ ಆತಂಕವನ್ನು ಹುಟ್ಟಿಸಿದ್ದರಲ್ಲ, ಅವರಿಗೆ ಯಾವ ಶಿಕ್ಷೆ?

–ಗೌರಿ ಲಂಕೇಶ್



ಪತ್ರಕರ್ತರನ್ನು ಬುಕ್ ಮಾಡಿದ ಕುಮಾರಸ್ವಾಮಿಗೆ 'ಇನ್‌ಸೋಮ್ನಿಯ'

"ಪತ್ರಕರ್ತರನ್ನು ಅಡ್ವಾನ್ಸ್ ಬುಕ್ ಮಾಡಿ" ಎಂದು ಯಾವ ಕ್ಷಣದಲ್ಲಿ ದೇವೇಗೌಡರು ತಮ್ಮ ಪುತ್ರರತ್ನರಿಗೆ ಆದೇಶ ಹೊರಡಿಸಿದರೊ, ಅದೇ ವೇಗದಲ್ಲಿ ಆ ಸುದ್ದಿಯು ಮೈಸೂರು ಪತ್ರಕರ್ತರ ವಲಯದಲ್ಲಿ ತಂಗಾಳಿಯಂತೆ ಬೀಸಲಾರಂಭಿಸಿತು. ಧೂಳು ಹಿಡಿ ದಿದ್ದ ತಮ್ಮ ರೈಟಿಂಗ್ ಪ್ಯಾಡ್‌ಗಳನ್ನು ಕೊಡವಿ, ಪೆನ್‌ಗಳನ್ನು ಮಸೆದುಕೊಂಡ ಪತ್ರಕರ್ತರು "ಕುಮಾರ ಸಂಭವಂ" ಮಹಾಕಾವ್ಯ ರಚಿಸಲು ಸನ್ನದ್ಧರಾದರು.

ನಿರಾಸೆಯೇನಾಗಲಿಲ್ಲ ಬಿಡಿ. ಇನ್ನೂ ಚುನಾವಣೆಯ ದಿನಾಂಕವೇ ಪ್ರಕಟವಾಗಿಲ್ಲ ಈಗಾಗಲೇ ಪತ್ರಕರ್ತರು ತಾವು ಸಲ್ಲಿಸುತ್ತಿರುವ ಅಳಿಲು ಸೇವೆಗಾಗಿ ಸಾಕಷ್ಟು ಪ್ರತಿಫಲ ಪಡೆದಿದ್ದಾರೆ. ಮುಂದೆ ಇನ್ನೂ ಬರಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಬೆದೆ ಗಡ್ಡದ ಮುರುಕು ಹಲ್ಲಿನ ಇಂಗ್ಲಿಷ್ ಪತ್ರಿಕೆಯ ವರದಿಗಾರನಿಗೊಂದು ಸೈಟು ಅದೂ ಬೆಂಗಳೂರಲ್ಲಿ, ಮತ್ತೊಂದು ಇಂಗ್ಲಿಷ್ ಪತ್ರಿಕೆಯ ಕುಡುಕ ವರದಿಗಾರನಿಗೆ ಕಾರು ಕೊಳ್ಳಲು ಧನ ಸಹಾಯ, ಜಿಲ್ಲಾಪತ್ರಕರ್ತರ ಸಂಘದ ಮಾಜಿ ನಾಯಕನಿಗೊಂದು ಸೈಟು ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇದಲ್ಲದೆ ಸ್ಥಳೀಯ ಪತ್ರಕರ್ತರಿಗೆ ಸ್ಥಳೀಯ ಸೈಟುಗಳು, ಟ್ರಾನ್ಸ್‌ಫರ್ ಫೆಸಿಲಿಟಿಗಳನ್ನು ನೀಡಲಾಗಿದೆ. ಸ್ಥಳೀಯ ದಿನ ಪತ್ರಿಕೆಯ ಉದ್ಯೋಗಿಯೊಬ್ಬರಂತೂ ರಾತ್ರಾನುರಾತ್ರಿ ಬೆಂಗಳೂರಿಗೆ ಬಂದು ಬಂಧು-ಬಾಂಧವರ ವರ್ಗಾವಣೆಗೆ ಮುಖ್ಯಮಂತ್ರಿಯಿಂದ ಸಹಿ ಮಾಡಿಸಿಕೊಂಡು ಪ್ರತಿ ರಾತ್ರಿ ನಿದ್ರೆಗೆಡುತ್ತಿದ್ದಾರಂತೆ. ಇದರ ಪರಿಣಾಮಗಳು ಪತ್ರಿಕೆಗಳಲ್ಲಿ ಆಗುತ್ತಿರುವುದನ್ನು ಓದುಗರು ಗಮನಿಸುತ್ತಾರೆ ಬಿಡಿ.


ಶಾಲೆಯಮಕ್ಕಳನ್ನು ಹೊಟ್ಟೆಗಿಲ್ಲದೆ ಗಂಟೆಗಟ್ಟಲೆ ಕೊಳೆ ಹಾಕಿದ ಮುಖ್ಯಮಂತ್ರಿಯ ಬೇಜವಾಬ್ದಾರಿತನ ಇವರ ಪತ್ರಿಕೆಯಲ್ಲಿ ಯಾವುದೋ ಮೂಲೆಯಲ್ಲಿ ಪ್ರಕಟವಾಗುತ್ತದೆ. ತೊಂಭತ್ತಾರು ಜನ ದಲಿತ ಅಧಿಕಾರಿಗಳು ವರ್ಗವಾಗಿದ್ದು ಇವರಿಗೆ ಕೇವಲ ಎರಡು ಇಂಚಿನ ಸುದ್ದಿ, ಸಿದ್ಧರಾಮಯ್ಯನವರ ಹೇಳಿಕೆ ಮತ್ತು ಕಾರ್ಯಕ್ರಮಗಳ ವರದಿಗೆ ಮೂರು ಅಥವಾ ನಾಲ್ಕನೇ ಪುಟದಲ್ಲಿ ಸ್ಥಾನ.

ಆದೇ ಮುಖ್ಯಮಂತ್ರಿ ಕುಮಾರಸ್ವಾಮಿ "ನಾನು ದಿನಕ್ಕೆ ಎರಡೇ ಊಟ ಮಾಡುತ್ತೇನೆ, ದಿನಕ್ಕೆ ಎರಡೇ ಗಂಟೆ ನಿದ್ರೆ ಮಾಡುತ್ತೇನೆ" ಎಂದು ಹೇಳಿದರೆ, ಅದನ್ನು ಮುಖಪುಟದಲ್ಲಿ ಪ್ರಕಟಿಸಿ "ಸಿದ್ಧರಾಮಯ್ಯಗೆ ಸವಾಲ್, ಸಿದ್ಧರಾಮಯ್ಯ ಈ ರೀತಿ ಕೆಲಸ ಮಾಡಲು ಸಾಧ್ಯವೆ?" ಎಂದು ಬರೆಯುತ್ತಾರೆ.

"ಅಸಲಿಗೆ ಊಟ ಸೇರದಿರುವುದು ಅಜೀರ್ಣ, ಕರುಳು ಹುಣ್ಣು ಮತ್ತು ಮಲಬದ್ಧತೆಯ ಲಕ್ಷಣ. ಮತ್ತು ನಿದ್ರಾಹೀನತೆ, ಇನ್‌ಸೋಮ್ನಿಯ ಎಂಬ ಕಾಯಿಲೆ. ಈ ಪತ್ರಕರ್ತರ ದೃಷ್ಟಿಯಲ್ಲಿ ಇವೆಲ್ಲಾ ಕಾಯಿಲೆಗಳು ನನಗೆ ಇರಬೇಕಿತ್ತೆ? ಕುಮಾರಸ್ವಾಮಿಗಿಂತ ಅವರಪ್ಪ ದೇವೇಗೌಡರೇ ಪರವಾಗಿಲ್ಲ, ಸಭೆ-ಸಮಾರಂಭಗಳಲ್ಲೆಲ್ಲಾ ಚಿಂತಿಸದೆ ನಿದ್ದೆ ಮಾಡುತ್ತಾರೆ" ಎಂದು ಸಿದ್ಧರಾಮಯ್ಯ ಟೀಕಿಸುತ್ತಿದ್ದಾರೆ.


ಸಿದ್ದು ಸೋಲಿಸಲು 300 ಕೋಟಿ!

ಎಂ.ಎಸ್. ಸತೀಶ್



ದಸರಾ ಮಹೋತ್ಸವದ ನಂತರ ನಿತ್ಯ ಮನರಂಜನೆಗಾಗಿ ಆತ್ತಿತ್ತ ನೋಡುತ್ತಿದ್ದ ಮೈಸೂರು ಜನರಿಗೆ ಇದೀಗ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ನಡೆಯುತ್ತಿರುವ ಪೂರ್ವಸಿದ್ಧತೆಯ ಕಸರತ್ತೇ ಒಂದು ಬಟ್ಟಿ ಮನರಂಜನೆಯಾಗಿ ಬಟ್ಟಿದೆ. ತಮ್ಮ ಸ್ಥಾನ ಮತ್ತು ಅಧಿಕಾರದ ಗೌರವ ಮತ್ತು ಘನತೆಯನ್ನು ಮರೆತಿರುವ ಮುಖಂಡರು ವರ್ತಿಸುತ್ತಿರುವ ರೀತಿ, ನೀಡುತ್ತಿರುವ ಚಿತ್ರ ವಿಚಿತ್ರವಾದ ಹೇಳಿಕೆಗಳನ್ನು ನೋಡಿದರೆ ಇಲ್ಲಿ ನಡೆಯಲಿರುವುದು ಚುನಾವಣೆಯೆ? ಅಥವಾ ದೊಂಬರಾಟವೆ? ಎಂಬ ಅನುಮಾನ ಮೂಡುತ್ತದೆ.

ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಸೋಲಿಸುವುದೇ ನಮ್ಮ ಏಕೈಕ ಗುರಿ ಎಂದು ಗುದ್ದಾಡುತ್ತಿರುವ ದೇವೇಗೌಡ ಅಂಡ್ ಸನ್ಸ್ ಕಂಪನಿಯು ಈ ವರೆಗೆ ತಮ್ಮ ಜಾತ್ಯತೀತ ಜನತಾದಳದ ಅಭ್ಯರ್ಥಿ ಯಾರು? ಎಂಬ ನಿರ್ಧಾರಕ್ಕೆ ಬರಲಾರದ ಸಂದಿಗ್ಧ ಸ್ಥಿತಿ ಎದುರಿಸುತ್ತಿದ್ದಾರೆ. ಆದರೆ ಸಿದ್ಧರಾಮಯ್ಯನವರ ಮೇಲೆ



ಚುನಾವಣೆ ಎಂಬ ನೇರದಾಳಿ ನಡೆಸುವ ಮುನ್ನ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ಧರಾಮಯ್ಯ ಕಟ್ಟಿರುವ ಕೋಟೆಯನ್ನು ಒಡೆಯುವ ಮತ್ತು ಅವರು ಇತ್ತೀಚೆಗೆ ಸೇರಿರುವ ಕಾಂಗ್ರೆಸ್ ಪಕ್ಷದ ಕ್ಷೇತ್ರ ಮಟ್ಟದ ಬೇರುಗಳನ್ನು ದುರ್ಬಲಗೊಳಿಸುವ ತಂತ್ರವನ್ನು ಮಾತ್ರ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಲ್ಲಿ ಅತಿ ವಿಶಾಲವಾದುದು ಮಾತ್ರವಲ್ಲ, ಅತಿ ಹೆಚ್ಚಿನ ಮತದಾರರನ್ನು ಹೊಂದಿದೆ. ಇಲ್ಲಿ ಒಟ್ಟು 3.5 ಲಕ್ಷ ಮತದಾರರಿದ್ದಾರೆ. ಕ್ಷೇತ್ರದ ಅರ್ಧಭಾಗ ನಗರ ವ್ಯಾಪ್ತಿಗೆ ಬಂದರೆ ಉಳಿದರ್ಧ ಗ್ರಾಮಾಂತರ ಪ್ರದೇಶದಲ್ಲಿದೆ. ಈ ಕ್ಷೇತ್ರವನ್ನು ಬೆಂಗಳೂರಿನ ಉತ್ತರಹಳ್ಳಿ ಕ್ಷೇತ್ರಕ್ಕೆ ಹೋಲಿಸಬಹುದು. 80 ಸಾವಿರ ಮತದಾರರನ್ನು ಹೊಂದಿರುವ ಲಿಂಗಾಯತರು, 40 ಸಾವಿರವಿರುವ ಕುರುಬರು, ನಾಯಕರು, 25 ರಿಂದ 20 ಸಾವಿರವಿರುವ ದಲಿತರು ಪ್ರಭಾವ ಹೊಂದಿದ್ದಾರೆ. ಮುಸ್ಲಿಂರು ಮತ್ತಿತರ ಜಾತಿಯವರು ಇಲ್ಲಿ ಗಣನೀಯ ಪ್ರಮಾಣದಲ್ಲಿಲ್ಲ.

ಆರಂಭದಿಂದಲೂ ಅಭ್ಯರ್ಥಿಗಾಗಿ ತಿಣಕಾಡಿ ಬಳಲಿದ್ದ ಗೌಡ ಅಂಡ್ ಕೋ ಕೊನೆಗೆ ಪುರಾತನ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಸಿದ್ದೇಗೌಡ ಎಂಬ ವಕೀಲರನ್ನು ತನ್ನ ಪಕ್ಷದ ಅಭ್ಯರ್ಥಿ ಎಂದು ಪ್ರೊಜೆಕ್ಟ್ ಮಾಡಿ ಯಾವಾಗ ಆ ಮೂಲಕ ಎರಡನೇ ಪ್ರಭಲ ಸ್ಥಾನದಲ್ಲಿದ್ದ ಒಕ್ಕಲಿಗರ ಮತಗಳನ್ನು ಸೆಳೆಯುವ ತಂತ್ರ ರೂಪಿಸಿತ್ತು, ಆದರೆ ಒಂದು ಕಾಲದಲ್ಲಿ ವರ್ಚಸ್ವಿ ನಾಯಕರಾಗಿದ್ದ ಮಾವಿನಹಳ್ಳಿ ಸಿದ್ದೇಗೌಡ, ಸಿದ್ಧರಾಮಯ್ಯ ವಿರುದ್ಧ ಸ್ಪರ್ಧಿಸಿದರೆ ಜೆಡಿಎಸ್ ಧೂಳೀಪಟವಾಗುತ್ತದೆಂದು ಗುಪ್ತಚಾರ ಇಲಾಖೆ ಸೇರಿದಂತೆ ಎಲ್ಲಾ ಕಡೆಯಿಂದ ವರದಿಗಳು ಬರಲಾರಂಭಿಸಿತೋ ಗೌಡರ ಪಾಳಯದಲ್ಲಿ ಆತಂಕ ಆರಂಭವಾಯ್ತು.


ಎಪ್ಪಾದ್ರು ಖರ್ಚಾಗ್ಲಿ ಸಿದ್ದು ಸೋಲ್ಬೇಕು

ಆಗ ದೊಡ್ಡ ಗೌಡರು ಹೊರಡಿಸಿದರು ಫರ್ಮಾನು. ಎಪ್ಪಾದ್ರು ಖರ್ಚಾಗ್ಲಿ, ನಮ್ದೇ ಸರ್ಕಾರ ಇದೆ, ದುಡ್ ಸುರೀರಿ, ಹಳ್-ಹಳ್ಳಿಗೂ ಹೋಗಿ ಜನ ಕೇಳಿದ್ ಕೊಡಿ, ನಮ್ಗ್ ಬೇಕಾಗಿರೋ ಅಧಿಕಾರಿಗಳನ್ನ ಅಲ್ಲಿಗೆ ಹಾಕ್ಸಕಳಿ, ಒಳಗೊಳಗೆ ಅತೃಪ್ತರಾಗಿರೋ ಕಾಂಗ್ರೆಸ್‌ನವ್ರನ್ನ ಎಳ್ಕೊಳ್ಳಿ, ಪೇಪರ್‌ನವ್ರನ್ನ ಬುಕ್ ಮಾಡ್ಕೊಳ್ಳಿ, ಒಂದೊಂದೇ ಜಾತಿಯವ್ರನ ಒಲ್ಸಿಕೊಳ್ಳಿ, ನಿಮ್ಮ ಶಕ್ತಿಯನ್ನೆಲ್ಲಾ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಉಪಯೋಗಿಸಿ ಸಿದ್ಧರಾಮಯ್ಯ ಸೋಲಲೇಬೇಕು, ಇಲ್ಲದಿದ್ದರೆ ನಮ್ಮ ಸೋಲು ಮತ್ತು ಸರ್ಕಾರ ಬೀಳುವುದು ಖಚಿತ." ಪಿತಾಜಿಯ ಈ ಆಜ್ಞೆಯನ್ನು ತಲೆಯ ಮೇಲೆ ಹೊತ್ತ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಅಗ್ರಜ ಸಚಿವ ರೇವಣ್ಣ ರಾವಣ-ಮಹಿರಾವಣರಂತೆ ಚಾಮುಂಡೇಶ್ವರಿ ಕ್ಷೇತ್ರದ ಮೇಲೆ ಮುಗಿಬಿದ್ದರು.


ಲಿಂಗಾಯತ ಅಭ್ಯರ್ಥಿಗೆ ತಡಕಾಟ

ಅಲ್ಲಿಂದೀಚೆಗೆ ನಡೆದದ್ದೇ ಈ ಕತೆ. ಮಾವಿನಹಳ್ಳಿ ಸಿದ್ದೇಗೌಡರೇ ನಮ್ಮ ಅಭ್ಯರ್ಥಿ ಎಂಬ ಘೋಷಣೆಯನ್ನು ಕೈಬಿಟ್ಟು ಲಿಂಗಾಯತರ ಅಭ್ಯರ್ಥಿಗಾಗಿ ತಡಕಾಟ ಆರಂಭವಾಯ್ತು. ಮಾವಿನಹಳ್ಳಿಗೆ ಮೂಡಾದ ಆಸೆ ತೋರಿಸಿ ಸಧ್ಯಕ್ಕೆ ಜತೆಯಲ್ಲೇ ಇಟ್ಟುಕೊಳ್ಳಲಾಗಿದೆ. ಆದರೆ ಇವರಿಗೆ ಲಿಂಗಾಯ್ತ ಅಭ್ಯರ್ಥಿ ಎಲ್ಲಿಂದ ಸಿಗಬೇಕು. ನಿವೃತ್ತ ಪೊಲೀಸ್ ಕಮಿಷನರ್ ಶರಣ ರೇವಣಸಿದ್ಧಯ್ಯ, ಸಿದ್ಧರಾಮಯ್ಯನವರೊಂದಿಗಿದ್ದಾರೆ. ಸುತ್ತೂರು ದೇಶಿಕೇಂದ್ರ ಸ್ವಾಮಿಗಳ ಸಹೋದರ ಷಡಕ್ಷರ ಸ್ವಾಮಿಗಳು ಆಗೋಲ್ಲಾ ಎಂದಿದ್ದಾರೆ. ರಾಜ್ಯಸಭಾ ಸದಸ್ಯ ರಾಜಶೇಖರಮೂರ್ತಿ "ಇದು ನನ್ನ ತೂಕಕ್ಕಲ್ಲಾ" ಎಂದು ನಿರಾಕರಿಸಿದ್ದಾರೆ. ಅವರ ಅಳಿಯ ಹಾಗೂ ವಿಧಾನ ಪರಿಷತ್ ಸದಸ್ಯ ಚಿದಾನಂದರಿಗೂ ಚುನಾವಣೆಗೆ ಸ್ಪರ್ಧಿಸಿ ಒಂದು ಕೈ ನೋಡುವ ಧೈರ್ಯವಿಲ್ಲ.


ಅಂತಹ ಸಂಕಷ್ಟ ಸಮಯದಲ್ಲಿ ಅವರ ಕಣ್ಣಿಗೆ ಬಿದ್ದವರೆ ಎ.ಸಿ. ಗುರುಸ್ವಾಮಿ. ಕಾಂಗ್ರೆಸ್ಸಿನಲ್ಲೇ ಇದ್ದುಕೊಂಡು ಸಿದ್ಧರಾಮಯ್ಯನವರೊಂದಿಗೇ ಓಡಾಡುತ್ತಿದ್ದರೂ, ಗುರುಸ್ವಾಮಿಯವರಿಗೆ ಎಲ್ಲೋ ಒಂದು ಅನುಮಾನ, ತಳಮಳ ಕಾಡುತ್ತಲೇ ಇದೆ. ಸಿದ್ಧರಾಮಯ್ಯ ಗೆಲ್ಲಬಹುದು, ಆ ನಂತರ ತನ್ನ ಸ್ಥಾನವೇನು? ವಿಧಾನ ಪರಿಷತ್‌ಗೆ ಕಳುಹಿಸಬಹುದು! ಆದರೆ ಅದಕ್ಕೆ ರೇವಣ್ಣಸಿದ್ಧಯ್ಯ ಮತ್ತು ನಾಯಕ ಜನಾಂಗದ ಅಪ್ಪಣ್ಣ ಸಹ ಆಕಾಂಕ್ಷಿಗಳು. ಮೂವರ ಸ್ಪರ್ಧೆಯಲ್ಲಿ ತನಗೆ ಹೊಡೆತ ಬಿದ್ದರೆ? ಎಂಬುದು ಗುರುಸ್ವಾಮಿಯ ಅನುಮಾನ. ಈ ವಿಚಾರವನ್ನು ಗೂಢಾಚಾರರ ಮೂಲಕ ಪತ್ತೆ ಹಚ್ಚಿದ ಮುಖ್ಯಮಂತ್ರಿ, ಕುಮಾರಸ್ವಾಮಿ ಈಗ ರಹಸ್ಯವಾಗಿ ಗುರುಸ್ವಾಮಿ ಹಿಂದೆ ಬಿದ್ದಿದ್ದಾರೆ.



ರೇವಣಸಿದ್ದಯ್ಯ




ಅಪ್ಪಣ್ಣ




ಗುರುಸ್ವಾಮಿ

ಈ ವಿಷಯವನ್ನು ತಿಳಿದ ಪಿತಾಜಿ ದೇವೇಗೌಡರು, ಅಕ್ಟೋಬರ್ 19ರಂದು ಬೆಂಗಳೂರಿನ 'ಬಾಲಬ್ರೂ' ಅತಿಥಿಗೃಹದಲ್ಲಿ ಕೂತು "ಕೋಟಿ ಖರ್ಚಾದರೂ ಲಿಂಗಾಯತರ ಗುರುಸ್ವಾಮಿಯನ್ನು ನಿಲ್ಲಿಸಿ" ಎಂದು ಅಂತಿಮ ನಿರ್ಧಾರ ಪ್ರಕಟಿಸಿದ್ದಾರಂತೆ. ಈ ಮಧ್ಯೆ ಸಮಾಜ… ಪಕ್ಷದ ಎಸ್. ಬಂಗಾರಪ್ಪ ಬೇರೆ ಗುರುಸ್ವಾಮಿಯ… ಕಚ್ಚಿ "ಯಾವ ಪಕ್ಷದವರೂ ಟಿಕೆಟ್ ಕೊಡದಿದ್ದರೆ … ಸೈಕಲ್ ಮತ್ತು ಚುನಾವಣೆ ಖರ್ಚು ಎರಡೂ ಕೊಡು…" ಎಂದು ಹೇಳಿದ್ದಾರಂತೆ. ಹಾಗೇನಾದರೂ ಗುರು… ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿದರೆ ಲಿಂಗಾ… ಮತಗಳು ಒಡೆದು ಸಿದ್ಧರಾಮಯ್ಯ ಗೆಲುವು ಸು… ವಾಗುತ್ತದೆಂಬ ಆತಂಕ ದೇವೇಗೌಡರದು. ಎಲ್ಲಕ್ಕಿಂ… ಹೆಚ್ಚಾಗಿ ಗುರುಸ್ವಾಮಿ ಬ… ಸಿದ್ಧರಾಮಯ್ಯನವರನ್ನು ಪರಾ… ಗೊಳಿಸಿದವರು ಎಂಬುದು ಗೌಡ… ತಲೆಯಲ್ಲಿದೆ. ಗೌ… ಈ ಆಹ್ವಾನಕ್ಕೆ ಗುರುಸ್ವಾಮಿ ಇದುವರೆಗೆ ಬಹಿರಂಗವಾಗಿ ಹರಾ-ಶಿವ ಎಂ…



ಶ್ರೀಕಂಠದತ್ತರಿಗೆ ಗಾಳ!

ಹೀಗಾಗಿ ಕುಮಾರಸ್ವಾಮಿ ಕ್ಯಾಂಡಿಡೇಟ್ ಹುಡು… ವಿಷಯದಲ್ಲಿ ತಮ್ಮ ಪರ್ಯಾಯ ಯತ್ನಗಳನ್ನು ಬಿ… ಇದರಲ್ಲಿ ಮೈಸೂರು ಮಹಾರಾಜ ಶ್ರೀಕಂಠದ… ಮನವೊಲಿಸುವ ಯತ್ನವೂ ಒಂದು. "ಮೈಸೂರು ಅರ… ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ… ಮೊಕದ್ದಮೆಯ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿ… ನಾವು ಸಹಾಯ ಮಾಡುತ್ತೇವೆ" ಎಂದು ಕುಮಾರಸ… ಶ್ರೀಕಂಠದತ್ತರಿಗೆ ಬಿಸ್ಕೆಟ್ ಹಾಕುತ್ತಿದ್ದಾರಂತೆ. ಕಳೆದ… ಮೈಸೂರಿನಲ್ಲಿ ನಡೆದ ಕಾಂಗ್ರೆಸ್ ಸಮಾವೇಶ ಪ… ಅಕ್ಟೋಬರ್ 19ರಂದು ನಡೆದ ನಗರ ಕಾಂಗ್ರೆಸ್ ಅ… ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಶ್ರೀಕಂಠದತ್ತರು … ಹಾಜರಾಗಿರುವುದು ಇಂತಹ ಸುದ್ದಿಗಳಿಗೆ … ಕೊಡುವಂತಿದೆ.



ನಾಯಕ ಜನಾಂಗಕ್ಕೆ ಬಲೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಭಾರತೀ… ಜನತಾಪಕ್ಷದ ಅಭ್ಯರ್ಥಿಯಾಗಿ ಸ್ಪ… ಮೂರನೇ ಸ್ಥಾನ ಪಡೆದಿದ್ದ ನಾ… ಜನಾಂಗದ ಅಪ್ಪಣ್ಣ ಬಲಿಷ್ಠ… ಸಿದ್ಧರಾಮಯ್ಯನವರ ಹಿಂದೆ ನಿಂತಿ… ಆದರೆ ನಾಯ್ಕರ ಜನಾಂಗವನ್ನು ಒಡೆಯ… ಸಂಚು ರೂಪಿಸಿರುವ ಮುಖ್ಯಮಂ… ಕುಮಾರಸ್ವಾಮಿ, ಚಾಮುಂಡೇಶ್ವರಿ ಕ್ಷೇ… ನಾಯಕ ಜನಾಂಗದವರಿಗೆ ಕುಟುಂಬ… ಸಾವಿರದಂತೆ 6 ಸಾವಿರ ಕುಟುಂಬ… ಡಾ. ಬಿ.ಆರ್. ಅಂಬೇಡ್ಕರ್ ಅಭಿ… ನಿಗಮದಿಂದ ಸಾಲ ನೀಡಿದ್ದಾರೆ. … ಮೊದಲ ಕಂತಂತೆ. ನಂತರದ ದಿನಗಳಲ್ಲಿ ಈ ಯೋಜನೆ… ಇಡೀ ಕ್ಷೇತ್ರಕ್ಕೆ ವಿಸ್ತರಿಸಲಾಗುವುದಂತೆ. ಆದರೆ ಇಲ್ಲಿ… ಅತಿ ಹೆಚ್ಚಿನ ನಾಯಕ ಜನಾಂಗದವರಿರುವ … ವಿಧಾನಸಭಾ ಕ್ಷೇತ್ರಕ್ಕೆ ಈ ಯೋಜನೆ ಏಕಿಲ್ಲ? … ಕೇಳಿದರೆ ಮುಖ್ಯಮಂತ್ರಿಗಳ ಬಳಿ ಉತ್ತರವಿಲ್ಲ.

ವಿಶ್ವಕರ್ಮರಿಗೂ ಮಣೆ

ಜಾತ್ಯತೀತ ಜನತಾದಳದ ಅಗ್ರನಾಯಕ ದೇವೇಗೌ… ಪುತ್ರ ಮುಖ್ಯಮಂತ್ರಿ, ಕುಮಾರಸ್ವಾಮಿ ಹೀಗೆ … ಒಡೆಯುವಲ್ಲಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕೇವಲ …

ಕುಮಾರಣ್ಣನ ಸಮಯಪ್ರಜ್ಞಾಹೀನತೆ!



ನೊಂದ ಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಮುಖ್ಯಮಂತ್ರಿ ಕುಮಾರಸ್ವಾಮಿ ತಮ್ಮ ರಾಜಕೀಯ ಉದ್ದೇಶ ಈಡೇರಿಕೆಗಾಗಿ ಜನ ಸಾಮಾನ್ಯರನ್ನು ಪಾಡುಬೀಳಿಸುತ್ತಿರುವುದು ಮಾತ್ರ ಮೈಸೂರಿನ ಮಟ್ಟಿಗೆ ದೊಡ್ಡ ಸುದ್ದಿಯೇ ಆಗುತ್ತಿಲ್ಲ. ಅಕ್ಟೋಬರ್ 12ರಂದು ಅಗ್ರಹಾರದಲ್ಲಿರುವ ನಟರಾಜ ವಿದ್ಯಾಸಂಸ್ಥೆಯ ಕಟ್ಟಡವನ್ನು ಮುಖ್ಯಮಂತ್ರಿಗಳು ಸಂಜೆ 4ಕ್ಕೆ ಉದ್ಘಾಟಿಸಬೇಕಿತ್ತು. ಆಡಳಿತ ಮಂಡಳಿಯ ಸೂಚನೆಯಂತೆ ವಿದ್ಯಾರ್ಥಿಗಳು ಮಧ್ಯಾಹ್ನ 1 ಗಂಟೆಗೇ ಸೇರಿದ್ದರು. ಆದರೆ 4.30 ಆದರೂ ಮುಖ್ಯಮಂತ್ರಿಗಳು ಬರಲೇ ಇಲ್ಲ. ಆ ಹೊತ್ತಿಗಾಗಲೇ ನೀರು, ಊಟ ಇಲ್ಲದೆ ನಿತ್ರಾಣರಾಗಿದ್ದ ವಿದ್ಯಾರ್ಥಿಗಳು ಮನೆಗೆ ಹೋಗಲು ಸಿದ್ಧರಾಗಿದ್ದರು. ಆದರೆ ಶಾಲೆಯ ಆಡಳಿತ ಮಂಡಳಿ ಕಟ್ಟುನಿಟ್ಟಿನ ಆದೇಶ ನೀಡಿ ವಿದ್ಯಾರ್ಥಿಗಳನ್ನು ಬಲವಂತದಿಂದ ಶಾಲೆಯಲ್ಲಿ ಉಳಿಸಿಕೊಂಡಿತು. ಕನಿಷ್ಠ ಅವರಿಗೆ ನೀರು, ಊಟದ ವ್ಯವಸ್ಥೆ ಸಹ ಮಾಡಲಿಲ್ಲ.

ಕೊನೆಗೂ ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಆಗಮಿಸಿದಾಗ ರಾತ್ರಿ 9.45 ಆವರೆಗೆ ಉಪವಾಸವಿದ್ದ ವಿದ್ಯಾರ್ಥಿಗಳು ಪ್ರಜ್ಞಾಹೀನರಾಗುವ ಸ್ಥಿತಿ ತಲುಪಿದ್ದರು. ಕಾರ್ಯಕ್ರಮ ಮುಗಿದಾಗ ರಾತ್ರಿ 11 ಗಂಟೆ. ಶಾಲೆಯ ಕಾರ್ಯಕ್ರಮಕ್ಕೆ ರಾತ್ರಿ 9.45 ಕ್ಕೆ ಬರಲು ಅದನ್ನೇನು ಸೆಕೆಂಡ್ ಶೋ ಪಿಕ್ಚರ್ ಎಂದು ತಿಳಿದರೆ ಮುಖ್ಯಮಂತ್ರಿ ಕುಮಾರಸ್ವಾಮಿ?

ಬಿ.ಸಿ. ಹಳ್ಳಿಯಲ್ಲಿ ಏರ್ಪಡಿಸಿದ್ದ ಜನತಾದರ್ಶನ ಕಾರ್ಯಕ್ರಮಕ್ಕೆ ಬೆಳಿಗ್ಗೆ 10ಕ್ಕೆ ಆಗಮಿಸಬೇಕಿದ್ದ ಮುಖ್ಯಮಂತ್ರಿಗಳು, ಬಂದಿದ್ದು ಸಂಜೆ 5ಕ್ಕೆ. ಜನರ ಬೇಸರ ಕಳೆಯಲೆಂದು ವಾದ್ಯಗೋಷ್ಠಿ ಬೇರೆ. ಆದರೆ ಬೆಳಗಿನಿಂದ ಹೊಟ್ಟೆಗಿಲ್ಲದೆ ಬಸವಳಿದಿದ್ದ ಜನರಿಗೆ ಈ ವಾದ್ಯಗೋಷ್ಠಿ ರುಚಿಸಿದಂತೆ ಕಾಣುತ್ತಿರಲಿಲ್ಲ. ವಾದ್ಯಗೋಷ್ಠಿಯವರು ಜನರ ಮೂಡ್ ಅರಿತರೋ ಏನೋ "ಶಿವಪ್ಪ ಕಾಯೋ ತಂದೆ ಮೂರು ಲೋಕ ಸ್ವಾಮಿ ದೇವ ಹಸಿವೆಯನ್ನು ತಾಳಲಾರೆ" ಎಂದು ಹಾಡಲಾರಂಭಿಸಿದರು. ಕುಮಾರಸ್ವಾಮಿಯವರ "ಸಮಯ ಪ್ರಜ್ಞಾಹೀನತೆಯಿಂದ" ಬಹುತೇಕ ಕಾರ್ಯಕ್ರಮಗಳು ಹೀಗೆ ಗೊಂದಲ ಮತ್ತು ಹಾಸ್ಯಾಸ್ಪದವಾಗುತ್ತಿವೆ.


ಎರಡಕ್ಕೆ ಬಂದಿದ್ದ ಬಿಜೆಪಿ ಒಂದಕ್ಕೆ ಬರುತ್ತಂತೆ!



"ನಾವು ಕಳೆದ ಬಾರಿ ಎರಡಕ್ಕೆ ಬಂದಿದ್ದೆವು, ಈ ಬಾರಿ ಒಂದಕ್ಕೆ ಬರುತ್ತೇವೆಂಬ ವಿಶ್ವಾಸ ನಮಗಿದೆ" ಹೀಗೆ ದ್ವಂದ್ವಾರ್ಥದ ಮಾತುಗಳನ್ನಾಡಿ ಕಾರ್ಯ ಕರ್ತರನ್ನು ನಗೆಗಡಲಲ್ಲಿ ಮುಳುಗಿಸಿದವರು ಭಾರತೀಯ ಜನತಾಪಕ್ಷದ ರಾಜ್ಯಾಧ್ಯಕ್ಷ ಡಿ.ವಿ. ಸದಾನಂದಗೌಡ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಕಳೆದ ಬಾರಿ ಎರಡನೇ ಸ್ಥಾನ ಪಡೆದಿತ್ತು, ಈ ಬಾರಿ ಒಂದನೇ ಸ್ಥಾನ ಪಡೆದು ಗೆಲ್ಲುತ್ತೇವೆಂಬುದು ಡಿ.ವಿ. ಎಸ್. ಮಾತಿನ ಅರ್ಥ.

ಇದು ಬರೀ ಬೂರ್ನಾಸು ಮಾತು. ಈ ಕ್ಷೇತ್ರದಲ್ಲಿ ಬಿಜೆಪಿಯ ಅಲೆಯೂ ಇಲ್ಲ, ನೆಲೆ ಮೊದಲೇ ಇಲ್ಲ, ವೈಯುಕ್ತಿಕ ವರ್ಚಸ್ಸಿನ ಮೇಲೆ ಎರಡನೇ ಸ್ಥಾನ ಪಡೆದಿದ್ದ ಅಪ್ಪಣ್ಣ ಈಗ ಸಿದ್ಧರಾಮಯ್ಯನವರೊಂದಿಗಿರುವುದನ್ನು ಡಿವಿಎಸ್ ಎಂಬ ಬಯಲಾಟದ ಹನುಮನಾಯಕನ ವೇಷಧಾರಿ ಮರೆತಂತಿದೆ. ಅಸಲಿಗೆ ಕೊಪ್ಪಲು ನಾಗೇಂದ್ರ ಎಂಬ ಮಹಾನಗರ ಪಾಲಿಕೆ ಸದಸ್ಯ "ನಾನೆ ಕೈಯಿಂದ ಕಾಸಾಕಿ ಸಮಾವೇಶ ಮಾಡ್ತೀನಿ" ಅಂತ ಹೇಳಿರದಿದ್ದರೆ ಬಿಜೆಪಿಯವರು ಇಲ್ಲಿ ಬಹುಶಃ ಯಾವ 'ವೇಶ'ವನ್ನು ಮಾಡುತ್ತಿರಲಿಲ್ಲ.


ಕೊಪ್ಪಲು ನಾಗೇಂದ್ರನಿಗೆ ಚಾಮುಂಡೇಶ್ವರಿಯಿಂದ ವಿಧಾನಸಭೆಗೆ ಸ್ಪರ್ಧಿಸುವ ಹುಮ್ಮಸ್ಸು. ಆದರೆ ತಲೆ ಕೆಳಗಾಗಿ ನಿಂತರೂ ತಮ್ಮ ಪಕ್ಷ ಗೆಲ್ಲುವುದಿಲ್ಲವೆಂಬ ಸತ್ಯ ಬಿಜೆಪಿ ವರಿಷ್ಠರಿಗೆ ಗೊತ್ತು, ಆದರೂ ಒಂದು ರಾಷ್ಟ್ರೀಯ ಪಕ್ಷವಾಗಿ ಈ ಸತ್ಯವನ್ನು ಒಪ್ಪಿಕೊಂಡಲ್ಲಿ ಮರ್ಯಾದೆ ಹೋಗುವುದರಿಂದ ಸುಲಭವಾಗಿ ಒಪ್ಪಿಕೊಳ್ಳುತ್ತಿಲ್ಲ, ಈ ಕಾರಣದಿಂದ ಸಮಾವೇಶ, ಸ್ಟೇಟ್‌ಮೆಂಟು ಮುಂತಾದ ಸರ್ಕಸ್‌ಗಳನ್ನು ನಡೆಸುತ್ತಿದ್ದಾರೆ. ಈ ಮಧ್ಯೆ ನಾಗನಹಳ್ಳಿ ಜಗದೀಶ್ ಗೌಡ ಎಂಬ ಮತ್ತೊಬ್ಬರು ತಾವೇ ಕಾಸಾಕಿಕೊಂಡು ಬಿಜೆಪಿಯಿಂದ ಸ್ಪರ್ಧಿಸಲು ಮುಂದೆ ಬಂದಿದ್ದಾರೆ. ಆದರೆ ಇವರಿಬ್ಬರಿಗೂ ಅವರ ಪಕ್ಷದ ಆತ್ಮೀಯರು "ಆತ್ಮಹತ್ಯೆ ಮಹಾಪಾಪ" ಎಂದು ಮನವೊಲಿಸುತ್ತಿದ್ದಾರಂತೆ.



ನಾಗೇಂದ್ರ

ಒಟ್ಟಿನಲ್ಲಿ ಸ್ಪರ್ಧಿಸುತ್ತೇವೆ ನಾವು "ಎರಡು, ಒಂದು" ಎಂದೆಲ್ಲಾ ಬಟ್ಟೆ ಹಾವು ಬಿಟ್ಟು ಕೊನೇ ಗಳಿಗೆಯಲ್ಲಿ "ಸಮ್ಮಿಶ್ರ ಸರ್ಕಾರದ ನೀತಿಯ ಪ್ರಕಾರ ಹೊಂದಾಣಿಕೆ" ಎಂದು ತಿಪ್ಪೆ ಸಾರಿಸುವ ಹೇಳಿಕೆ ನೀಡಿ ಡೀಲ್ ಕುದುರಿಸಿಬಿಟ್ಟರೆ ಅಲ್ಲಿಗೆ "ಒಂದು, ಎರಡು, ಮೂರು" ಎಲ್ಲಾ ಒಟ್ಟಿಗೆ ಆದಹಾಗೆ.

ಸಾವಿರ ಮತದಾರರಿರುವ ವಿಶ್ವಕರ್ಮ ಜನಾಂಗದವರನ್ನು ಬಿಟ್ಟಿಲ್ಲ. ಈ ಘನಕಾರ್ಯಕ್ಕೆ ಮಾಜಿ ಸಚಿವ ಎಚ್. ವಿಶ್ವನಾಥ್‌ರವರ ಶಿಷ್ಯ ರಘು ಆಚಾರ್ ಎಂಬ ವಿಶ್ವಕರ್ಮ ಜನಾಂಗದ ಯುವಕನನ್ನು ಬುಕ್ ಮಾಡಲಾಗಿದೆ. ಈತ ಸದ್ಯದಲ್ಲೇ ಜನಾಂಗದ ಸಮಾವೇಶ ನಡೆಸುತ್ತಾನಂತೆ, "ವಿಶ್ವಕರ್ಮ ಜನಾಂಗಕ್ಕೆ ಯಾವ ರಾಜಕೀಯ ಪಕ್ಷ ಪ್ರಾತಿನಿಧ್ಯ ನೀಡಿ ಗುರುತಿಸುತ್ತದೊ ಅದಕ್ಕೆ ನಮ್ಮ ಬೆಂಬಲ" ಎಂಬುದು ರಘು ಬಿಡುವ ರೈಲು. ಕೆ.ಪಿ.ಸಿ.ಸಿ. ಸದಸ್ಯನೂ ಆಗಿರುವ ರಘುವಿಗೆ ಶಾಸಕನಾಗುವ ಕನಸು, ಆದರೆ ಕೆ.ಆರ್. ಕ್ಷೇತ್ರದಲ್ಲಿ ಸಿದ್ಧರಾಮಯ್ಯ ಬೆಂಬಲಿಗ ಸೋಮಶೇಖರ್ ಶಾಸಕರಾಗಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಸಿದ್ಧರಾಮಯ್ಯ ಸೋಮಶೇಖರ್‌ಗೇ ಟಿಕೆಟ್ ಕೇಳುವುದು ಖಚಿತ. ಹೀಗಾಗಿ ರಘು ಆಚಾರ್ ವಿಶ್ವಕರ್ಮ ಜನಾಂಗದ ಉದ್ಧಾರಕನ ಪಾರ್ಟು ಹಾಕಿಕೊಂಡು ಜೆಡಿಎಸ್ ಬಾಗಿಲಲ್ಲಿ ನಿಂತಿದ್ದಾನೆ.



ರಘು ಆಚಾರ್

ಕಾಂಗ್ರೆಸ್ ಕೋಟೆಗೆ ಸುರಂಗ!


ಇನ್ನು ಕುಮಾರಸ್ವಾಮಿ ನೇರವಾಗಿ ತಮ್ಮ ವಿರೋಧಿ ಕಾಂಗ್ರೆಸ್ ಕೋಟೆಗೇ ಸುರಂಗ ತೋಡಿದಾಗ ಸಿಕ್ಕಿಬಿದ್ದ ಮೊದಲ ಮಿಕವೇ ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಡಿ. ಮಾದೇಗೌಡ. ಒಂದು ಕಾಲದಲ್ಲಿ ಜೆಡಿಎಸ್‌ನಲ್ಲೇ ಇದ್ದು ಸಿದ್ಧರಾಮಯ್ಯನವರೊಂದಿಗಿನ ಮುನಿಸಿನ ಕಾರಣಕ್ಕೆ ಕಾಂಗ್ರೆಸಿಗೆ ಸ್ಥಳಾಂತರವಾಗಿದ್ದ ಮಾದೇಗೌಡ ಕುಮಾರಸ್ವಾಮಿ ಬಲೆಗೆ ಸುಲಭವಾಗಿ ಸಿಲುಕಿದರು. ಅವರ ಮೂಲಕವೇ ಈಗ ಕಾಂಗ್ರೆಸ್ ಅಧ್ಯಕ್ಷ ಸಿ. ಬಸವೇಗೌಡ, ಸಂದೇಶ್ ನಾಗರಾಜ್ ಇಬ್ಬರನ್ನು ಕಾಂಗ್ರೆಸ್‌ನಿಂದ ಜೆಡಿಎಸ್‌ಗೆ ಸೆಳೆಯಲು ವೇದಿಕೆ ಸಜ್ಜುಗೊಳಿಸಲಾಗುತ್ತಿದೆ. ಬಸವೇಗೌಡ ಸಹ ಹಿಂದೆ ಜೆಡಿಎಸ್‌ನಲ್ಲಿದ್ದು ನಂತರ ಕಾಂಗ್ರೆಸ್ ಸೇರಿದ್ದವರು ಎಂಬುದು ಇಲ್ಲಿ ಗಮನಾರ್ಹ.

ಈ ತಂತ್ರದ ಮೂಲಕ ಸಿದ್ಧರಾಮಯ್ಯನವರ ವಿರುದ್ಧ ಒಕ್ಕಲಿಗರು ಬಂಡೆದ್ದಿದ್ದಾರೆ ಎಂಬ ಭಾವನೆ ರೂಪಿಸಿ ಒಕ್ಕಲಿಗ ಮತಗಳನ್ನು ಒಡೆಯುವುದು ಕುಮಾರ ತಂತ್ರ. ಇದಿಷ್ಟು ಜಾತ್ಯತೀತ ಜನತಾದಳದ ಅಭ್ಯರ್ಥಿಗಳು ಮತ್ತು ಮತಗಳನ್ನು ಒಡೆಯುವ ತಂತ್ರಕ್ಕೆ ಸಂಬಂಧಿಸಿದ್ದು.


ಸರ್ಕಾರಿ ಯಂತ್ರದ ದುರ್ಬಳಕೆ

ಇನ್ನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸರ್ಕಾರಿ ಯಂತ್ರದ ದುರ್ಬಳಕೆಯ ಬಗ್ಗೆ ಹೇಳಲು ಹೊರಟರೆ ಅದೇ ಒಂದು ರಾಮಾಯಣವಾಗುತ್ತದೆ. ಈವರೆಗೆ ಆರು ಬಾರಿ ಇಲ್ಲಿಗೆ ಭೇಟಿ ನೀಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿ, ಈ ಕ್ಷೇತ್ರದಲ್ಲಿ ಪ್ರಕಟಿಸಿರುವ ಯೊಜನೆಗಳು, ಹಾಕಿರುವ ಶಂಕುಸ್ಥಾಪನೆಗಳು ಮತ್ತು ಮಂಜೂರು ಮಾಡಿರುವ ಹಣವನ್ನು ಲೆಕ್ಕ ಹಾಕಿದರೆ 300 ಕೋಟಿ ರೂಪಾಯಿ ಮೀರುತ್ತದೆ. ಈ ವೆಚ್ಚಕ್ಕೆ ಸಂಬಂಧಿಸಿದಂತೆ "ಸರ್ಕಾರಿ ಖಜಾನೆ ಲೂಟಿಯಾಗುತ್ತಿದೆ" ಎಂದು ಕೇಳಿಬಂದ ಟೀಕೆಗೆ, ಸಚಿವ ರೇವಣ್ಣನ ಪ್ರತಿಕ್ರಿಯೆ ಏನು ಗೊತ್ತೆ? "ಹೌದು ನಾವು ಜನಗಳ ಉದ್ಧಾರಕ್ಕಾಗಿ ಲೂಟಿ ಮಾಡುವ ದರೋಡೆಕೋರರು!" ಒಬ್ಬ ಜವಾಬ್ದಾರಿಯುತ ಸಚಿವ ಆಡುವ ಮಾತಿನ ದಾಟಿಯೇ ಇದು?


ಉಪ ಚುನಾವಣೆಯ ಸುದ್ದಿ ಹಬ್ಬುತ್ತಿದ್ದಂತೆ ಮೈಸೂರು ತಾಲ್ಲೂಕಿನಾದ್ಯಂತ ಕುರುಬ ಮತ್ತು ದಲಿತ ಅಧಿಕಾರಿಗಳ ಸಾಮೂಹಿಕ ವರ್ಗಾವಣೆ ನಡೆದಿದೆ. ಲೋಕೋಪಯೋಗಿ ಇಲಾಖೆಯೊಂದರಲ್ಲೇ ಸಚಿವ ಎಚ್.ಡಿ. ರೇವಣ್ಣ 93 ದಲಿತ ಇಂಜಿನಿಯರ್‌ಗಳನ್ನು ಎತ್ತಂಗಡಿ ಮಾಡಿದ್ದಾರೆ. ಈವರೆಗೆ ಅವರ್‍ಯಾರಿಗೂ ಯಾವುದೇ ಸ್ಥಾನ ತೋರಿಸಿಲ್ಲ. ಮೈಸೂರು ಜಿಲ್ಲಾಧಿಕಾರಿ ಸೆಲ್ವಕುಮಾರ್ ನೆಪಮಾತ್ರಕ್ಕೆ ಮಾತ್ರ ಜಿಲ್ಲಾಧಿಕಾರಿ. ಅವರ ಅಧಿಕಾರವನ್ನು ನಿಜವಾಗಿ ಚಲಾಯಿಸುತ್ತಿರುವವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಪ್ರಭಾರ ಆಯುಕ್ತ ಅಶೋಕಾನಂದ. ಇವರು ಕುಮಾರಸ್ವಾಮಿಯ ಹಿರಿಯ ಸಹೋದರ, ಬಾಲಕೃಷ್ಣೇಗೌಡರ ಕೆಎಎಸ್ ಬ್ಯಾಚ್‌ಮೆಟ್ ಅಂತೆ.



ಸಂದೇಶ್ ನಾಗರಾಜ್



ಡಿ. ಮಾದೇಗೌಡ



ಬಸವೇಗೌಡ

ಈ ಹಿಂದೆ ಸಿದ್ಧರಾಮಯ್ಯ ಉಪಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅವರು ಹಾಕಿದ್ದ ಕೆಲವು ಯೋಜನೆಗಳಿಗೆ ಹಣಕಾಸು ಮಂಜೂರಾಗದೆ ಅವು ಆರಂಭವಾಗಿರಲಿಲ್ಲ, ಅಂತಹ ಯೋಜನೆಗಳನ್ನೆಲ್ಲಾ ಹುಡುಕಿ ಅವುಗಳಿಗೆ ಕಲ್ಲು ಹಾಕಿ ಶಂಕುಸ್ಥಾಪನೆ ಮಾಡುತ್ತಿರುವುದೇ ಈ ಅಶೋಕಾನಂದ ಎಂಬ ಅಧಿಕಾರಿ. ಮೇಲಹಳ್ಳಿ-ಹಾರೋಹಳ್ಳಿ ವಿದ್ಯುತ್ ವಿತರಣಾಕೇಂದ್ರ, ಮೊಗಳಾಪುರ ವಿದ್ಯುತ್ ಉಪಕೇಂದ್ರ ಆಯರಹಳ್ಳಿ ವಿದ್ಯುತ್ ವಿತರಣಾಕೇಂದ್ರ, ಸೋಮೇಶ್ವರಪುರ ಸರ್ಕಾರಿ ಪ್ರೌಢಶಾಲೆ, ಹೊಸಹುಂಡಿ ಸರ್ಕಾರಿ ಪ್ರೌಢಶಾಲೆ, ಚಾಮುಂಡಿ ಬೆಟ್ಟದಲ್ಲಿ ಶಾಶ್ವತ ವಿದ್ಯುತ್‌ದೀಪ, ಮೇಳಾಪುರ 2ನೇ ಹಂತದ ಕುಡಿಯುವ ನೀರಿನ ಯೋಜನೆ. ಇವೆಲ್ಲಾ ಸಿದ್ಧರಾಮಯ್ಯನವರ ಅವಧಿಯಲ್ಲೇ ಮಂಜೂರಾದ ಯೋಜನೆಗಳು. ಆದರೆ ಈಗ ಅದರ ಶಂಕುಸ್ಥಾಪನೆಗೆ ಮತ್ತು ಕೆಲವು ಯೋಜನೆಗಳ ಆರಂಭಕ್ಕೆ ತರಾತುರಿಯಲ್ಲಿ ಹಣ ಬಿಡುಗಡೆ ಮಾಡಿ ಉದ್ಘಾಟಿಸಲಾಗುತ್ತಿದೆ. "ಅದು ನನ್ನದೇ ಯೋಜನೆ, ಅದಕ್ಕೆ ನಾನೇ ತಂದೆ" ಎಂದು ಕುಮಾರಸ್ವಾಮಿ ಬೀಗುತ್ತಿದ್ದಾರೆ.

ಜನತಾದರ್ಶನ ಎಂಬ ಹಗಲು ವೇಷ

ಇದರ ಮಧ್ಯೆ ಮುಖ್ಯಮಂತ್ರಿಗಳ ಜನತಾದರ್ಶನವಂತೂ ಅಬಾಧಿತವಾಗಿ, ಹೊತ್ತು-ಗೊತ್ತಿಲ್ಲದೆ ನಡೆಯುತ್ತಿದೆ. ಜನತಾದರ್ಶನ ಸಂದರ್ಭದಲ್ಲಿ ಎಂತಹ ಅರ್ಜಿಗಳನ್ನು ಸ್ವೀಕರಿಸಬೇಕು? ಯಾವ ಸಮಸ್ಯೆಗೆ ಆದ್ಯತೆ? ಯಾವ ಸಮಸ್ಯೆಯನ್ನು ಸ್ಥಳದಲ್ಲೇ ಬಗೆಹರಿಸಬೇಕೆಂಬ ಕನಿಷ್ಠ ಪ್ರಜ್ಞೆ ಮತ್ತು ಮಾನದಂಡ ಎರಡೂ ಇಲ್ಲಿ ಕಂಡು ಬರುತ್ತಿಲ್ಲ, ಹುಂಡ ವಾಡಿಯಲ್ಲಿ ಅಜ್ಜಿ ಯೊಂದಕ್ಕೆ ಎಲೆ ಅಡಿಕೆಗೆ ನೂರು ರೂಪಾಯಿ, ಮೊಬೈಲ್ ಫೋನ್ ಕೊಳ್ಳಲು ದುಡ್ಡು, ಸ್ವಿಮ್ಮಿಂಗ್ ಸೂಟ್ ಕೊಳ್ಳಲು ಹಣ ಹೀಗೆ ಅರ್ಥಹೀನ ಅರ್ಜಿಗಳಿಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮಾನ್ಯತೆ ದೊರಕುತ್ತಿರುವುದು ವಿಪರ್ಯಾಸ.

ಇಷ್ಟೆಲ್ಲಾ ಕಸರತ್ತು ಮಾಡಿಯಾದರೂ ಜಾತ್ಯತೀತ ಜನತಾದಳದ ಅಭ್ಯರ್ಥಿಯನ್ನು ಗೆಲ್ಲಿಸಬಹುದೆ? ಈ ಪ್ರಶ್ನೆಗೆ ಉತ್ತರ ಅಷ್ಟು ಸುಲಭವಲ್ಲ. ಕೆಲವು ಮೂಲಗಳ ಪ್ರಕಾರ "ಕುಮಾರಸ್ವಾಮಿ ಕೊಟ್ಟಿದ್ದೆಲ್ಲಾ ಬಾಚಿಕೊಳ್ಳಿ, ಓಟು ಮಾತ್ರ ಸಿದ್ಧರಾಮಯ್ಯನವರಿಗೆ ಹಾಕಿ" ಎಂಬ ರಹಸ್ಯ ಸಂದೇಶ ನಾಯಕ ಜನಾಂಗಕ್ಕೆ ರವಾನೆಯಾಗಿದೆಯಂತೆ. ಶತಾಯ-ಗತಾಯ ಒಕ್ಕಲಿಗರ ಓಟನ್ನು ಸಿದ್ಧರಾಮಯ್ಯನವರಿಗೇ ಕೊಡಿಸುವುದಾಗಿ ನಗರ ಕಾಂಗ್ರೆಸ್ ಅಧ್ಯಕ್ಷ ದಾಸೇಗೌಡ ಬಿರುಸಾಗಿ ಓಡಾಡುತ್ತಿದ್ದಾರೆ, ಲಿಂಗಾಯತರ ಪ್ರತಿನಿಧಿಯಾಗಿ ರೇವಣಸಿದ್ದಯ್ಯನವರು ಇದ್ದೇ ಇದ್ದಾರೆ. ಮೈಸೂರು ನಗರದಲ್ಲಿ ಜೆಡಿಎಸ್‌ಗೆ ಮುಸ್ಲಿಂ ಮುಖಂಡರೇ ಇಲ್ಲ, ಕಾಂಗ್ರೆಸ್‌ನ ತನ್ವೀರ್ ಸೇಠ್ ಏಕೈಕ ಮುಸ್ಲಿಂ ನಾಯಕ. ಇವರೆಲ್ಲರೂ ಸಿದ್ಧರಾಮಯ್ಯ ಪರ ಗಟ್ಟಿಯಾಗಿ ನಿಂತಿದ್ದಾರೆ.



ಮೈಸೂರಿನಲ್ಲಿ ಸಿದ್ಧರಾಮಯ್ಯನವರ ಕಾಂಗ್ರೆಸ್ ಸಮಾವೇಶ

ಈ ಪರ-ವಿರೋಧಗಳು, ಕೆಳಹಂತದ ಲೀಡರ್‌ಗಳ ಪಕ್ಷಾಂತರಗಳು ಚುನಾವಣೆಗೂ ಮುನ್ನ ಇನ್ನಷ್ಟು ನಡೆಯಬಹುದು. ಆದರೆ ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆ ಮಾತ್ರ ರಾಜ್ಯ ರಾಜಕೀಯದಲ್ಲಿ ಒಂದು ನಿರ್ಣಾಯಕ ಪ್ರಭಾವ ಬೀರಲಿದೆ.

ಆ ಕಾರಣಕ್ಕಾಗಿಯೇ ಚಾಮುಂಡೇಶ್ವರಿ ಜನಕ್ಕೆ ನೂರಾರು ಕೋಟಿ ರೂಗಳ ಯೋಜನೆ, ಜಾತಿ ಜಾತಿಗಳ ನಡುವೆ ಒಡಕು, ಹೊಸ ಜಾತಿ ಲೀಡರ್‌ಗಳನ್ನು ಹುಟ್ಟುಹಾಕುವ, ಅಧಿಕಾರಿಗಳನ್ನು ವರ್ಗಾಯಿಸುವ ಗೌಡ ಫ್ಯಾಮಿಲಿ ಕುತಂತ್ರಗಳೆಲ್ಲಾ ನಡೆಯುತ್ತಿವೆ.

ಸಿದ್ಧರಾಮಯ್ಯ ಬಗ್ಗೆ ದೇವೇಗೌಡರಿಗೆ ಎಷ್ಟು ಭೀತಿ ಇದೆ ಎನ್ನಲು ಇದೇ ಸಾಕ್ಷಿ. ●

"ಹಂಡ್ರೆಡ್ ರುಪೀಸ್ ಮಿನಿಮಮ್ ಗ್ಯಾರಂಟಿ"!




ಮೈಸೂರಿಗೆ ಈವರೆಗೆ ಆರು ಬಾರಿ ಭೇಟಿ ನೀಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿಗಳ ಜನತಾದರ್ಶನವನ್ನು ಇಲ್ಲಿನ ಜನರು ಲೇವಡಿ ಮಾಡುವುದು "ಹಂಡ್ರೆಡ್ ರುಪೀಸ್ ಮಿನಿಮಮ್ ಗ್ಯಾರಂಟಿ ಪ್ರೋಗ್ರಾಮ್" ಎಂದು. ಜನತಾದರ್ಶನಕ್ಕೆ ಯಾರೇ ಬರಲಿ, ಅವರ ಸಮಸ್ಯೆ ಏನೇ ಇರಲಿ ಅದನ್ನು ಸ್ವೀಕರಿಸುವ ಮುಖ್ಯಮಂತ್ರಿಗಳು ಸ್ಥಳದಲ್ಲೆ ಅದಕ್ಕೊಂದು ಗತಿ ಕಾಣಿಸಬಹುದುವುದು ಎಲ್ಲರಿಗೂ ಗೊತ್ತು, ಅದೇ ರೀತಿ, ಸಂದರ್ಶಕರು "ಸ್ವಾಮಿ ಪಕ್ಕದ ಹಳ್ಳಿಯಿಂದ ಬಂದಿದೀವಿ ಹಳ್ಳಿಗೋಗಕ್ಕೂ ಕಾಸಿಲ್ಲ" ಎಂದರೆ ಸಾಕು, ಮುಖ್ಯಮಂತ್ರಿಗಳ ಪಕ್ಕದಲ್ಲೇ ಬ್ಯಾಗ್ ಹಿಡಿದು ನಿಂತಿರುವ ಅವರ ಸಹಾಯಕ ಸುರೇಶ ನೂರು, ಇನ್ನೂರು ಗರಿ ಗರಿ ನೋಟನ್ನು ಶಕ್ತ್ಯಾನುಸಾರ ಎಳೆದುಕೊಡುತ್ತಾನೆ. ಇವನಿಗೆ ಮತ್ತೊಂದು ಹೆಸರು ಮುಖ್ಯಮಂತ್ರಿಗಳ 'ಎಟಿಎಂ' ಎಂದು.

ಈ ರಹಸ್ಯವನ್ನು ತಿಳಿದಿರುವ ಜನತಾದರ್ಶನಾರ್ಥಿಗಳು ಅದೇ ಗ್ರಾಮದವರಾದರೂ "ಪಕ್ಕದ ಹಳ್ಳಿಯವರು" ಎಂಬ ಪ್ಲೇಟ್ ಹಾಕಿ, ನೂರೋ, ಇನ್ನೂರೋ ಜೇಬಿಗಿಳಿಸುತ್ತಾರೆ. ಇಂತಹವರ ಪಟ್ಟಿಗೆ ಈಗ ಹಗಲು ಕುಡುಕರು, ಮೈಗಳ್ಳರು, ಹೆಡ್ಡು-ಬುಷ್ ಮತ್ತು ಸಿಂಗಲ್ ನಂಬರ್ ಗಿರಾಕಿಗಳೆಲ್ಲಾ ಸೇರ್ಪಡೆಯಾಗಿದ್ದಾರೆ. ಕುಮಾರ ಸ್ವಾಮಿಗೂ ಇದು ಗೊತ್ತಾಗಿರಬಹುದು! ಆದರೇನು ಮಾಡುವುದು? ಇವರೂ ಮತದಾರರು. ಅಥವಾ "ಗಣಿಯ ದುಡ್ಡನ್ನು ಗಣಿಗೆ ಚೆಲ್ಲಿ" ಎಂಬಂತೆ ಮಣ್ಣಿನಿಂದ ಬಂದ ದುಡ್ಡು ಮಣ್ಣಿಗೆ ಹೋಗಲಿ ಎಂಬ ವೇದಾಂತವಿರಬೇಕು.

ಇನ್ನು ಹೆಣ್ಣು ಮಕ್ಕಳಿಗೆ ಇವರ ಸರ್ಕಾರ ಹಂಚಿರುವ ಸೈಕಲ್‌ಗಳ ಕತೆ ಕೇಳಿ. ಇವುಗಳಲ್ಲಿ ಬಹಳಷ್ಟು ಸೈಕಲ್‌ಗಳು ಗಿರವಿ ಅಂಗಡಿಗಳಲ್ಲಿವೆ, ಹಲವಾರು ಮಾರಾಟವಾಗಿವೆ. ಉಳಿದ ಸೈಕಲ್‌ಗಳು ಹುಲ್ಲು, ಎಮ್ಮೆಗಳಿಗೆ ಮೇವು ತರಲು, ಹಾಲು ಹಾಕಲು ವಿದ್ಯಾರ್ಥಿನಿಯ ಅಪ್ಪ, ಅಣ್ಣ, ತಮ್ಮ ಬಳಸುತ್ತಿದ್ದಾರೆ. ಶಾಲೆಯ ಪಕ್ಕದಲ್ಲೇ ಮನೆಯಿರುವ ವಿದ್ಯಾರ್ಥಿನಿಗೂ ಕುಮಾರಸ್ವಾಮಿ ಸರ್ಕಾರ ಸೈಕಲ್ ಉಡುಗೊರೆ ನೀಡಿದರೆ ಮತ್ತಿನ್ನೇನಾಗುತ್ತದೆ? ಅಂಬೇಡ್ಕರ್ ಯೋಜನೆ ಅನ್ವಯ ನಾಯಕ ಜನಾಂಗದವರಿಗೆ ನೀಡಿದ 5 ಸಾವಿರ ರೂಪಾಯಿ ಸಾಲವೂ ಇದೇ ಹಾದಿ ಹಿಡಿಯಿತು. ಹಬ್ಬದ ಖರ್ಚಿಗೆ ಕಾಸಿಲ್ಲ ಎಂದು ಕೂತಿದ್ದ ಬಡ ನಾಯಕರು, ಕುಮಾರಣ್ಣ ಕೊಟ್ಟಿದ್ದ ಬ್ಯಾಂಕ್ ಚೆಕ್ಕನ್ನು ನಿಯತ್ತಾಗಿ ಮಾರ್ವಾಡಿಗಳ ಹತ್ತಿರ ಹೋಗಿ ಕ್ಯಾಶ್ ಮಾಡಿಸಿಕೊಂಡು ತಮ್ಮ ಸಣ್ಣಪುಟ್ಟ ಸಾಲ ತೀರಿಸಿಕೊಂಡು, ಹಬ್ಬಕ್ಕೆ ಸ್ವಲ್ಪ ಉಳಿಸಿಕೊಂಡಿದ್ದಾರೆ.

ದ್ಯಾವೇಗೌಡ್ರು ಮುಸ್ಲಿಂ ಆಗಕ್ಕೆ ಸಾಧ್ಯವಿಲ್ಲ ಕಣ್ರೊ



ಈ ವೇಳೆಗೆ ತೆನೆತೊತ್ತು ತೆನೆದೂಗಬೇಕಾಗಿದ್ದ ಹೊಲಗಳು ಬೋಳಾಗಿ ಮಲಗಿದ್ದವು. ಆದ್ದರಿಂದ ದೀವಳಿಗೆಯ ಸಂಭ್ರಮವೇ ಇರಲಿಲ್ಲ. ಹ್ಯಾಪು ಮೋರೆಯೊಂದಿಗೆ ಕುಳಿತಿದ್ದ ಕಾಳಮಾವನ ಟೀಮನ್ನು ಕೆಣಕಲೋಸ್ಕರ ಎಂಬಂತೆ, ಯಾವುದೋ ಹುಡುಗ ಒಂದು ಸಣ್ಣ ಪಟಾಕಿ ಹಚ್ಚಿಬಿಟ್ಟಿತು. ಕೂಡಲೇ ಸಿಟ್ಟಾದ ಕಾಳಮಾವ.

"ಹ್ವಗಿಲ ಹಿಡಕಂಡದ" ಎಂದ. ಅಷ್ಟಂದ ಕೂಡಲೇ ಉಗ್ರಿ ನಾಯಿಯಷ್ಟು ಬೆಸೆಯಿಂದ ಓಡಿದ. ಬೆದರಿದ ಹುಡುಗ ಮೊಲದಷ್ಟು ವೇಗವಾಗಿ ಊರಗಲ್ಲಿ ಬಿದ್ದು ಪರಾರಿಯಾಯ್ತು. ಉಗ್ರಿ ನಗರುತ್ತ ವಾಪಸು ಬಂದ.

"ಯಾರುಡುಗನ್ನ ಅದು?"

"ಮುದ್ದಣ್ಣನ ಹುಡುಗ ಕಣೊ, ಕಣ್ಗೆ ಕಾಣದಂತೆ ಓಡಿಬುದ್ರು."

"ಪಟಾಕಿ ಕಿಡಿ ಯಾವುದಾರ ಹುಲ್ಲು ಮ್ವದಿಗೆ ಬಿದ್ದು ಅದಚ್ಚಗಂಡು ಊರೇ ಬೆಂದೋದ್ರೆ ಗತಿಯೇನೋ?"

"ಏ ಅವೆಲ್ಲೊ ಸಣ್ಣಗೆ ಈರುಳ್ಳಿ ಪಟಾಕಿಯಂಗವೆ. ಹ್ವಡಕಳ್ಳಿ ಬುಡು" ಎಂದ ಉಗ್ರಿ.

"ಪಟಾಕಿ ಸಣ್ಣದಿರಬವುದು, ಕಿಡಿನು ಸಣ್ಣದಿರಬವುದು, ಆದ್ರೆ ಬೆಂಕಿ ಹಚಗಂಡ ಮ್ಯಾಲಲ್ಲವೆ ಕಾಣದು. ಈಗ ಹ್ವಡಿತಾಯಿರೊ ರಣಬಿಸಿಲಿಗೆ ಯಾರಾರ ಬೆಂಕಿ ಆರಸಕ್ಕಾದತೇ" ಎಂದ ಕಾಳಮಾವ.

"ಊ ಅದು ನಿಜವೆಯ, ಬ್ಯಾಸಗೆ ಬೆಂಕಿ ಒಂಥರಾ ಬಜೆಪಿಗಳ ಬೆಂಕಿಯಿದ್ದಂಗೆ. ಆ ಮಂಗಳೂರು ಕಡೆ ಅವರಚ್ಚಿದ ಬೆಂಕಿ ಇನ್ನ ಆರಿಲವಂತೆ ನೋಡು"

"ಅದ್ಯಾಕ್ ಬೆಂಕಿ ಹಾಕಿದ್ರಲ್ಲೀ" ಎಂದಳು ಜುಮ್ಮಿ.

"ಆ ಕಡೆ ಸಾಬರಿಗೂ ಬಜೆಪಿಗಳಿಗೂ ಮದ್ದಿಂದ ಆಗದಿಲವಂತೆ ಕಣೆ; ಅವುರೇನು ಮಾಡ್ತರೆ ಅಂತ ಇವುರು, ಇವುರೇನು ಮಾಡ್ತರೆ ಅಂತ ಅವುರು, ಕಾಯದೆ ಆಗ್ಯದಂತೆ."

"ಸೇಡಿಗೆ ಬಿದ್ದು ಬುಟ್ಟವುರೆ ಅನ್ನು" ಎಂದ ಕಾಳಮಾವ.

"ಊ. ಯಾವನೋ ಸಾಬಿ ಟೆಂಪೊದಲ್ಲಿ ಹಸ ತುಂಬಕಂಡು ಹೋಯ್ತಾಯಿದ್ದನಂತೆ, ಆಗ ಯಾರಾರ ನೋಡ್ಯರೂ ಅಂತ ಹೈಸ್ಪೀಡಿನಲ್ಲಿ ಹೋಯ್ತಾಯಿದ್ದಾಗ ಯಾವುದೋ ಹೆಂಗುಸಿಗೆ ಡಿಕ್ಕಿ ಹ್ವಡದು ನಿಲ್ಲಸದಂಗೋದನಂತೆ ಅಷ್ಟೇ. ಹತ್ತಿಗತ್ತು ನೋಡಪ್ಪಾ, ಆ ಬೆಂಕಿ ಆರಸಕ್ಕೆ ಇನ್ನು ಆಗಿಲ್ಲ."

"ಆ ಸಾಬರು ತಾನೆ ಯಾಕ್ಲ ಅಂಗೆ ಬಯಿರಂಗವಾಗಿ ಧನ ಓಡಿಸಿಗಂಡೋಗಿ ಕುಯ್ಕಂಡು ತಿನ್ನಬೇಕು?" ಎಂದ ಕಾಳಮಾವ.

"ಅದರಲ್ಲು ಹಸು ಕುಯ್ಕಂಡು ತಿಂದ್ರೆ ಹಿಂದೂಗಳು ಸುಮ್ಮನಿದ್ದರೆ" ಎಂದ ಸೀರ.

"ಅದ ಕಂಡೆ ಕಣೊ ಬಜೆಪಿಗಳು ಎತ್ತು ಎಮ್ಮೆ ಅನ್ನದಿಲ್ಲ, ಹಸುನೆ ಹ್ವಡಕಂಡೋದ್ರು ಸಾಬ್ರು ಅಂತ ಬಬ್ಬೆ ಹಾಕಿ ಬುಡ್ತರೆ. ಆ ಸಾಬಿ ನನ್ನ ಮಕ್ಕಳ ತಾನೆಯ ಏನಾರ ಬಗ್ಗಂಗಿದ್ದರೆ? ಕ್ಯಟ್ಟಮೇಲೆ ಲೊಟ್ಟೆ ಅಂತ ತಿರಿಗಿಬದ್ದವುರೆ. ಅವುರ ಗಲಾಟ ನಿಲ್ಲಸೊ ಅಂತ ಸರಕಾರ ಬ್ಯಾರೆ ಇಲ್ಲ. ಅಂತೂ ಅವುರವುರೆ ಸುಮ್ಮನಾಗಂಗೆ ಕಾಣ್ತದೆ."

"ಸಾಬರು ಹಸ ಕುಯ್ಕಂಡು ತಿಂದ್ರು ಅಂದ್ರೆ ನನಿಗೂ ಹ್ವಟ್ಟುರಿತದೆ ಕಂಡ್ಯ" ಎಂದ ಕಾಳಮಾವ.

"ಉರಿಯದಿಲವೆ? ಒಂದೊಂದು ಮಗುಟ್ಟದಾಗ್ಲು ಒಂದೊಂದು ಈದಸ ತತ್ತಿದ್ವೆ. ಮಕ್ಕಳಿಗೆ ಆಲು ಕುಡಸವು, ತಾಯಿ ಸತ್ತ ಮಕ್ಕಳಿಗೆ ಅವೇ ತಾಯಾಗವು. ಅದ್ಕೆ ಹಸ ಅಂದ್ರೆ ಯಲ್ಲಾರಿಗೂ ಒಂಥರಾ ಇದು" ಎಂದ ಉಗ್ರಿ.

"ಅವುನ್ಯಾರೊ ಯಂತ ಪದ ಬರದವುನ್ನ?" ಎಂದ ಕಾಳಮಾವ, ಗೋವಿನ ಗೀತೆ ನೆನಸಿಕೊಂಡು ಒಂದೆರೆಡು ತುಣಕನ್ನ ಗುನುಗುತ್ತಾ,

"ಹಾದಿ ಬೀದಿ ಕಸ ತಿಂದು ಮೇದು ಮನೆಗೆ ಬಂದು ಅಮೃತ ಕೊಡ್ತಿನಿ, ನೀನ್ಯಾರಿಗಾದ್ಯೊ ಮಾನವ.... ಆಹಾ ಯಂತಾ ಪದ ನೋಡದು."

"ಇಟ್ಟರೆ ಸಗಣಿಯಾದೆ, ತಟ್ಟದರೆ ಕುರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ. ತಟ್ಟದೆ ಹಾಕಿದರೆ ಮೇಲು ಗೊಬ್ಬರವಾದೆ. ನೀನಾರಿಗಾದೆಯೋ ಎಲೆ ಮಾನವ ಅಂತ ಬರೀ ಸಗಣಿ ಮ್ಯಾಲೆ ಯಂತ ಪದ ಬರದವುನೆ. ಅದೋಗ್ಲಿ, ಈಗ ಒಂದಸಿನ ಸಗಣಿಲಿ, ಮೂರೆಕ್ರೆ ಭೂಮಿ ಭ್ಯಳಿಬವುದು ಅಂತ ಕಂಡಿಡದವುರೆ ಕಣ ಮಾವ" ಎಂದ ಉಗ್ರಿ.


"ಅದ್ಕಲ್ಲ ಈ ಸಾಬುರಿಗೆಲ್ಲಿ ಗೊತ್ತಾಗಬೇಕು? ನಮ್ಮ ಹಿರಿಯರು ಸುಮ್ಮಸುಮ್ಮನೆ ಕಾಮದೇನು ಅಂದಿದ್ದರೆ?" ಎಂದ ಸೀರ.

"ಏನು ಬ್ಯಾಡಪ್ಪ, ಹಾಲು ಕುಡದಾಗ್ಲೆ ಒಂದು ರುಚಿ, ಮಸುರು ಕುಡದಾಗ ಒಂದು ರುಚಿ, ಬ್ಯಣ್ಣೆ ಬಾಯಿಗಾಯ್ಕಂಡ್ರೇ ಒಂದು ರುಚಿ, ತುಪ್ಪ ನೆಕ್ಕದ್ರೆ ಇನ್ನೊಂದು ರುಚಿ, ಮಜ್ಜಿಗೆ ಕುಡುದ್ರೆ ಇಡೀ ಸರೀಳಾದ ಸರೀಳ ತಣ್ಣೀರಲ್ಲಿ ಮುಳುಗಾಕಿದಂಗಾಯ್ತದಲ್ಲಾ ಇನ್ಯಂಥಾ ಪ್ರಾಣಿ ಇದ್ದತದು" ಎಂದ ಕಾಳಮಾವ ಕಣ್ಣು ಮಿನುಗಿಸಿದ.

"ಅಂಥ ಪ್ರಾಣಿಯ ಸಾಯಗಂಟ ಇಟಗಂಡು ನಮಸ್ಕಾರ ಮಾಡಬೇಕಪ್ಪ, ಸಾಬರಿಗ್ಯಾಕ್ ಮಾರ್ತೀರಿ?"

"ನಾನಂತೂ ಇಲ್ಲೀವರಿಗೂ ಮಾರಿಲ್ಲ ಕಂಡ್ಯ."

"ನೀನು ಸಾಬರಿಗೆ ಮಾರದೆಯಿರಬವುದಪ್ಪಾ, ನಿನ್ನತ್ರ ತಗಂಡೋದೋನು ಸಾಬರಿಗೆ ಮಾರಿರತನೆ."



"ಅದವುನ ಕರ್ಮ!"

"ಅದವುನ ಕರ್ಮ ಅಂದಮ್ಯಾಲೆ ದನ ತಗಂಡೋಯ್ತಾಯಿರೊ ಸಾಬಿಗ್ಯಾಕೆ ಓಡಿಸ್ಯಾಡಿಕಂಡು ವಡಿತಿರೀ? ಅದೇ ನಮ್ಮ ಹಿಂದೂಗಳಲ್ಲೇ ಕಟ್ಟಕಡೆ ಜಾತಿ ದನ ಯಮ್ಮೆ ತಿಂತರೆ. ಅವುರ ಕಂಡ್ರೆ ಹೇಸಿಗೆ, ಸಾಬರ ಕಂಡ್ರೆ ಕ್ರೌರ್ಯ ನಿಮಗೆ."

"ಸಾಬರ ಕಂಡು ನಾವ್ಯಾವತ್ತು ಬೇದ ಮಾಡಿದ್ದವುಲ? ಅವುರಿಗೆ ನಾವು ಬೇಕು, ನಮಿಗೆ ಅವುರುಬೇಕು ಅಷ್ಟಂಗೆ ಕಾಲ ಮಾಡಿಕಂಡು ಬಂದಿದ್ವಿ."

"ನಿಜ ಕಣ ಮಾವ, ಯಾವತ್ತು ಈ ಬಿಜೆ... ಹುಟ್ಟಗಂಡ್ರೊ, ಅವತ್ತಿಂದ ಸಾಬರ ಮ್ಯಾಲೆ ... ಕತ್ತಿ ಮಸಿಯಂಗೆ ಮಾಡಿದ್ರು, ಅದರಲ್ಲೂ ಅವ... ಸರಕಾರ ಈಗ, ಅಂತದ್ರಲ್ಲಿ ಮಂಗಳೂರು ಗ... ಯಂಗೆ ನಿಂತತೂ?"

"ಹೊಂ ಮಿನಿಟ್ರು ಪ್ರಕಾಸಲವೆ?" ಎಂ... ಜುಮ್ಮಿ.

"ಪ್ರಕಾಶನೂ ಗೋವಿನ ಗೀತೆ ಗಿರಾಕಿ ಕಣೆ..."

"ಗೋವಿನ ಗೀತೆ ಅಂದ್ರೆ?"

"ಹಿಂದೆ ಬಂದರೆ ಹಾಯಬೇಡಿ, ಮುಂದೆ ಬ... ಒದೆಯಬೇಡಿ ಕಂದ ನಿಮ್ಮವನೆಂದು ಕಾಣಿರಿ ... ನೆಂಬೀ ಕರುವನೂ ಅನ್ನೋ ಗೀತೆ ಹಾಡಿದ್ರೆ ... ಕೇರ್ ಮಾಡ್ತರೇ? ಅದ್ಕೆ ಸಾಬರ್ಕಲ್ಲ ದ್ಯಾವೇಗೌ... ಹೋಗಿದ್ರಂತೆ."

"ಅವುನೇನಂದನಂತೆ?"

"ಇನ್ನೇನಂದನೂ? ಹೋದೋರ ತಬ್ಬಿ... ಕಳಿಸ್ಯವುನೆ."

"ಮುಂದ್ನು ಜಲುಮಕ್ಕೆ ಸಾಬುರಾಗಿ ಹುಟ್ಟ... ಅಂದಿದ್ನಂತೆ"

"ಮುಂದಿನ ಜಲ್ಮಕ್ಕೆ ಅವುನು ಮನ... ಹುಟ್ಟುತನೆ ಅನ್ನದ್ಯಾವ ಗ್ಯಾರಂಟಿ, ಅದ್ಕೆ ಈಗ್ಲೆ ಸಾಬ... ವಳ್ಳೆದು."

"ಈಗ ದೇವೇಗೌಡ್ರು ಸಾಬರಾಗಕ್ಕೆ ಆಗದಿಲ್ಲ ... ಉಗ್ರಿ" ಎಂದುಕೊಂಡು ವಾಟಸ್ಸೆ ಬಂದ.

"ಅದ್ಯಾಕಾಗದಿಲವೊ?"

"ಸಾಬರಾಗದು ಸುಮ್ಮನೆಯ ಅಂತ ತಿಳಿಕ... ದ್ಯಾವೇಗೌಡ್ರ ಹೆಸರು ಬದ್ಲಾಸ್ತರೇ"

"ಬದ್ಲಾಸಿಗಳ್ಳಿ ಬುಡೊ, ಬೇಕಿದ್ರೆ ದಾ... ಪಿರ್ರೇಗೌಡ ಅಂತ ಬದ್ಲಾಸಿಗಳ್ಳೇಳು."

"ಅದು ಸರಿಯಪ್ಪ, ಮುಂಜಿ ಮಾಡ್ತಾ... ಮುಂಜಿ ಅಂ... ಸಾಮಾನಿನ ತುದಿಯ ಚೆನ್ನ... ಯರದಂಗೆ ಯರಿತರೆ. ಗಾ... ಸುಗರ್ರಿರದ್ರಿಂದ... ಗಾಯ ಮಾಯದಿಲ್ಲ, ಸಪ್ಟಿಕ್ಕಾಗಿ ರಣಗಾಯಾಗಿ... ಕಡಿಗೆ ಅದರಲ್ಲೇ ಹೋದ್ರು ಹೋದ್ರೆಯಾ" ಎ... ವಾಟಸ್ಸೆ ನಕ್ಕ.

"ಹೋಗಲಿ ಬುಡತ್ತಗೆ, ಇನ್ನೇನು ಮಾ... ಕ್ಯಲಸನ್ನಲ್ಲ ಮಾಡಿ ಆಯ್ತಲ್ಲ, ಇನ್ನೇನುಳುದಿದ್ದತಿ..."


"ಅದೂ ನಿಜವೆಯ!"

"!?"

–ಬಿ.ಚಂದ್ರೇಗೌ...

Zero Hour ಮುನ್ನಿ


೧. ಮದುವೆ ಕುರಿತು ಕೇಳಿದ್ರೆ 'ಎಲ್ಲವನ್ನೂ ವಿಧಿಗೆ ಬಿಟ್ಟಿದ್ದೇನೆ. ಹಣೆಬರಹ ಎಲ್ಲ ನಿರ್ಧರಿಸುತ್ತೆ. ದೇವರು ಸಮಯ ನಿರ್ಧರಿಸುತ್ತಾನೆ' ಎಂದಿದೆಯಲ್ಲ ಐಶೂ ಬೇಬಿ?



a) ದೇವರ ಹೆಸರಲ್ಲಿ 'ಅಭಿಷೇಕ'.....
b) ತಾನು ಮಾಡೆಲ್ ಆಗಿರೋ 'ಲಾಂಗಿನೆಸ್' ವಾಚ್ ಕಟ್ಟಿರಬೇಕು, ಅದಕ್ಕೇ ದೇವರು ಸಮಯ ನಿರ್ಧರಿಸುತ್ತಾನೆ ಅಂದವ್ಳೆ
c) ದೇವರು ಅಂದ್ರೆ ಅಲ್ಲಾಹ್ ಎಂಬುದು ಸಲ್ಮಾನ್ ಗೊಣಗಾಟ
d) ಏಷಷ್ಟು ಈ ಮದುವೆ ಅದ್ರೆ ನೂರಾರು ಹುಡುಗರು ಸಾಯ್ತಾರಮ್ಮಾ....

೨. ಭಾರತದ ಬೌಲರ್‌ಗಳೂ ಡ್ರಗ್ಸ್ ಸೇವಿಸಿ ಆಡಿದರೆ ಹೇಗಿರುತ್ತೆ?
a) 'ನಶಾ' ಏರಿ ಬೌಲಿಂಗ್‌ನ 'ದಿಶಾ' ದಿಕ್ಕುತಪ್ಪುತ್ತೆ....
b) 'ನನ್ನ ಎನರ್ಜಿಯ ಗುಟ್ಟು ಪುಳಿಯೊಗರೆ' ಅಂತಿದ್ದ ಶ್ರೀನಾಥ್ ಡ್ರಗ್ಸ್ ಸೇವಿಸಬೇಕಿತ್ತು
c) ಕುಂಬ್ಳೇಗೇನಾದರೂ ಕೊಟ್ಟರೆ ಲೆಗ್‌ಸ್ಪಿನ್ ಮರೆತು ಫಾಸ್ಟ್ ಬೌಲಿಂಗ್ ಮಾಡ್ತಾನೆ
d) ಎಲ್ಲ ನೋಬಾಲ್ ಆಗ್ತಾವಷ್ಟೇ!
e) ಪೆಪ್ಸಿ, ಕೋಕ್‌ಗಳೆಂಬ ವಿಷ ಕುಡಿವ ಇವರಿಗೆ ಡ್ರಗ್ಸ್ ಯಾವ ಲೆಕ್ಕ?

೩. ಈ ಚಿತ್ರಕ್ಕೊಂದು ಟೈಟಲ್ಲು ನೀಡಿ



a) ದೇವು ಸಾಬ್, ಕ್ಯಾ ಡ್ರಾಮಾ ಹೈ!
b) ತೇರೆ ಬಿನಾ ಇಲೆಕ್ಷನ್....
c) ಮಗ ಭಂಗಿ ನೆಟ್ಟ; ಅಪ್ಪ ಕಣ್ಣು ಮುಚ್ಚಿಬಿಟ್ಟ....
d) ಮೇರಾ ಕ್ಯಾಪ್ ಹೈ ಮುಸಲ್ಮಾನಿ... ಫೀರ್ ಭಿ ದಿಲ್ ಮೆ ಹೈ ಅಡ್ವಾಣಿ

೪. "ಕೆಂಚಾಲೋ ಮಚ್ಚಾಲೋ ನಾ ಹಾದಲೇಬಾರದಿತ್ತಪ್ಪೊ?" - ಸಿ. ಅಶ್ವತ್ಥ್
a) ದವ್ವ ಬ್ಯಾಡ ಅಶ್ವತು, ಅದೆಲ್ಲಾ ಮುಗ್ದು ಹೋಯ್ತು....
b) 'ಕನ್ನಡವೇ ಸತ್ಯ'ಕ್ಕಿಂತ ಅದೇ ಪರವಾಗಿಲ್ಲ ಅಂತಾರೆ.....
c) ಶಿಶುನಾಳ ಶರೀಫರ ಗೀತೆಗಳನ್ನು 'ಖೋಡೆ' ನೆರಳಲ್ಲಿ ಕೆಡಿಸದಿರಲಿ ಮತ್ತೆ....
d) 'ಸೊಂಟದ ವಿಷ್ಯಾ ಬೇಡವೊ ಶಿಷ್ಯಾ' ಈ ಹಾಡನ್ನು ಅಶ್ವತ್ಥೇ ಹಾಡ್ಬೇಕಿತ್ತು.....

ಒಂದು 'ಗಾದಿ' ಮಾತು

ಕುಮಾರ ತಾನು ಕೆಟ್ಟಿದ್ದಲ್ಲದೇ ರಾಜ್ಯವನ್ನೂ ಕೆಡಿಸಿದ!

ಇಮೇಲ್‌ನಲ್ಲೊಂದು ಇನ್‌ಲ್ಯಾಂಡ್

ಹಿರಿಯ ಮಾವಂದಿರಾದ ದೊಡ್ಡಗೌಡ್ರಿಗೆ,

ರಮ್ಯ-ಗಿಮ್ಯರಿಗೆ ಪತ್ರಾ ಬರೀತಾ ನಿಮ್ಮನ್ನಾ ಮರ್ತು ಬಿಟ್ಟಿದ್ನಾ.... ತಾವೇನು ಖುಷಿಯೊಳ್ಗ ಅದಿರೋ, ದುಃಖ ನುಂಗಿಕೊಂಡು ಸುಮ್ನ ಅದಿರೋ... ಒಂದು ತಿಳಿವಲ್ದು ಗೌಡ್ರ.... ಮೊನ್ನೆ ಇಲ್ಲೇ ನವಲಗುಂದದ ಕಡೆ ಕುಮಾರಸ್ವಾಮಿ ಬಂದಿದ್ನಂತ... ಎಲ್ಲೆಲ್ಲೊ ರೊಟ್ಟಿ ತಿಂದು, ಎಲ್ಲೆಲ್ಲೊ ಮಲಗ್ತಾನ..... ನಮ್ ಧಾರ್ವಾಡ ಕಡಿ ಒಂದಿ... ಬಂದ್ ಹೋಗಾಕೂ ಟೈಮು ಸಿಕ್ಕಿಲ್ಲ ನೋಡು....

ನೀವ್ ಬಾಳ ಪುಣ್ಯಾ ಮಾಡೀರಿ ಗೌಡ್ರ.....

ಕುಮಾರನ ರಾಜ್ಯಭಾರದಾಗ ರೇವಣ್ಣ, ಬಾಲಣ್ಣ, ರಮೇಶ ಮಾ... ಅಷ್ಟ ಅಲ್ದ ನಮ್ ಅನಿತಕ್ಕ, ಭವಾನಕ್ಕ, ಕವಿತಕ್ಕ.... ಜೊತೆಗೆ ... ಹೆಣ್ಮಕ್ಕಳು... ಅಳಿಯಂದಿರು... ಎಲ್ಲಾರ್ಗಿಗೂ ಹಾಲು ಕೊಟ್ಟೀರಿ... ... ಕುಮಾರ ಮಾಮಾಗ ಒಬ್ಬಗೆ ಅಧಿಕಾರ ಕೊಡ್ಬೆ ಎಲ್ರಿಗೂ ಹ... ಹಂಚಿ ಸಮಾಜವಾದ ಮೆರೆದಿರಿ..... ನೀವ್ ಇನ್ನೊಮ್ಮೆ P.M. ... ಆಗ್ತೀರಿ....

-ಮುನ್ನಿ (Zero Hour), ಧಾರ...

ಒಂದು CD ಗವನ

ಎಸೆದವರಾರು
ಸಂಸತ್ತಿಗೆ ಕಲ್ಲು....
ಗೊತ್ತಿಲ್ಲ.....
ಗೊತ್ತಿಲ್ಲವಂತೆ ಕೋರ್ಟಿಗೂ....
ಸಂಸತ್ತಿನ ಹಾರ್ಟಿಗೂ.....
ಪಾಪಿಗಳಾದರು ಸಿಕ್ಕವರಲ್ಲ
ಹೆಣೆದವು ಮೀಡಿಯಾ
ಕತೆಗಳ ಸರಣಿ
ಪಾರಾದನು ಹೇಗೋ ನಿಷ್ಪಾಪಿಯೊ...
ನೇಣಿನ ಬಲೆಗೆ ಮತ್ತೊಬ್ಬ.....
ಸಂಸತ್ತಿಗೆ ಕಲ್ಲು....
ಸತ್ಯಕ್ಕೆ ನೇಣು!!

ಉತ್ತರಗಳು: 1) d, 2) e, 3) d, 4) c


ವಂಚನೆ

ಈ ವಲಯದಲ್ಲಿ ಇರುವುದು ಒಂದು ಬಗೆಯ ವಂಚನೆಯಲ್ಲ.

ಮೊನ್ನೆ ನಮ್ಮದೊಂದು ಕೊಳವೆ ಬಾವಿಯ ಪಂಪ್‌ಸೆಟ್ ಕೆಟ್ಟಿತು. ಹಾಕಿಸಿ ಒಂದು ವರ್ಷವಾಗಿಲ್ಲ. ಹಾಕಿದವರು ನಮ್ಮ ಪರಿಚಿತರು ಕೂಡ. ಎರಡು ದಿನ ಇಟ್ಟುಕೊಂಡು ರಿಪೇರಿ ಮಾಡಿದ ಈ ಪಂಪಿನವರು ಎರಡೂವರೆ ಸಾವಿರ ರೂ.ಗಳಿಗೆ ಬಿಲ್ ಕಳಿಸಿದರು. ಹೊಸದೇನಾದರೂ ಪಾರ್ಟ್ಸ್ ಹಾಕಿದ್ದೀರಾ ಎಂದರೆ, ಇಲ್ಲ. ಎರಡು ದಿನದ ರಿಪೇರಿಗೆ – ಅಷ್ಟು ಹೊತ್ತು ಮಾಡಿದ್ದೀರೆಂದು ಇಟ್ಟುಕೊಂಡರೂ ಎರಡೂವರೆ ಸಾವಿರ ಏಕೆ? ನಾವೇನೋ ಕೊಡಬಹುದು. ಬಡ ರೈತರು ಹೇಗೆ ಕೊಡುತ್ತಾರೆ? ಇಂಥ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿಲ್ಲ. ಕೊಳವೆ ಬಾವಿ ಹೊಡೆಯುವ ರಿಗ್‌ನ ಅನೇಕರಂತೆಯೇ ಇಲ್ಲಿ ಅಸ್ಪಷ್ಟ ಉತ್ತರ. ಏಕೆಂದರೆ ಇಲ್ಲಿ ಸರ್ಕಾರಿ ಬ್ಯಾಂಕುಗಳೊಂದಿಗೆ ಒಪ್ಪಂದ, ವ್ಯಾಪಾರದ ಕರಾಳ ಖರೀದಿ, ಸಾರ್ವಜನಿಕರ ಹಣ ದೋಚುವಿಕೆ ಎಲ್ಲ ಆಗುತ್ತಲೇ ಹೋಗುತ್ತವೆ.ಆದ್ದರಿಂದ ಹಣ ಮೆದ್ದ ಮದ ಹಣಕ್ಕಾಗಿ ಒಳಗಿನಿಂದ ಒತ್ತಾಯ ಮಾಡುತ್ತಲೇ ಇರುತ್ತದೆ. ಇದು ಕೃಷಿಗೆ ಸಂಬಂಧಿಸಿದ ಕೈಗಾರಿಕೆಯ ರೀತಿ.



ನೀವು ಸ್ಪ್ರಿಂಕ್ಲರ್ ನೋಡಿರಬಹುದು. ಈ ಪೈಪುಗಳನ್ನು ಹಾಕುವವರು ಎಂಥ ಕೇಡಿಗಳೆಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ಸ್ಪ್ರಿಂಕ್ಲರ್ ಹಾಕಲು ಪೈಪುಗಳು ಬೇಕು. ಅವುಗಳನ್ನು ಆದಷ್ಟೂ ಹೆಚ್ಚಾಗಿ ಮಾರಿದರೆ ಈ ಸ್ಪ್ರಿಂಕ್ಲರ್ ಕಂಪನಿಗಳಿಗೆ ಲಾಭ. ಮೊನ್ನೆ ಸ್ನೇಹಿತರ ಜಮೀನೊಂದಕ್ಕೆ ಹಾಕುವಾಗ ನಾನು ಹೇಳಿದೆ. ಇಡೀ ಜಮೀನಿಗೆ ಸುಲಭ ಬೆಲೆಯ ಪ್ಲಾಸ್ಟಿಕ್‌ನಲ್ಲಿ ಮಾಡಿದ ಪಿವಿಸಿ ಪೈಪ್ ಹಾಕಿದ್ದಾರೆ; ಈ ಪಿವಿಸಿ ಪೈಪುಗಳಿಂದಲೇ ನಮ್ಮ ಸ್ಪ್ರಿಂಕ್ಲರ್ ಪೈಪುಗಳನ್ನು ಹಾಕಿದರೆ ನಾಲ್ಕೈದು ಸ್ಪ್ರಿಂಕ್ಲರ್‌ಗಳಲ್ಲೇ ಎಲ್ಲ ಆಗುತ್ತದೆ. ಆತ ದಂಗಾದ. "ಇಲ್ಲ ಸಾರ್, ಪಿವಿಸಿ ಪೈಪ್ ಒಡೆಯುತ್ತದೆ, ನೀರಿನ ಒತ್ತಡ ಜಾಸ್ತಿ ಇರುತ್ತದೆ" ಎಂದು ಸುಳ್ಳು ಬೊಗಳಿದ. ಪಿವಿಸಿ ಪೈಪ್ ಅಡಿಯೊಂದಕ್ಕೆ ಆರು ರೂಪಾಯಿ; ಸ್ಪ್ರಿಂಕ್ಲರ್ ಪೈಪ್ ಅಡಿಗೆ ಇಪ್ಪತ್ತೈದು ರೂಪಾಯಿ! ನಾನು ಆತನ ಮಾತನ್ನು ಅಲ್ಲಗಳೆದಾಗ ಹೇಳಿದ, "ಸರಿ ಸಾರ್, ದಯವಿಟ್ಟು ಈ ಪಿವಿಸಿ ಪೈಪ್ ವಿಚಾರ ಯಾರಿಗೂ ಹೇಳಬೇಡಿ. ರೈತರು ಅವನ್ನೇ ನೆಲದಲ್ಲಿ ಹೂಳಿ ಕನಿಷ್ಠ ಸಂಖ್ಯೆಯ ನಮ್ಮ ಪೈಪ್ ಕೊಂಡರೆ ನಮ್ಮ ವ್ಯಾಪಾರ ಬಿದ್ದು ಹೋಗುತ್ತೆ!" ಹೇಗಿದೆ ವಿಜ್ಞಾನಿಗಳ, ವ್ಯಾಪಾರಿಗಳ ತರಲೆ?




ಆಗಸ್ಟ್ 7, 1988

ವಿಶ್ವಮಾನವ

ಮೈಸೂರಿನ ಹೊರವಲಯದ ಒಬ್ಬ ಸ್ನೇಹಿತರ ಮನೆ. ಆವಾಗ ಚೈತ್ರಮಾಸ. ಪ್ರಕೃತಿ ಹಸಿರು, ಹೂವುಗಳಿಂದ ಸಂಭ್ರಮಿಸತೊಡಗಿತ್ತು. ಆ ಮನೆಯ ಹುಡುಗರು ಬೆಳ್ಳಂಬೆಳಿಗ್ಗೆ ದೂರದಲ್ಲಿ ವಯಸ್ಸಾದವರೊಬ್ಬರು ಮರವೊಂದನ್ನು ನೋಡುತ್ತಾ ಗಂಟೆಗಟ್ಟಲೆ ನಿಂತಿರುವುದನ್ನು ನೋಡಿದ್ದರು. ಅವರಿಗೆ ಕುತೂಹಲ. ಮರ ಮತ್ತು ವೃದ್ಧ. ಏನನ್ನು ನೋಡುತ್ತಿರಬಹುದು? ಆ ಮರದಲ್ಲಿ ಏನು ಪವಾಡವಿರಬಹುದು?

ಒಮ್ಮೆ ಆ ಸ್ನೇಹಿತರು ಕುತೂಹಲಕ್ಕೆ ಮರದ ಹತ್ತಿರ ಹೋಗಿ ನೋಡಿದರು. ನಂದಿ ಮರ. ರಾಶಿಗಟ್ಟಲೆ ತನ್ನ ತಿಳಿನೀಲಿ ಹೂ ಬಿಟ್ಟು ನಿಂತ ನಂದಿಮರ. ದುಂಬಗಳು, ಹಕ್ಕಿಗಳು ಹೂಗಳ ನಡುವೆ ಹಾಡಿ ಆನಂದಿಸುತ್ತಿವೆ. ವರ್ಷವೆಲ್ಲ ಆ ಮರ ಪಡೆದ ಸೌಭಾಗ್ಯ ಆ ಕೆಲವು ದಿನಗಳಲ್ಲಿ ಹೂವುಗಳಾಗಿ ಹೊಮ್ಮುತ್ತಿರುವಂತೆ ಕಾಣುತ್ತದೆ. ಹಕ್ಕಿ, ದುಂಬಿ, ಚಿಟ್ಟೆಗಳ ದಿನನಿತ್ಯದ ವ್ಯಾಪಾರ ಕುತೂಹಲಕರವಾಗದೆ. ಹೂವುಗಳ ನಡುವೆ ಚಿಮ್ಮುತ್ತಿರುವ ಬೆಳಗಿನ ಬಿಸಿಲು ಕೂಡ. ಅಲ್ಲಿ ನಿಂತಿರುತ್ತಿದ್ದವರು ಕುವೆಂಪು ಎಂದು ತಿಳಿಯಿತು.



ಕೋಮಲ ಉದ್ಯಮ

ಹೂವುಗಳನ್ನು ಕುರಿತು ಬರೆಯುವುದಿದೆ. ನಮ್ಮ 'ಪ್ರಗತಿರಂಗ'ದ ಪ್ರಣಾಳಿಕೆ ತಲೆಯುಸ್ತಿಲ್ಲ ತಿನ್ನುತ್ತಿದೆ. ಅಂಜಿಕೆಯಿಂದ, ನಿಷ್ಠುರತೆಯಿಂದ, ಎಚ್ಚರಿಕೆಯಿಂದ ಪದರ ಪದರವಾಗಿ ಬಿಡುಸುತ್ತಿದ್ದಂತೆ ಬಿಡುವು ಬೇಕೆನ್ನಿಸುತ್ತದೆ. ಸುಮ್ಮನೇ ಕೂತು ಪತ್ರಿಕೆಗಳ ಹಾಳೆ ತಿರುವುತ್ತಾ ಹೋಗುತ್ತೇನೆ. ಅಲ್ಲೊಂದು ಲೇಖನ ಕಣ್ಣು ಸೆಳೆಯುತ್ತದೆ. ಹೂವುಗಳ ವ್ಯಾಪಾರ. ಹೂವುಗಳ ವಿತರಣೆ.

ಜಗತ್ತಿನ ಹೂವುಗಳ ಕೇಂದ್ರ ಹಾಲೆಂಡ್ ಎಂದು ಗೊತ್ತಿರಲಿಲ್ಲ. ಹಾಲೆಂಡ್, ಡೆನ್ಮಾರ್ಕ್‌ಗಳೆಲ್ಲ ಬರೀ ಡೇರಿ, ಹಾಲು, ಬೆಣ್ಣೆ ಮತ್ತು ಅವನ್ನು ಆಧಾರಿತ ವಸ್ತುಗಳಿಗೆ ಪ್ರಖ್ಯಾತವೆಂದು ತಿಳಿದಿದ್ದೆ. ಅದರ ಜೊತೆಗೆ ಇನ್ನೊಂದು ವಿಷಯ ಗೊತ್ತಿತ್ತು. ಹಾಲೆಂಡಿನವನು ಪ್ರಖ್ಯಾತ ಚಿತ್ರಕಾರ ರೆಂಬ್ರಾಂಟ್; ಈತ ಈ ನಾಡಿನ ಸಾಂಸ್ಕೃತಿಕ ಮಕುಟ. ಇವನ ಚಿತ್ರಗಳಿಗಾಗಿಯೇ ಮ್ಯೂಸಿಯಂ ಇದೆ.

ಈ ರೆಂಬ್ರಾಂಟ್‌ನ ಹಾಲೆಂಡ್ ಹೂವುಗಳ ಜಾಗತಿಕ ಕೇಂದ್ರ. ಜಗತ್ತಿನ ಎಲ್ಲೆಡೆಯಿಂದ ಹೂವು ತರಿಸಿ ವಿತರಿಸುತ್ತಾರೆ. ಕರ್ನಾಟಕದಿಂದ ಹೂವು ಹಾಲೆಂಡ್‌ಗೆ ಹೋಗುತ್ತದೆ. ಇಲ್ಲಿ ಹೂವುಗಳ ಉದ್ಯಮ ಹೆಚ್ಚು ಮಾಡಲು ಕುಣಿಗಲ್‌ನಲ್ಲಿ ಒಂದು, ಬೆಂಗಳೂರಿನ ವಿಮಾನ ನಿಲ್ದಾಣದ ಬಳಿ ಒಂದು ಗಾಜಿನ ಮನೆ ಕಟ್ಟಿಸಿ ಹೂ ಬೆಳೆಯುವ ಸಿದ್ಧತೆ ನಡೆದಿದೆ. ಇದಕ್ಕಾಗಿ ಕೇಂದ್ರದ ಮಾಜಿ ಮಂತ್ರಿ ಮಕ್ವಾನಾ ಮತ್ತು ಕರ್ನಾಟಕದ ವೈ.ಕೆ. ರಾಮಯ್ಯ ಪ್ರಯತ್ನ ನಡೆಸಿದರು. ಹಾಲೆಂಡ್ ಈ ಹೂವಿನ ಕೇಂದ್ರಗಳಾದ ಗಾಜಿನಮನೆ ನಿರ್ಮಿಸಲು ಆರು ಕೋಟಿ ರೂಗಳನ್ನು ನೀಡಿದೆ. ತೋಟಗಾರಿಕೆಯ ಉಪಕಾರ್ಯದರ್ಶಿ ಹನುಮಂತಯ್ಯನವರು ಹೇಳುವಂತೆ 16,000 ಕೋಟಿ ಬೆಲೆಯ ಹೂವುಗಳನ್ನು ಬೆಳೆಯುವ ಸಾಧ್ಯತೆ ಭಾರತಕ್ಕಿದೆಯಂತೆ. ಇದು ಹೆಚ್ಚು ಕಮ್ಮಿ ಕೇಂದ್ರದ ಬಜೆಟ್! ಈಗ ಕೇವಲ ಒಂದು ಕೋಟಿ ಮೊತ್ತದ ಹೂ ಬೆಳೆಯುತ್ತಿದ್ದೇವೆ. ಕರ್ನಾಟಕದಲ್ಲಿ ಒಟ್ಟು ಇಪ್ಪತ್ತು ಸಾವಿರ ಎಕರೆಯಲ್ಲಿ ಗುಲಾಬಿ, ಸೇವಂತಿಗೆ, ಸಂಪಿಗೆ ಮುಂತಾದವು ಬೆಳೆಯುತ್ತಿವೆ; ಒಟ್ಟು ನಲವತ್ತ ಮೂರು ಸಾವಿರ ಟನ್ ಹೂವು!



ಬೆಳಗ್ಗೆ ಐದಕ್ಕೆ ಹಾಲೆಂಡಿನ ಹೂವಿನ ಕೇಂದ್ರ ತೆರೆಯುತ್ತದೆ. ಅಷ್ಟರಲ್ಲಿ ವಿಮಾನಗಳಲ್ಲಿ ಲಕ್ಷಾಂತರ ಟನ್ ಹೂವು ಬಂದಿರುತ್ತವೆ. ಮಾರಾಟ, ವಿತರಣೆ, ಶುರುವಾಗುತ್ತವೆ. ಕೆಲವೇ ಗಂಟೆಗಳಲ್ಲಿ ಹೂ ಯೂರೋಪಿನ ಎಲ್ಲೆಡೆ, ಜಪಾನ್, ಅಮೆರಿಕಾಗಳಿಗೆಲ್ಲ ಹೋಗುತ್ತದೆ, ಭಾರತದ, ಕರ್ನಾಟಕದ ಹೂವು ಸಂಜೆ ಹೊತ್ತಿಗೆ ಸಾವಿರಾರು ಮೈಲಿ ಆಚೆಯ ಟೇಬಲ್‌ಗಳ ಮೇಲೆ, ಕುಂಡಗಳ ಮೇಲೆ ಇರುತ್ತವೆ!

ಹಾಲೆಂಡ್ ಹೂವಿನ ಕೇಂದ್ರ. ಅಲ್ಲಿ ಹತ್ತು ಸಾವಿರ ಎಕರೆ ಹೂ ತೋಟಗಳಿವೆ. ಚಳಿಗಾಲದಲ್ಲಿ ಹಾಲೆಂಡ್‌ನಲ್ಲಿ ಹೂ ಬೆಳೆಯುವುದಿಲ್ಲ. ಆಗ ಅದು ಭಾರತ, ದಕ್ಷಿಣ ಅಮೆರಿಕಾ ಕಡೆಯಿಂದ ಇನ್ನೂ ಹೆಚ್ಚು ಹೂ ತರಿಸಿಕೊಂಡು ಹಾಲೆಂಡಿನ, ಯೂರೋಪಿನ ವಿವಿಧ ಜಾಗಗಳಿಗೆ ಹಂಚುತ್ತದೆ.

ಕೋಟ್ಯಂತರ ರೂಪಾಯಿನ ಹೂವಿನ ಮಾರ್ಕೆಟ್ಟೇ ಇದೆ ಎಂದರೆ-ನಿಜಕ್ಕೂ ತೀವ್ರವಾಗಿ ಬದುಕು ನಡೆಸಬಲ್ಲ ದೇಶ ಹಣ್ಣು, ಜೇನು, ಪ್ರಾಣಿಗಳಿಂದ ಎಷ್ಟು ಆದಾಯ ಪಡೆಯಬಹುದು!

ಲಕ್ವಾ ಹೊಡೆದ ಜನರು ಮಾತ್ರ ತೆಪ್ಪಗಿರುತ್ತಾರೆ.

ಹೆಂಡತಿಯರು ಬೆಟರ್‌ಹಾಫ್; ಹಾಗಾದರೆ ಗಂಡಂದಿರು?



ಬಿ.ಎಂ.ಪರಶಿವಮೂರ್ತಿ. ಬೆಂಗಳೂರು
ಉಪಚಾರ ಮಾಡಬೇಕು, ಉಪಕಾರ ಮಾಡಬೇಕು, ಯಾರಿಗೆ?
* ಚಾಮುಂಡೇಶ್ವರಿ ಜನಕ್ಕೆ, ಸಿದ್ದು ಸೋಲಿಸೋಕೆ ಅಂತಿದ್ದಾರೆ ಕುಮಾರಣ್ಣ.

ಇಂದಿರಾ ಶ್ರೀಧರ್. ದಾವಣಗೆರೆ
ದಲಿತ ಕವಿ ಡಾ. ಸಿದ್ಧಲಿಂಗಯ್ಯ ಇತ್ತೀಚೆಗೆ ತಮ್ಮ ಮಾತುಗಳ ತೂಕ ಕಳಕೊಂಡಿರುವುದೇಕೆ?
* ಅವರ ಮಾತುಗಳಿಗೆ ಜನಿವಾರ ಗಂಟು ಹಾಕಿಕೊಂಡಿರುವುದರಿಂದ.

ಬಿ.ಚಂದ್ರೇಗೌಡ. ಬೆಂಗಳೂರು
ಹೆಣ್ಣನ್ನು ಅಯಸ್ಕಾಂತಕ್ಕೆ ಹೋಲಿಸುವುದೇಕೆ?
* ಗಂಡಸರು ಕಬ್ಬಿಣದಂತಿರುವುದಕ್ಕೆ.

ವೈ.ಎ. ಸಂತೋಷ್. ಕಂಪ್ಲಿ
ಕೋಪದಿಂದ ಆಡುವ ಮಾತುಗಳು ನಿಜಕ್ಕೂ ಮನಸ್ಸಿನಿಂದಲೇ ಹುಟ್ಕೊಂಡಿರುತ್ತಾ?
* ಸತ್ಯದ ಬೀಜವಂತೂ ಇದ್ದೇ ಇರುತ್ತೆ.


ಬಸವರಾಜ್ ಬೆಸ್ತರ್. ಗುಲ್ಬರ್ಗಾ
ಸಿಮಾಹ್‌ನಲ್ಲಿ ರವಿಶಂಕರ್ ಕಾಣಿಸಿಕೊಂಡನಲ್ಲ?
* ಪ್ರಚಾರದ ರೋಗದ ಬಗ್ಗೆ ಅಲ್ಲಿನ ವೈದ್ಯರು ಅಧ್ಯಯನ ಮಾಡುತ್ತಿದ್ದಾರಂತೆ.

ಸಾಬಿಯಾ ಬೇಗಂ. ದೇವದುರ್ಗ
ಪುರುಷ ಪೊಲೀಸರಿಗೆ ಮೀಸೆ ಭತ್ಯೆ ಇದೆ, ಮಹಿಳಾ ಪೊಲೀಸರಿಗೆ?
* ಬೆಳೆಸಿದರೆ ಬೆಲೆ ಸಿಗಬಹುದು.

ದಿ.ಎಲ್. ಶ್ವೇತಾ. ಹರಪನಹಳ್ಳಿ
ಮಾತೃಭಾಷೆಯಂತೆ ಪಿತೃ ಭಾಷೆ ಯಾಕಿಲ್ಲ?
* ಪಿತೃಪಕ್ಷ ಇದೆಯಲ್ಲ, ಬಿಡ್ರಿ.

ಅಂಬುಜಾ. ಸುರಪುರ
ಹಿಂದಿನ ಸ್ವಯಂವರ ಪದ್ಧತಿಗೂ, ಇಂದಿನ ಲವ್ ಮ್ಯಾರೇಜಿಗೂ ಇರುವ ವ್ಯತ್ಯಾಸ?
* ಅವತ್ತು ಓಡಿ ಹೋಗುವ ತಾಪತ್ರಯ ಇರಲಿಲ್ಲ.

ಪಿ.ಎನ್. ಶ್ರೀವತ್ಸ. ಬೆಂಗಳೂರು
ನವದಂಪತಿಗಳು ಮಕ್ಕಳು ನಿಧಾನವಾಗೇ ಆಗಲಿ ಎಂದು ಅಪೇಕ್ಷಿಸುವುದರ ಉದ್ದೇಶ?
* ನವ ಉತ್ಸಾಹದಲ್ಲಿ ಕಬಾಬ್‌ಮೆ ಅಡ್ಡಿಗಳು ಬೇಡ ಅಂತ.



ಕಾಳೀಹುಂಡಿ ಶಿವಕುಮಾರ್. ಮೈಸೂರು
ಅಮೃತ ಹಸ್ತ ಅಂದರೆ ಯಾರದ್ದು?
* ಸದ್ಯಕ್ಕಂತೂ ಬೇನಾಮಿ ಸಹಿ ಹಾಕುವ ಕವಿತಾ ಬಾಲಕೃಷ್ಣೇಗೌಡರದ್ದು ಅಂತಿದ್ದಾರಂತೆ ಅನಿತಕ್ಕ.

ಮಂಚಾಲಿ ಗುರುರಾಜಚಾರು. ಬಳ್ಳಾರಿ
ಸಂಸಾರ ಮಾಡುವುದು ಗಂಡನ ಮನೆಯಲ್ಲಿ, ಹೆರಿಗೆ ಏತಕ್ಕೆ ತವರು ಮನೆಯಲ್ಲಿ?
* ಅಮ್ಮನಂತೆ ಗಂಡನೂ ಉಪಚಾರ ಮಾಡೋದಾದ್ರೆ ಯಾಕಾಗಲ್ಲ.

ದಿ.ಎಲ್. ನಾಗರಾಜ್. ಹರಪನಹಳ್ಳಿ
ಜೀವನದಲ್ಲಿ ಪಾಠ ಮೊದಲಾ, ಪರೀಕ್ಷೆ ಮೊದಲಾ?
* ಇತ್ತೀಚೆಗೆ ಅಡ್ಮಿಷನ್ ಲೆವೆಲ್‌ನಲ್ಲೇ ಎಲ್ಲಾ ಬಂದುಬಿಡುತ್ತೆ.

ಜಿ.ದಿ.ಎಲ್. ಸುಧಾ. ಗದ್ದಂಬಚ್ಚಹಳ್ಳಿ
ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ, ಪ್ರಿಯಕರನ ಮೇಲೆ?
* ಅಕ್ಕಿ, ನೆಂಟಸ್ತಿಕೆ! ಇತ್ಯಾದಿಗಳ ಬಗ್ಗೆ ಕೇರ್ ಮಾಡದಷ್ಟು ಮೋಹ.

ಕೆ.ಶ್ರೀನಿವಾಸ್. ಮಂಡ್ಯ
ತುಂಟ ಪ್ರಶ್ನೆಗಳಿಗೆ ಮಾತ್ರ ಬಹುಮಾನವೇ?
* ದಡ್ಡ ಪ್ರಶ್ನೆಗಳಿಗಿಂತ ಅವೇ ವಾಸಿ, ಅದಕ್ಕೆ.

ಎ.ಕೆ. ಪಟ್ನಾಭಿ. ಬೆಂಗಳೂರು
ಹೆಂಡತಿಯರು ಬೆಟರ್‌ಹಾಫ್; ಹಾಗಾದರೆ ಗಂಡಂದಿರು?
* ಬಟ್ಲರ್ ಹಾಫ್!

ಬಹುಮಾನಿತ ಪ್ರಶ್ನೆ

ಛೀ ತುಂಟಿ!


ಉಮೇಶನ ಮನೆಯಲ್ಲಿ ಸ್ನೇಹಿತರೆಲ್ಲರೂ ಸೇರಿ ಇಸ್ಪೀಟ್ ಆಡುತ್ತಿದ್ದರು. ಆತನ ಹೆಂಡತಿ ತುಂಬಾ ಸುಂದರಿ ಆಗಿದ್ದು ಗೆಳೆಯ ರಮೇಶನ ಗಮನ ಸೆಳೆದಳು. ನೀರು ಕುಡಿಯುವ ನೆಪ ಹೇಳಿ ಆಕೆಯನ್ನು ಮಾತನಾಡಿಸಲು ಅಡಿಗೆ ಮನೆಗೆ ಹೋದ ರಮೇಶ್ ತನ್ನ ಇಂಗಿತವನ್ನು ಹೇಳಿಕೊಂಡ. ಅದನ್ನು ಕೇಳಿದ ಆಕೆ, "ಓಕೆ, ಆದರೆ ಒಂದು ಸಾವಿರ ರೂಪಾಯಿ ಕೊಡಬೇಕಾಗುತ್ತದೆ" ಎಂದಳು. ಇದಕ್ಕೆ ಒಪ್ಪಿದ ರಮೇಶ ಮರುದಿನ ಮಧ್ಯಾಹ್ನ ಬರುವುದಾಗಿ ಹೇಳಿ ಹೋದ.

ಮಾರನೆ ದಿನ ಆತ ಬಂದು, ತನ್ನ ಆಸೆಯನ್ನು ತೀರಿಸಿಕೊಂಡು, ಅವಳ ಕೈಗೆ ಒಂದು ಸಾವಿರ ರೂಪಾಯಿ ನೀಡಿ ಹೊರಟು ಹೋದ. ಸಂಜೆ ಮನೆಗೆ ಬಂದ ಉಮೇಶ "ಇವತ್ತು ರಮೇಶ ಮನೆಗೆ ಬಂದಿದ್ದನಾ?" ಎಂದು ಕೇಳಿದ.

"ಹೌದು ಬಂದಿದ್ದ" ಎಂದಳು.

"ಅವನು ನಿನಗೆ ಒಂದು ಸಾವಿರ ರೂಪಾಯಿ ಕೊಟ್ಟನಾ?" ಎಂದು ಪ್ರಶ್ನಿಸಿದ.

ಏನೊ ಎಡವಟ್ಟಾಗಿ ಗಂಡನಿಗೆ ಗೊತ್ತಾಗಿದೆ ಎಂದು ಹೆದರಿದ ಹೆಂಡತಿ "ಒಂದು ಸಾವಿರ ರೂಪಾಯಿ ಕೊಟ್ಟ, ಯಾಕೆ ಈ ಪ್ರಶ್ನೆ?" ಎಂದು ಕೇಳಿದಳು.



"ಯಾಕೂ ಇಲ್ಲ, ಇವತ್ತು ಬೆಳಿಗ್ಗೆ ನನ್ನ ಆಫೀಸಿಗೆ ಬಂದ ರಮೇಶ್ ಅರ್ಜೆಂಟಾಗಿ ಒಂದು ಸಾವಿರ ರೂಪಾಯಿ ಬೇಕು. ಮಧ್ಯಾಹ್ನ ಮನೆಗೆ ಬಂದು ಹಿಂದಿರುಗಿಸುತ್ತೇನೆ ಅಂದಿದ್ದ ಅದಕ್ಕೆ ಕೇಳಿದೆ" ಎಂದು ಉಮೇಶ್ ಉತ್ತರಿಸಿದ!

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:


ಕನ್ನಡ ನಿರ್ಮಾಪಕರು ಇನ್ನು ಸಿನಿಮಾ ಮಾಡೋದಿಲ್ವಂತೆ?

ಅಕ್ಟೋಬರ್ 18ರ ಸಂಚಿಕೆಯ ನಮ್ಮ ಪ್ರಶ್ನೆ ಎಂ.ಪಿ. ಪ್ರಕಾಶ್ "ನಾನು ಶರಣನಲ್ಲಾ" ಎಂದಿದ್ದಾರಲ್ಲಾ?

ನಿಮ್ಮ ಉತ್ತರ: ಅವರೇನಿದ್ದರೂ "ಶರಣಾಗತರು" ಮಾತ್ರ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ.ಹಾಲಸ್ವಾಮಿ. ಬೆಂಗಳೂರು

ಕೋದಂಡರಾಂಪುರದ ಕಾಂಟ್ರಾಕ್ಟ್ ಮಾಫಿಯಾ


ಕೊರಂಗು

ತಿರುಗೇಟು ಕೊಟ್ಟ ಖುಷಿ. ಬೇಟೆ ಮಿಸ್ಸಾದ ಅಸಂತುಷ್ಟಿ ಯಾವುದೂ ಆತನ ಮುಖದಲ್ಲಿಲ್ಲ. ಹೆಚ್ಚೆಂದರೆ ಕಣ್ಣಿನ ರೆಪ್ಪೆ ಬಡಿಯಬಲ್ಲ. ತನ್ನ ವೈಭವದ ದಿನಗಳಲ್ಲಿ ಜೊತೆಗಿದ್ದ ಯಾರದರೂ ಸಿಕ್ಕಾಗ ಕಣ್ಣಿಂದ ಒಂದೆರಡು ಹನಿಗಳುದುರಿದರೆ ಮಾತ್ರ ಅವರನ್ನಾತ ಗುರುತಿಸಿದ್ದಾನೆಂದೇ ಅರ್ಥ. ನಗಲಾರ. ಅಳಲಾರ. ಮಾತಿರಲಿ... ಬಾಯಿಂದ ಸದ್ದು ಕೂಡ ಹೊರಡಿಸಲಾರ. ತಿನ್ನಲಾರ ನಡೆಯಲಾರ. ಕೈಯೆತ್ತಿ ತೋರಲಾರ. ತನ್ನನ್ನು ಹೊತ್ತ ವ್ಹೀಲ್ ಚೇರ್‌ನಲ್ಲಿ ಕುಂತವನು ತಲೆ ಎತ್ತಿ ಕೂಡ ನೋಡಲಾರ.

ವೈಜ್ಞಾನಿಕ ಪರಿಭಾಷೆಯಲ್ಲಿ ಆತನಿಗೆ ಜೀವವಿದೆ ಯಾದರೂ ಮಿಕ್ಕಂಥೆ ಆತ ಹೆಣವೆ!

ಅವನು ಬನಾಯ್ಸ್ ರಾಜೇಂದ್ರ.

ತನ್ನನ್ನು ಈ ಸ್ಥಿತಿಗೆ ತಂದ ಕೊರಂಗುವನ್ನು ತನ್ನದೇ ಶಿಷ್ಯ ಶಿವಮೊಗ್ಗ ನಾಗನ ಗ್ಯಾಂಗು ಆತನ ಎರಡೂ ಕೈ ಲ್ಯಾಪ್ಸ್ ಆಗುವಂತೆ ಕತ್ತರಿಸಿದ್ದಕ್ಕೆ ಖುಷಿಯಾಗಲಿ, ಹೊಡೆದ ಗುಂಡು ಆತನ ಮಸ್ತಿಷ್ಕದ ತನಕ ಹೊಕ್ಕಿಯೂ ಕೊರಂಗು ಬದುಕುಳಿದಿದ್ದಕ್ಕೆ ವಿಷಾದದ ಸುಳಿವಾಗಲಿ ಬನಾಯ್ಸ್‌ನ ಇಡೀ ಚರ್ಯೆಯಲ್ಲಿ ಗೋಚರಿಸುತ್ತಿಲ್ಲ. ಏಕೆಂದರೆ ಬನಾಯ್ಸ್ ರಾಜೇಂದ್ರನ ಜ್ಞಾಪಕ ಶಕ್ತಿಯೇ ಉಡುಗಿ ಹೋಗಿದೆ.

ಬಹುಶಃ ಮುಂಬಯಿಯ ಒಂದಾನೊಂದು ಕಾಲದ ಡಾನ್ ಹತ ಅಮರ್ ನಾಯ್ಕನ ತಮ್ಮ ಅಶ್ವಿನ್ ನಾಯ್ಕ್ ಹೇಗೆ ಎದುರಾಳಿಗಳ ಗುಂಡೇಟು ತಿಂದು ಇವತ್ತಿಗೂ ವ್ಹೀಲ್ ಚೇರ್‌ನಲ್ಲೇ ಬದುಕಿದ್ದಾನೋ; ಬನಾಯ್ಸ್‌ನದ್ದು ಅದಕ್ಕಿಂತಲೂ ಹೀನಗತಿ. 2004ರ ಏಪ್ರಿಲ್ ಹದಿನಾಲ್ಕರ ಬೆಳ್ಳಂಬೆಳಿಗ್ಗೆ ತನ್ನ ವಾಕಿಂಗ್ ಮುಗಿಸಿಕೊಂಡು ಕೋದಂಡರಾಂಪುರದ ಲೊಡ್ಡೆ ಚಂದ್ರನ ಅಡ್ಡೆಯಲ್ಲಿ ಕೂತಿದ್ದ ಬನಾಯ್ಸ್ ಮೇಲೆ ಕೊರಂಗು ಎಂಥಾ ಮಾರಕ ದಾಳಿ ರೂಪಿಸಿದ್ದನೆಂದರೆ, ತನ್ನ ಎದುರಿಗೇ ಬಂದು ನಿಂತ ಕ್ವಾಲೀಸ್ ಗಾಡಿಯನ್ನಾಗಲೀ, ಅದರಿಂದ ಲಾಂಗ್ ಹಿಡಿದು ಇಳಿದ ಎಂಟು ಮಂದಿ ಚಲ್ರೇ ಹುಡುಗರ ತಂಡವನ್ನಾಗಲಿ ಆತ ಗಮನಿಸಲೇ ಇಲ್ಲ.

ಆದರ ಹಿಂದಿನ ದಿನವೇ ಲೇಔಟ್ ಕೃಷ್ಣಪ್ಪನವರ ಜೊತೆ ಚುನಾವಣಾ ಪ್ರಚಾರದಲ್ಲಿದ್ದ ಗೋರಿಪಾಳ್ಯದ ಪಂಟರ್ ಅಲ್ತಾಫ್‌ನ ತಮ್ಮಂದಿರಿಬ್ಬರನ್ನು ಮಾಜಿ ಕೌನ್ಸಿಲರ್ ಆರಿಫ್ ಪಾಷಾ ಮತ್ತು ಸೈಲೆಂಟ್ ಸುನೀಲನ ಗ್ಯಾಂಗ್ ಸೇರಿಕೊಂಡು ಕೊಚ್ಚಿ ಹಾಕಿದ ಸುದ್ದಿಯನ್ನು ತಲೆ ತಗ್ಗಿಸಿಕೊಂಡು ಓದುತ್ತಾ ಕುಳಿತಿದ್ದ ಬನಾಯ್ಸ್ ತಲೆ ಎತ್ತುವ ಮೊದಲೇ ಲಾಂಗ್ ನೆತ್ತಿಗೆ ಅಪ್ಪಳಿಸಿತ್ತು. ಆತನ ಬೆಂಗಾವಲಿಗೆಂದು ನಿಂತಿದ್ದ ಅಲಸೂರಿನ ರಾಮು-ಲಕ್ಷ್ಮಣ ಎಂಬ ತಮಿಳು ಧಾಂಡಿಗರ ಪಡೆ ಲಾಂಗ್ ಝಳಪಿಸುತ್ತಾ ಕ್ವಾಲೀಸ್‌ನಿಂದ ಇಳಿದ ಪಡ್ಡೆ ಹುಡುಗರನ್ನು ಕಂಡಿದ್ದೇ ದಿಕ್ಕಾಪಾಲಾಗಿ ಚದುರಿತ್ತು. ಬನಾಯ್ಸ್‌ನ ತಲೆ ಕತ್ತು ಎದೆಯೆನ್ನದೇ ಕತ್ತರಿಸಿದ ಕೊರಂಗು ಶಿಷ್ಯರು ಅಷ್ಟೇ ನಿರುಮ್ಮಳವಾಗಿ ಕ್ವಾಲೀಸ್ ಹತ್ತಿ ಪರಾರಿಯಾಗಿದ್ದರು.

ಅವತ್ತು ಕ್ವಾಲೀಸ್‌ನ ಡ್ರೈವರ್ ಸೀಟಿನಲ್ಲಿದ್ದವನೇ ಕೊರಂಗು. ತಲೆ ಬಗ್ಗಿಸಿ ಪೇಪರ್ ಓದುತ್ತಾ ಕೂತಿದ್ದ ಬನಾಯ್ಸ್‌ನ ಮುಂದೆ ಆತ ಕ್ವಾಲೀಸ್ ತಂದು ನಿಲ್ಲಿಸಿ ತನ್ನ ಹುಡುಗರನ್ನು ಇಳಿಸುವುದಕ್ಕೂ ಮುನ್ನ ಸ್ಪಷ್ಟವಾಗಿ ಹೇಳಿದ್ದ. 'ನೋಡ್ರೋ... ಕೆಲ್ಸ ತುಂಬಾ ಈಜಿ. ನೀವು ಐದು ಜನ ಅವನ ಪಕ್ಕ ನಿಂತವ್ರಲ್ಲ; ಅವರ್‍ನ ಅಟ್ಟಿಸಿಕೊಂಡು ಓಗ್ರಿ. ನೀವು ಮೂರು ಜನ ಪೇಪರ್ ಓದ್‌ತಾವ್ನಲ್ಲ, ಅವನ್ನ ಕತ್ತರಿಸಿ. ಏನಾದ್ರೂ ಹೆಚ್ಚೂಕಮ್ಮಿ ಆಯ್ತು ಅಂದ್ರೆ ಯಾರೂ ಹೆದರ್‍ಕೋಬೇಡಿ. ನೋಡಿ.... ಇದು ಇದೆಯಲ್ಲ...! ಇದು ತಿರುಪತಿ ಲಾಡು ಅಲ್ಲ, ಬಾಂಬು.....! ಇಲ್ಲಿಂದಲೇ ಒಗಾಯಿಸಿ ಬಿಡ್ತೀನಿ... ನಡೀರಿ' ಎಂದಿದ್ದೇ



ಕೊರಂಗು ತನ್ನ ಕೈಯಲ್ಲಿ ಹಿಡಿದಿದ್ದ ಕ್ರೂಡ್ ಬಾಂಬ್ ತೋರಿಸಿದ್ದ.

ಸಣ್ಣದೊಂದು ಪ್ರತಿರೋಧ ಕೂಡ ಇಲ್ಲದೇ ಅವತ್ತು ಬೇಟೆ ನಡೆದು ಹೋಗಿತ್ತು. ಆವತ್ತಿನ ತನಕ ಇಡೀ ಕೋದಂಡರಾಂಪುರವನ್ನು ಆವರಿಸಿಕೊಂಡು ಕೇವಲ ಎರಡು ವರ್ಷದಲ್ಲಿ ಒಂದು ಅಮಾನುಷ ಹತ್ಯೆ ಮತ್ತೊಂದು ಪಾಲಿಕೆ ಇಂಜಿನಿಯರ್‌ನ ಹತ್ಯಾಯತ್ನ ಮತ್ತು ನಡುರಸ್ತೆಯಲ್ಲೇ ರೌಡಿ ಕೊರಂಗುನನ್ನು ಅಟ್ಟಾಡಿಸಿದ್ದ ಬನಾಯ್ಸ್ ರಕ್ತದ ಓಕುಳಿಯಲ್ಲಿ ಬಿದ್ದು ಒದ್ದಾಡುತ್ತಿದ್ದರೆ; ಆತ ಸತ್ತನೆಂದೇ ಭಾವಿಸಿ ಕೊರಂಗು ಗ್ಯಾಂಗ್ ಜಾಗ ಖಾಲಿ ಮಾಡಿತ್ತು. ಬನಾಯ್ಸ್ ಕಮ್ಮಿಯ ಆಸಾಮಿಯೇನಲ್ಲ. ಬೆಂಗಳೂರಿನ ಕುಖ್ಯಾತ ಕಂಟ್ರಾಕ್ಟರುಗಳಾದ ಏಟ್ರಿಯಾ ಧಣಿ ಚಿನ್ನಸ್ವಾಮಿ ರಾಜು, ಕುಪ್ಪರಾಜು,

ರಿವೇಂಜ್ ಕಿಲ್ಲಿಂಗ್ಸ್ 1

● ರಾ. ಸೋಮನಾಥ್


ಬೆಂಗಳೂರು ಅಂಡರ್‌ವರ್ಲ್ಡ್‌ನ ಟ್ರೆಂಡ್ ಇದು. ಉರುಳಿ ಬೀಳುತ್ತಿರುವ ಪ್ರತೀ ರೌಡಿಯ ತಲೆ, ಹಾಗೆ ಬಿದ್ದ ಗಳಿಗೆಯಲ್ಲೇ ಬೇರೊಬ್ಬರ ತಲೆ ತೆಗೆಸುವ ಡೀಲ್ ಕೊಡುತ್ತಿದೆ. ಭೂಗತ ಜಗತ್ತೇ ಒಂದು ಬೇರೆ ಲೋಕವಾಗಿ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ಕ್ರೈಂಅನ್ನು ರೋಚಕತೆಯ ಬದಲಾಗಿ ವಾಸ್ತವ ದೃಷ್ಟಿಯಿಂದ ನೋಡಬೇಕಿದೆ. ಈ ದಶಕದಲ್ಲಿ ಕ್ರೈಂ ಹೇಗೆ ಬೆಂಗಳೂರಿನ ಒಂದೊಂದೇ ಗಲ್ಲಿಗಳನ್ನು ವ್ಯಾಪಿಸಿತು ಮತ್ತು ಅದರ ದುರಂತ ಘಟನಾವಳಿಗಳ ಕುರಿತು ಪ್ರತಿ ವಾರವೂ ಬರಲಿದೆ 'ರಿವೇಂಜ್ ಕಿಲ್ಲಿಂಗ್ಸ್'. ಇದೊಂದು ಚಿಕಿತ್ಸಕ ದೃಷ್ಟಿಕೋನದ ಬರಹ.

ಚಾಮುಂಡಿ ರಾಜು, ಮಹಾನಗರ ಪಾಲಿಕೆಯ ಕಳ್ಳ ಕಂಟ್ರಾಕ್ಟರ್ ಶಾಮರಾಜು, ಮುಂಬಯಿ ಶೂಟರುಗಳಿಂದ ಹತನಾದ ಬಿಲ್ಡರ್ ಸುಬ್ಬರಾಜು ಮುಂತಾದವರ ಸಮೀಪದ ಸಂಬಂಧಿ. ಹುಟ್ಟಿ ಬೆಳೆದದ್ದೆಲ್ಲ ಕೋದಂಡರಾಂಪುರವೇ ಆದರೂ ಇಲ್ಲಿಗೆ ಹತ್ತು ವರ್ಷದ ಹಿಂದೆ ಜಯನಗರಕ್ಕೆ ವಲಸೆ ಹೋಗಿದ್ದ. ಬನಾಯ್ಸ್ ಒಳ್ಳೆಯ ಕಬಡ್ಡಿ ಆಟಗಾರ. ಕ್ರೀಡಾ ಕೋಟಾದ ಅಡಿಯಲ್ಲೇ ಎಚ್‌ಎಂಟಿ ಫ್ಯಾಕ್ಟರಿಯಲ್ಲಿ ಆತನಿಗೆ ಕೆಲಸ ಸಿಕ್ಕಿತ್ತು.


ಕೊರಂಗುನನ್ನು ಆಸ್ಪತ್ರೆಗೆ ಸಾಗಿಸುತ್ತಿರುವುದು

ಆದರೆ ಎಚ್‌ಎಂಟಿಯಿಂದ ವಾಲಂಟರಿ ರಿಟೈರ್‌ಮೆಂಟ್ ಪಡೆಕೊಂಡು, ಬಂದ ದುಡ್ಡಿನಲ್ಲಿ ನಾಲ್ಕಾರು ಟ್ರಾವೆಲ್ಸ್ ಕಾರುಗಳನ್ನಿಟ್ಟುಕೊಂಡು ತನ್ನ ಪಾಡಿಗೆ ತಾನು ಸುಖವಾಗಿದ್ದ ಬನಾಯ್ಸ್‌ನನ್ನು ಹತ್ತು ವರ್ಷಗಳ ನಂತರ ಮತ್ತೆ ಕೋದಂಡರಾಂಪುರಕ್ಕೆ ಕರೆತಂದು ಕೊರಂಗು ವಿರುದ್ಧ ಛೂ ಬಿಟ್ಟವನು ಮಹಾನ್ ಖತರ್‌ನಾಕ್ ಲೊಡ್ಡೆ ಚಂದ್ರ. ಆ ಹೊತ್ತಿಗಾಗಲೇ ಕೊರಂಗು ಬೆಂಗಳೂರು ಅಂಡರ್‌ವರ್ಲ್ಡ್‌ಗೆ ಕೈ ಮುಗಿದು ಆಂಧ್ರದ ತನ್ನ ಹೆಂಡತಿಯ ಊರಲ್ಲಿ ಹಾಯಾಗಿದ್ದ.

ಅದು 2003 ರ ಜುಲೈ ತಿಂಗಳು. ಕೋದಂಡರಾಂಪುರದ ಮುಖ್ಯ ರಸ್ತೆಯಲ್ಲಿ ಗಂಗಮ್ಮನ ದೇವಸ್ಥಾನದ ಜಾತ್ರೆ ಪ್ರತಿ ವರ್ಷ ಅದೇ ತಿಂಗಳಲ್ಲಿರುವ ನಡೆಯುತ್ತದೆ. ಇಲ್ಲಿಗೆ ಐವತ್ತು ವರ್ಷಗಳ ಹಿಂದೆ ಆಂಧ್ರದ ಚಿತ್ತೂರಿನಿಂದ ವಲಸೆ ಬಂದು ಮಲ್ಲೇಶ್ವರದ ಹದಿನೆಂಟನೇ ಕ್ರಾಸ್‌ನಲ್ಲಿ ಸಾವಿರಾರು ಜೋಪಡಿಗಳನ್ನು ಹಾಕಿಕೊಂಡಿದ್ದ ಕಮ್ಮನಾಯ್ಡುಗಳು, ರೆಡ್ಡಿಗಳು, ರಾಜುಗಳೇ ಕ್ರಮೇಣ ಬೆಂಗಳೂರಿನ ಘಟಾನುಘಟಿ ಕಂಟ್ರಾಕ್ಟರುಗಳಾದರು. ಅವರೆಲ್ಲರೂ ತಮ್ಮ ಕುಲದೇವತೆ ಗಂಗಮ್ಮನಿಗೊಂದು ದೇವಸ್ಥಾನ ಕಟ್ಟಿಸಿದ್ದು, ಇವತ್ತು ಅವರೆಲ್ಲ


ಬನಾಯ್ಸ್


ಅದೆಷ್ಟೇ ಕುಬೇರರಾದರೂ ಪ್ರತಿ ವರ್ಷ ಕೋದಂಡರಾಂಪುರದ ಗಂಗಮ್ಮನ ಜಾತ್ರೆಗೆ ಬಂದು ಹೇಗೆ ಪೂಜೆ ಸಲ್ಲಿಸುತ್ತಾರೋ, ಅದೇ ತರ ಕೊರಂಗು ಕೂಡ ಪೊಲೀಸರು ಅದೆಷ್ಟೇ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಹುಡುಕುತ್ತಿದ್ದರೂ ಒಂದಲ್ಲಾ ಒಂದು ವೇಷದಲ್ಲಿ ಜಾತ್ರೆಗೆ ಬಂದು ಪೂಜೆ ಮಾಡಿಯೇ ಪರಾರಿಯಾಗುತ್ತಿದ್ದ.

ಹಾಗೇ 2003ರ ಜುಲೈ ತಿಂಗಳ ಗಂಗಮ್ಮನ ಜಾತ್ರೆಗೆಂದು ಕೊರಂಗು ಬಂದಾಗ ಆತನ ಕಣ್ಣಿಗೆ ಬಿದ್ದವನು ಬನಾಯ್ಸ್ ರಾಜೇಂದ್ರ. ದೇವರಿಗೆ ಕೈ ಮುಗಿದು ಇನ್ನೇನು ತಲೆ ಎತ್ತಬೇಕೆನ್ನುವಷ್ಟರಲ್ಲಿ ಸರಿಸುಮಾರು ಐವತ್ತು ಮಂದಿ ಬಿಳಿ ಪ್ಯಾಂಟು ಶರ್ಟು ತೊಟ್ಟ ಧಾಂಡಿಗರ ಗುಂಪೊಂದು ತನ್ನನ್ನು ದುರುಗುಟ್ಟಿ ಗುರಾಯಿಸುತ್ತಿದ್ದದನ್ನು ಕೊರಂಗು ನೋಡಿದ.

ಅವರ ಮಧ್ಯೆ ಬನಾಯ್ಸ್ ನಿಂತಿದ್ದ. ಹೊರಗೆ ಬಂದವನೇ ತನಗೆ ಪರಿಚಿತರಿದ್ದ ಒಂದಿಬ್ಬರ ಬಳಿ ಬನಾಯ್ಸ್ ಬಗ್ಗೆ ವಿಚಾರಿಸಿದ್ದಾನೆ. ಆಗ ಗೊತ್ತಾಗಿದ್ದೇನೆಂದರೆ ಇಡೀ ಕೋದಂಡರಾಂಪುರ ಬನಾಯ್ಸ್‌ನ ಆಧಿಪತ್ಯಕ್ಕೊಳಪಟ್ಟಿದೆ!

ರಾಜಾಜಿನಗರದ ಗುಂಗ್ರು ವೆಂಕಟೇಶನ ಹೋಲ್ ಸೇಲ್ ವೈನ್ಸ್ ಮಳಿಗೆಗೆ ಬಾಂಬ್ ಹಾಕಿ ಮತ್ತೆ ಕೋದಂಡರಾಂಪುರಕ್ಕೆ ಲಗ್ಗೆಯಿಟ್ಟ ಕೊರಂಗು ಅಲ್ಲಿ ವಸಂತನ ಎಸ್ಟೀಮ್ ಕಾರ್ ಕಿತ್ತುಕೊಂಡು ಅದರಲ್ಲೇ ಒಂದಷ್ಟು ರಾಬರಿ ಮಾಡಿದ್ದ. ಆನಂತರ ಐದು ವರ್ಷಗಳ ಕಾಲ ಆಂಧ್ರದಲ್ಲಿ ಭೂಗತನಾಗಿದ್ದ ಕೊರಂಗು ಆಂಧ್ರದಿಂದ ಒಬ್ಬಂಟಿಯಾಗಿ ಕೋರ್ಟಿಗೆ ಬಂದು ಹೋಗುತ್ತಿದ್ದವನು ನಡುವೆ ಒಮ್ಮೆ ಅನಿಲನ ಮನೆ ಮೇಲೆ ಬಾಂಬ್ ಹಾಕಿದ್ದು ಬಿಟ್ಟರೆ ಬೆಂಗಳೂರು ಆತನನ್ನು ಮರೆತೇ ಬಿಟ್ಟಿತ್ತು.

ಯಾವತ್ತು ಕೊರಂಗು ಬೆಂಗಳೂರು ಬಿಟ್ಟನೋ, ಕೋದಂಡರಾಂಪುರಕ್ಕೆ ವಕ್ಕರಿಸಿದವನು ಲೊಡ್ಡೆ ಚಂದ್ರ. ಆತನ ಪೂರ್ತಿ ಹೆಸರು ಸಿ. ಚಂದ್ರಶೇಖರ್. ಈ ಲೊಡ್ಡೆ ಕೂಡ ಕೊರಂಗು ಸಂಬಂಧಿಯೇ. ಕೊರಂಗು ತಾಯಿ ಚಂಗಮ್ಮನ ಅಣ್ಣನ ಹೆಸರು ಮಾರಪ್ಪ ನಾಯ್ಡು. ಆತನೇ ಕೋದಂಡರಾಂಪುರದ ಮೊದಲ ರೌಡಿ. ಈ ಚಂದ್ರಶೇಖರ್ ಅಲಿಯಾಸ್ ಲೊಡ್ಡೆ ಚಂದ್ರ ಕೂಡ ಈ ಮಾರಪ್ಪ ನಾಯ್ಡುಗೆ ಅತ್ತೆಯ ಮಗನಾಗಬೇಕು. ಕೊರಂಗು ಅಣ್ಣ ಮುನಿರತ್ನ ಕೂಡ ಒಂದಾನೊಂದು ಕಾಲಕ್ಕೆ ಕೊತ್ವಾಲ್ ಸಹಚರನೆ. 1930 ರ ಸುಮಾರಿಗೆ ಭೀಕರ ಬರಗಾಲಕ್ಕೆ ತುತ್ತಾಗಿ ಬೆಂಗಳೂರಿಗೆ ವಲಸೆ ಬಂದು ಮಲ್ಲೇಶ್ವರಂ ಹದಿನೆಂಟನೇ ಕ್ರಾಸಿನಲ್ಲಿ ಸಾವಿರಾರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಈ ಆಂಧ್ರಾ ಮೂಲದವರರನ್ನೆಲ್ಲ ಪಕ್ಕದ ವೈಯಾಲಿಕಾವಲ್ ಏರಿಯಾದಲ್ಲಿ ನೆಲೆಗೊಳಿಸಿದವರು ಆ ಕಾಲಕ್ಕೆ


ಮಾರಪ್ಪ ನಾಯ್ಡು

ಮಲ್ಲೇಶ್ವರದ ಶಾಸಕರಾಗಿದ್ದ
ಪಾರ್ಥಸಾರಥಿ. ವಲಸೆ ಬ
ಪೈಕಿ ಈಗ ಸಾವಿರಾರು ಕೋ
ಒಡೆಯನಾದ ಏಟ್ರಿಯಾ
ಚಿನ್ನಸ್ವಾಮಿ ರಾಜು,
ವೃಷಭಾವತಿ ಕಾಲುವೆಯ
ತೆಗೆದು ಗುಡ್ಡೆ ಹಾಕಿಕೊ
ಎಂಟಾಣೆಗೆ ಮಾರುತ್ತಿದ್ದ.
ಸರ್ಕಾರ ಸೈಟು ಕೊಟ್ಟು ವೈ
ಕಾವಲ್‌ನ ಹುಲ್ಲುಛತ್ರದ ಸುತ್ತ
ನೆಲೆಗೊಳಿಸಿದ ಮೇಲೆ
ಸೇರಿ ಅಲ್ಲೊಂದು ಗಂಗ
ಗುಡಿ ಕಟ್ಟಿಸಿದರು. ಕ್ರಮೇಣ
ಕಂಟ್ರಾಕ್ಟರುಗಳಾದರು.
ಕೆಲವರು ಬೆಂಗಳೂರು ಕಾರ್ಪೊರೇಷನ್ ಕಂಟ್ರಾ
ಗಳಾದರು. ಆ ಪೈಕಿ ಅತ್ಯಂತ ನಟೋರಿ
ಹಿನ್ನೆಲೆಯವನೇ ಮಾರಪ್ಪ ನಾಯ್ಡು.


1975 ರ ಹೊತ್ತಿಗೆ
ಮಲ್ಲೇಶ್ವರದ ಹನ್ನೊಂದನೇ
ಬಂದು ಮನೆ ಮಾಡಿದ
ಮುಖ್ಯಮಂತ್ರಿ ದೇವ
ಅರಸರ ಅಳಿಯ ಎಂ.ಡಿ.
ರಾಜ್‌ಗೆ ಆಗಿನ ರೌಡಿಗ
ಜಯರಾಜ್, ಕೊತ್ವಾಲ್,
ಮಾಸ್ತಿ, ಸಿದ್ಧ ಮುಂತಾ
ಜೊತೆ ಕೂತು ತನ್ನ ಮನೆಯ
ಅಡ್ಡೆ ಹಾಕುವ ಖಯಾಲಿಯ
ಆಗ ನಟರಾಜ್‌ನ ಬ
ಬಂಟನಂತಿದ್ದವನೇ ಕೋ
ರಾಂಪುರದ ಮಾರಪ್ಪ ನಾ
ನಟರಾಜ್ ಮನೆಗೆ ಬರು
ಘಟಾನುಘಟಿ ರೌಡಿಗಳ
ಕೊಂಡು ಬೆಂಗಳೂರು ಕಾರ್ಪೊರೇಷನ್ನಿನ ಇಂಜಿನಿ
ಗಳನ್ನು ಹೆದರಿಸಿ ಕಾಂಟ್ರಾಕ್ಟ್ ಗಿಟ್ಟಿಸುತ್ತಿದ್ದ ಮ
ನಾಯ್ಡು ಎಷ್ಟು ಬೇಗ ಕುಬೇರನಾದನೆಂದರೆ; ಆ ಕ
ತನ್ನ ಅಂಬಾಸಿಡರ್ ಕಾರಿನ ಹಿಂದೆ ಬಂಡನಂಥ ರೌ
ಗ್ಯಾಂಗ್ ಇರುತ್ತಿದ್ದ ಮತ್ತೊಂದು ಕಾರನ್ನು ಜೊತೆ
ಕೊಳ್ಳುತ್ತಿದ್ದ.

ಹೀಗೆ ಕೋದಂಡರಾಂಪುರಕ್ಕೂ, ಬೆಂಗಳ
ಕಾರ್ಪೋರೇಷನ್ ಕಾಂಟ್ರಾಕ್ಟ್ ಮಾಫಿಯಾ
ಕರುಳುಬಳ್ಳಿಯ ಸಂಬಂಧ ಕಲ್ಪಿಸಿದ ಮಾರಪ್ಪ ನಾ
ತನ್ನ ತಂಗಿ ಚಂಗಮ್ಮನನ್ನು ಸುಬ್ರಮಣಿ ಎಂಬುವ
ಕೊಟ್ಟು ಮದುವೆ ಮಾಡಿ, ಅವನನ್ನೂ ಕಾಂಟ
ಧಂದೆಗೆಳೆದ. ಈ ಸುಬ್ರಮಣಿಯ ಮಗನೇ ಕೊರ
ಇವನ ಒರಿಜಿನಲ್ ಹೆಸರು ಕೃಷ್ಣ. ಕೊರಂಗು ಅ
ಕೋತಿ ಅಂತ. ಚುರುಕುತನ, ಯಾರ ಕೈಗೂ
ಅವನ ಪರಾರಿ ಗುಣಕ್ಕೆ ಬಿದ್ದಿದ್ದ ಅಡ್ಡಹೆಸ
ಬೆಂಗಳೂರು ಕಾರ್ಪೊರೇಷನ್ನಿನ ಮತ್ತೊಬ್ಬ ನಟ
ಯಸ್ ಕಂಟ್ರಾಕ್ಟರ್ ಮುನಿರತ್ನ ಕೂಡ ಈ ಕೊರ
ಅಣ್ಣ. ಯಾವ ಕಾರ್ಪೊರೇಷನ್ ಕಂಟ್ರಾಕ್ಟ್ ಧಂದೆ
ಆವತ್ತು ಮಾರಪ್ಪ ನಾಯ್ಡು ರೇಜರ್ ಹಿಡಿದ
ಮುಂದೆ ಅದೇ ಪಾಪಕ್ಕೆ ಆತನ ವಂಶ ಬಲಿಯಾ

1998 ರ ಸುಮಾರಿಗೆ ಮಲ್ಲೇಶ್ವರದ ಬ್ಲಾಕ್ ಕಾ
ಅಧ್ಯಕ್ಷನಾದ ಚಂದ್ರಶೇಖರ್ ಉರ್ಫ್ ಲೊಡ್ಡೆ
ಕೂಡ ಕಾರ್ಪೊರೇಷನ್ ಕಂಟ್ರಾಕ್ಟರನೆ. ಕಂಟ
ಧಂದೆಯಲ್ಲಿ ಅವನ
ವೈರಿಯೇ ಕೊರಂಗು
ಮುನಿರತ್ನ ನಾಯ್ಡು!

1998 ರ ಹ
ಮುನಿರತ್ನ ಮಂತ್ರಿ ಅ
ನಾಗ್ ಬಂಟನಾ
[illegible]ಮ್ಮ ಬೋಗಸ್
[illegible]ಡೆದ. ಅದಾಗಿ ವ
ಚುನಾವಣೆ ಬಂದು
ರಾಮ್ ಮಲ್ಲೇ
ಎಮ್ಮೆಲ್ಲೆಯಾದರು.
ಚಂದ್ರನೇ ಮಲ್ಲೇಶ್ವರ
ಕಾಂಗ್ರೆಸ್ ಅಧ್ಯಕ್ಷನಾದ
ಸೀತಾರಾಮ್ ಆತ
ದ್ದೆಲ್ಲ, ತಲೆದೂಗುತ್ತಿ
ಆತನ ಎದುರಾಳಿ ಮುನಿ ಸಹಜವಾಗೇ ಸೀತಾರಾ


(12ನೇ ಪುಟ



ಕೊರಂಗು ಶಿಕಾರಿಯಲ್ಲಿ ಯಾರ್ಯಾರು?

ರಾ. ಸೋಮನಾಥ್

ಕತೆ ಒಂದೇ ಸಲಕ್ಕೆ ಮುಗಿದು ಹೋಗಿದ್ದರೆ ಬಹುಶಃ ಯಾರೂ ನಿದ್ದೆಗೆಡಬೇಕಿರಲಿಲ್ಲ, ಆದರೆ ಕೊರಂಗು ಬದುಕಿ ಬಿಟ್ಟಿದ್ದಾನೆ. ಅಕ್ಟೋಬರ್ 16 ರ ಸಂಜೆ ಹಿರಿಯೂರಿಗೆ ಇನ್ನೂ ಐದು ಕಿ.ಮೀ. ಹಿಂದಕ್ಕಿದ್ದ ಜವಗೊಂಡನಹಳ್ಳಿಯ ಜೈಭಾರತ್ ಡಾಬಾದಲ್ಲಿ ಪಾತಕಿ ಕೊರಂಗು ಮೇಲೆ ಹೆಬ್ಬೆಟ್ಟು ಮಂಜನ ಪಡೆ ನಡೆಸಿದ ದಾಳಿಯೇನಾದರೂ ಸಫಲಗೊಂಡಿದ್ದೇ ಆಗಿದ್ದರೆ ಗ್ಯಾಂಗ್‌ವಾರ್‌ನ ಒಂದು ಅಂಕಕ್ಕೆ ತೆರೆ ಬೀಳುತ್ತಿತ್ತೇನೊ. ಹಾಗಾಗಲಿಲ್ಲ, ಇನ್ನೂ ಯಾರ್ಯಾರ ಗ್ರಹಚಾರ ಕೆಡುತ್ತೋ ಗೊತ್ತಿಲ್ಲ. ಒಂದು ಕೈ ಪೂರ್ತಿ ತುಂಡಾಗಿ ಮತ್ತೊಂದು ಕೈನ ಬೆರಳುಗಳು ಕಟ್ಟಾಗಿ, ಬೆನ್ನಿಗೆ ಹೊಕ್ಕ ಗುಂಡು ತಲೆ ತನಕ ತೂರಿತಾದರೂ ಬರೀ ಮಾತು ಮತ್ತು ಮೆದುಳಿನ ಬಲದಿಂದಲೇ ಗೋಲಿ ಆಡುವ ಹುಡುಗರನ್ನೂ ಪಳಗಿಸಿ ಎಂಥಾ ದೊಡ್ಡ ತಲೆಯನ್ನೂ ಉರುಳಿಸಬಲ್ಲ ಪ್ರಳಯಾಂತಕನೇ ಕೊರಂಗು.



ಪಾಯ್ಸನ್ ರಾಮ


ಅಂಡರ್‌ವರ್ಲ್ಡ್ ಲೆಕ್ಕಾಚಾರದಲ್ಲಿ ಇದನ್ನೇ ಕೆರೆದು ಗಾಯ ಮಾಡಿಕೊಳ್ಳೋದು ಅಂತಾರೆ. ಬೇಟೆಯನ್ನು ಒಂದೇ ಸಲಕ್ಕೆ ಮುಗಿಸಿಬಿಡಬೇಕು. ಏನಾದರೂ ಯಡವಟ್ಟಾಗಿ ಅದು ಮಿಸ್ಸಾಯಿತೆಂದರೆ ಬೇಟೆಗೆ ಕೈಯಿಟ್ಟವನೇ ಖಲಾಸ್. ಹಾಗಂಥ ಲೆಕ್ಕ ಹಾಕಿಯೇ ಮಚ್ಚನ ಹತ್ಯೆಗಿಂತಲೂ ಆಗಾಧ ತಯಾರಿಯೊಂದಿಗೆ ಬೆಂಗಳೂರಿನ ಸರಿಸುಮಾರು ನಾಲ್ಕು ಅನಾಹುತಕಾರಿ ಗ್ಯಾಂಗ್‌ಗಳು ಸಜ್ಜಾಗಿದ್ದವು. ಈ ಪೈಕಿ ಸರಿಸುಮಾರು ನಲವತ್ತು ಮಂದಿ ಸಶಸ್ತ್ರಧಾರಿ ಹುಡುಗರೊಂದಿಗೆ ಹಿರಿಯೂರಿನಿಂದಾಚೆಯ ಕಸ್ತೂರಿ ರಂಗಪ್ಪನ ಹಳ್ಳಿ ಗೇಟ್‌ನ ರಾಜಸ್ತಾನ್ ಡಾಬಾ ಹಿಂಭಾಗದಲ್ಲಿ ಶಿವಮೊಗ್ಗ ನಾಗನ ಪಡೆ ಹೊಂಚು ಹಾಕುತ್ತಿತ್ತು, ಅಲ್ಲಿಂದ ಹತ್ತು ಕಿ.ಮೀ. ದೂರದ ಮತ್ತೊಂದು ಡಾಬಾದಲ್ಲಿ ರಾಮ-ಲಕ್ಷ್ಮಣರ ಮತ್ತೊಂದು ತಂಡ ಕಾದು ಕುಳಿತಿತ್ತು, ಕೊರಂಗು ಸಿಕ್ಕಿಬಿದ್ದದ್ದು ಈ ಪೈಕಿ ಅತ್ಯಂತ ದುರ್ಬಲವಾಗಿದ್ದ, ಅಷ್ಟೇನೂ ಸಿದ್ಧತೆಯಲ್ಲಿಲ್ಲದ ಹೆಬ್ಬೆಟ್ಟು ಮಂಜನ ಮೂರನೇ ಹಂತಕ ತಂಡಕ್ಕೆ.

ಅಕ್ಟೋಬರ್ ಹದಿನಾರರಂದು ಸೆಷನ್ಸ್ ಕೋರ್ಟಿನ 8 ನೇ ಫಾಸ್ಟ್ ಟ್ರ್ಯಾಕ್ ಕೋರ್ಟಿನಲ್ಲಿ ಮಂಡ್ಯ ಕೃಷ್ಣನ ಕೊಲೆ ಕೇಸಿಗೆಂದು ಕೊರಂಗು ಬಂದೇ ಬರುತ್ತಾನೆ. ಆತನ ಜೊತೆ ಕತ್ತಿಗುಪ್ಪೆ ಲಿಂಗ, ಕೋತಿರಾಮ, ಜಾನಿ, ಕಾಟ್ ರವಿ ಮುಂತಾದರೆಲ್ಲ ಇದ್ದೇ ಇರುತ್ತಾರೆ.


ಕೋರ್ಟು ಮುಗಿಸಿ ಅವರೆಲ್ಲ ವಾಪಸ್ಸು ಚಿತ್ರದುರ್ಗ ಜೈಲಿಗೆ ಬರುವ ಹೊತ್ತಿಗೆ ರಾತ್ರಿ ಒಂಭತ್ತಾಗಿರುತ್ತದೆ. ಅದಕ್ಕೂ ಮುನ್ನ ಮಧ್ಯೆ ಈ ಮೂರು ಡಾಬಾಗಳ ಪೈಕಿ ಒಂದಲ್ಲಾ ಒಂದರಲ್ಲಿ ಕೊರಂಗು ಊಟಕ್ಕಿಳಿಯುವುದು ಗ್ಯಾರಂಟಿ. ಅದರಲ್ಲೂ ಹಿರಿಯೂರಿನಿಂದಾಚೆಯ ಕಸ್ತೂರಿರಂಗಪ್ಪನಹಳ್ಳಿ ಗೇಟ್‌ನ ರಾಜಸ್ತಾನ ಡಾಬಾ ಕೊರಂಗು ಪಾಲಿಗೆ ಫೇವರಿಟ್. ಬೆಂಗಳೂರಿನಿಂದ ಹೊರಟು ಆದೆಷ್ಟೇ ಟ್ರಾಫಿಕ್ ಝಾಮ್ ಇದ್ದರೂ ಅಲ್ಲಿಗೆ ಬರುವ ಹೊತ್ತಿಗೆ ರಾತ್ರಿ ಎಂಟು ಗಂಟೆಯಾಗಿರುತ್ತದೆ. ಕೊರಂಗು ಅದಕ್ಕಿಂತ ಲೇಟಾಗಿ ಊಟಕ್ಕೆ ನಿಲ್ಲುವುದಿಲ್ಲ, ಹಾಗೊಮ್ಮೆ ಮನಸ್ಸು ಬದಲಿಸಿದ್ದೇ ಆದರೆ ಒಂದೋ ಜವಗೊಂಡನಹಳ್ಳಿಯ ಜೈಭಾರತ್ ಡಾಬಾದಲ್ಲಿ ನಿಲ್ಲಬೇಕು ಅಥವಾ ಅದು ಬೇಗ ಅನ್ನಿಸಿದರೆ ಕಸ್ತೂರಿ ರಂಗಪ್ಪನ ಹಳ್ಳಿಯಿಂದಾಚೆ ಹತ್ತು ಕಿ.ಮೀ.ಗೆ ಸಿಗುವ ಮತ್ತೊಂದು ಡಾಬಾದಲ್ಲಿ ಇಳಿಯಬೇಕು. ಏಕೆಂದರೆ ಕಳೆದ ಐದು ಬಾರಿಯೂ ಕೊರಂಗು ಊಟಕ್ಕೆ ಇಳಿದದ್ದು ಈ ಮೂರು ಡಾಬಾಗಳಲ್ಲೇ.

ಇಂಥಾದ್ದೊಂದು ಲೆಕ್ಕ ಹಾಕಿಯೇ ಕಸ್ತೂರಿ ರಂಗಪ್ಪನಹಳ್ಳಿ ಗೇಟ್‌ನಲ್ಲಿ ಶಿವಮೊಗ್ಗ ನಾಗನ ಪಡೆ ಸಜ್ಜಾಗಿತ್ತು, ಆದರೆ ಕೊರಂಗು ಇಳಿದದ್ದು ಜವಗೊಂಡನಹಳ್ಳಿಯಲ್ಲಿ ಮತ್ತು ಅಲ್ಲೇ ಬೇಟೆ ತಪ್ಪಿಸಿಕೊಂಡಿದೆ.


ಬಹುಶಃ ಈ ಥರದ ಭಯಂಕರ ಅಟೆಂಪ್ಟ್ ಒಂದು ಬೆಂಗಳೂರಿನ ಕ್ರೈಂ ಜಗತ್ತಿನಲ್ಲಿ ಈತನಕ ನಡೆದಿರಲಿಕ್ಕಿಲ್ಲ. ಕ್ರೈಮ್ ಜಗತ್ತಿನ ನಾಡಿ ಬಲ್ಲವರಿಗೆಲ್ಲ ಇಲ್ಲಿಗೆ ವಾರದ ಮೊದಲೇ 'ಕೊರಂಗುನ ಕೋರ್ಟಿನಲ್ಲೇ ಮುಗಿಸ್ತಾರೆ' ಎಂಬ ಆಘಾತಕಾರಿ ವದಂತಿಯೊಂದು ಕಿವಿಗೆ ಬಿದ್ದಿತ್ತು, ರೌಡಿಜಮ್ಮಿಗೆ ವಿದಾಯ ಹೇಳಿ ರಾಜಕೀಯಕ್ಕೆ ಅಡಿಯಿಟ್ಟಿದ್ದ ಜೇಕೆ ತನ್ನ ಪ್ರಾಣ ಉಳಿಸಿಕೊಳ್ಳೋಕ್ಕೆ ಮತ್ತೆ ಫೀಲ್ಡಿಗೆ ಇಳಿದಿದ್ದಾನೆ ಎಂಬ ಮತ್ತೊಂದು ಸುದ್ದಿಯೂ ಹಬ್ಬಿತ್ತು. ಹೀಗೆ ವ್ಯಾಪಿಸುತ್ತಿದ್ದ ಊಹಾಪೋಹಕ್ಕೆಲ್ಲಾ ಇದ್ದ ಏಕೈಕ ಕಾರಣವೆಂದರೆ ಇಷ್ಟರಲ್ಲೇ ಜೇಕೆಯನ್ನೋ ಅಥವಾ ಕಾಮಾಕ್ಷಿ ಪಾಳ್ಯದ ಗೋಪಾಲಯ್ಯನನ್ನೋ ಮುಗಿಸಲು ಒಂಟಿ-ಸುನೀಲರ ಗ್ಯಾಂಗ್ ಸ್ಕೆಚ್ಚು ಹಾಕಿದೆ ಎಂಬ ಮಗದೊಂದು ಗುಲ್ಲು. ಇದರ ಪರಿಣಾಮವೇ ಕೊರಂಗುನ ಕೋರ್ಟಿಗೆ ಬಂದಾಗಲೇ ತೆಗೆದು ಬಿಡ್ತಾರೆ ನೋಡ್ತಿರಿ ಎಂದು ಎಲ್ಲೆಂದರಲ್ಲಿ ಹಬ್ಬಿದ ಗುಸುಪಿಸು.



ಗೋಪಾಲಯ್ಯ



ವೈನ್ಸ್ ಲೋಕಿ



ಡಾಬಾ ಸೀನ

ಇಲ್ಲಿಗೆ ಎರಡು ತಿಂಗಳ ಹಿಂದೆ ತುಮಕೂರು ಜೈಲಿಗೆ ನುಗ್ಗಿ ಆತನನ್ನು ಮುಗಿಸಲು ಭಯಂಕರ ಷಡ್ಯಂತ್ರವೊಂದನ್ನು ಕೊರಂಗು ವೈರಿಗಳು ರೂಪಿಸಿದ್ದಾರೆಂಬ ಮಾಹಿತಿ ಪೊಲೀಸರಿಗಿತ್ತು, ಅದೇ ಹೊತ್ತಿಗೆ ತುಮಕೂರು ಜೈಲಲ್ಲಿದ್ದ ತಿಮ್ಮೇನಹಳ್ಳಿ ಸೂರಿಯ ಶಿಷ್ಯರಾದ ಮೆಂಟಲ್ ಪ್ರಕಾಶ ಮತ್ತು ಗೋರಿಲ್ಲಾ ಅಂಥಾದ್ದೊಂದು ಯತ್ನಕ್ಕೆ ಕೈಹಾಕಿದ್ದರು. ಅದು ಗೊತ್ತಾಗಿಯೇ ಜೈಲು ಅಧಿಕಾರಿಗಳು ಕೊರಂಗು, ಕೋತಿರಾಮ ಮತ್ತು ಕತ್ತಿಗುಪ್ಪೆ ಲಿಂಗರನ್ನು ಚಿತ್ರದುರ್ಗದ ಜೈಲಿಗೆ ಸಾಗ ಹಾಕಿದ್ದರು.

ಅಷ್ಟಾದಾಗ್ಯೂ ಬೆಂಗಳೂರಿನ ಒಂದು ಡಜನ್ ರೌಡಿಗಳಿಗೆ ಕೊರಂಗುನನ್ನು ಮುಗಿಸಲೇಬೇಕಿತ್ತು, ಇದು ತೀರಾ ತುರ್ತಾಗಿದ್ದದ್ದು ಕಾಮಾಕ್ಷಿಪಾಳ್ಯದ ಗೋಪಾಲಯ್ಯನಿಗೆ. ತನ್ನ ಇಡೀ ಪಾತಕವೃತ್ತಿಗೆ ಬೆನ್ನೆಲುಬಾಗಿದ್ದ ತಿಮ್ಮೇನಹಳ್ಳಿ ಸೂರಿಯನ್ನು ಜೈಲೊಳಗೇ ಕೂತು ಪಡ್ಡೆ ಹುಡುಗರನ್ನು ಬಿಟ್ಟು ಕೊಲ್ಲಿಸಿದ ಕೊರಂಗು ವಿರುದ್ಧ ಇಡೀ ಗೋಪಾಲಯ್ಯನ ಗ್ಯಾಂಗ್ ಕತ್ತಿ ಮಸೆಯುತ್ತಿತ್ತು, ಮಚ್ಚನ ಹಂತಕ ಕಡಬಗರೆಯ ಪಾಯ್ಸನ್ ರಾಮುನಿಗೆ ಕೊರಂಗು ಬದುಕಿದ್ದಷ್ಟೂ ದಿನ ನಿದ್ದೆ ಬರುತ್ತಿರಲಿಲ್ಲ, ಕೊರಂಗುನ ಮತ್ತೊಬ್ಬ ಕಡುವೈರಿ ಮುಲಾಮ ಮತ್ತು ಆತನ ಶಿಷ್ಯರಾದ ರಾಮ-ಲಕ್ಷ್ಮಣರು ಕೊರಂಗು ಹಿಟ್‌ಲಿಸ್ಟಿಗೆ ಸೇರಿ ಯಾವುದೋ ಕಾಲವಾಗಿತ್ತು, ಗೊಲ್ಲರಹಟ್ಟಿಯ ವೈನ್ಸ್ ಲೋಕಿ, ಡಾಬಾ ಸೀನ ಮತ್ತು ಗಾಯತ್ರಿನಗರದ ಬ್ರೇಕ್ ಜಗ್ಗಿ, ಹೀಗೆ ಬೆಂಗಳೂರು ಕ್ರೈಂ ಜಗತ್ತಿನ ದೊಡ್ಡ ಹಿಂಡೇ ಕೊರಂಗು ರಕ್ತಕ್ಕಾಗಿ ಹಪಹಪಿಸುತ್ತಿತ್ತು.



ದೀಪು

ಶಿವಮೊಗ್ಗನಾಗನ ಬಿರಿಯಾನಿ ಋಣ

ಇಂಥ ಕೊರಂಗು ವೈರಿಗಳನ್ನೆಲ್ಲ ಕಲೆಹಾಕಿ ಸಮರ್ಥವಾಗಿ ಸದುಪಯೋಗಪಡಿಸಿಕೊಂಡವನು ಶಿವಮೊಗ್ಗ ನಾಗ. ಈಗ ಕೊರಂಗು ಕೈ ಲ್ಯಾಪ್ಸ್ ಮಾಡಿರುವ ಹೆಬ್ಬೆಟ್ಟು ಮಂಜ ಇದೇ ಶಿವಮೊಗ್ಗ ನಾಗನ ಸಹಚರ.

ಬೆಂಗಳೂರಿನ ಅನೇಕ ರೌಡಿಗಳಿಂದ ಯಜಮಾನ್ರೆ ಎನ್ನಿಸಿಕೊಳ್ಳುವಷ್ಟು ಬೆಳೆದುಬಿಟ್ಟಿದ್ದ ಬನಾಯ್ಸ್ ತನ್ನ ಕೊನೆಗಾಲಕ್ಕೆ ವಿಪರೀತ ಹಚ್ಚಿಕೊಂಡಿದ್ದು ಶಿವಮೊಗ್ಗ ನಾಗನನ್ನು. ಕಾರ್ಪೊರೇಷನ್ ಜಿ.ಇ. ರಂಗಯ್ಯನನ್ನು ಇರಿದು ಜೈಲು ಸೇರಿದ ಬನಾಯ್ಸ್‌ಗೆ ಅಲ್ಲಿ ಪರಿಚಯವಾದವನೇ ಶಿವಮೊಗ್ಗ ನಾಗ. ಪೀಣ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಯಾವುದೋ ರಾಬರಿ ಕೇಸಲ್ಲಿ ಜೈಲು ಸೇರಿದ್ದ ಶಿವಮೊಗ್ಗ ನಾಗನಿಗೆ ಯಾರೂ ದಿಕ್ಕಿಲ್ಲದ ಹೊತ್ತಲ್ಲಿ ಜಾಮೀನಿಗೆ ನೆರವಾಗಿ, ಸರಿಸುಮಾರು ಒಂದು ವರ್ಷದ ಕಾಲ ಗುಟ್ಟಳ್ಳಿಯ ನಂದಿನಿ ಆಂಧ್ರ ಸ್ಟೈಲ್ ಹೋಟೆಲಿನಿಂದ ಬಿರಿಯಾನಿ ಕಳಿಸಿಕೊಟ್ಟ ಋಣವಿತ್ತಲ್ಲ; ಅದನ್ನು ನಾಗ ಮರೆಯಲಿಲ್ಲ.

2004ರ ಏಪ್ರಿಲ್‌ನಲ್ಲಿ ಕೊರಂಗು ಬನಾಯ್ಸ್ ಮೇಲೆ ದಾಳಿ ನಡೆಸಿದ್ದೇ ತಡ ಆತನ ಕೈ ನಡೆಯುತ್ತಿದ್ದಾಗ ಯಾರೆಲ್ಲ ಭೋಪರಾಕ್ ಹಾಕಿದ್ದರೋ, ಆತ ಸ್ಕ್ಯಾನ್ ಆಗಿ ಕೋಮಾದಲ್ಲೇ ವ್ಹೀಲ್ ಚೇರಿನಲ್ಲಿ ಉಸಿರಾಡುವ ಸ್ಥಿತಿ ತಲುಪಿದ್ದೇ ತಡ, ಅವರೆಲ್ಲ ಒಬ್ಬೊಬ್ಬರಾಗಿ ದೂರ ಸರಿದರು. ಆದರೆ ಶಿವಮೊಗ್ಗ ನಾಗ ಮಾತ್ರ ಋಣಕ್ಕೆ ಬದ್ಧನಂತೆ ಕೊರಂಗು ತಲೆ ತೆಗೆದೇ ಬಿಡ್ತಾ ಎಂದು ಶಪಥಗೈದಿದ್ದ. ಅದಕ್ಕೆ ತಕ್ಕಂಥೆ ಕೊರಂಗು ಒಂದರ ಮೇಲೊಂದರಂತೆ ಯಡವಟ್ಟುಗಳನ್ನು ಮಾಡಿಕೊಂಡ. ಹಾನಾಯ್ತು, ಕೋದಂಡರಾಂಪುರದ ಉಸಾಬರಿಯಾಯ್ತು ಎಂದು ಸುಮ್ಮನಾಗಿದ್ದರೆ ಸರಿಹೋಗುತ್ತಿತ್ತೇನೊ, ಆದರೆ ಭಂಡ ಧೈರ್ಯವಿತ್ತಲ್ಲ; ಸುನೀಲ-ಒಂಟಿ ಗ್ಯಾಂಗ್‌ನ ಅಧಿಕೃತ ವಕ್ತಾರನಂತೆ ಮಾತಾಡಲಾರಂಭಿಸಿದ. ಜೇಕೆ-ಗೋಪಾಲಯ್ಯನ ತಂಡಕ್ಕೆ ವಿರುದ್ಧವಾಗಿ ತನ್ನದೇ ಪ್ರತ್ಯೇಕ ಸಿಂಡಿಕೇಟು ಮಾಡಿಕೊಂಡ.

ಬೆಂಗಳೂರು ಕ್ರೈಂ ಜಗತ್ತಿನ ಮಟ್ಟಿಗೆ ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿತ್ತು, ಯಾವತ್ತು ಕೊರಂಗು ಗೋಪಾಲಯ್ಯನ ಕಡುವೈರಿ ಮಚ್ಚನಿಗೂ, ಸುನೀಲನಿಗೂ ದೋಸ್ತಿ ಮಾಡಿಕೊಟ್ಟನೋ ಅನಿವಾರ್ಯರಾಗಿ ಗೋಪಾಲಯ್ಯ-ಜೇಕೆ ತಂಡದ ಜೊತೆ ಕೈಜೋಡಿಸಿಬಿಟ್ಟ. ಹಾಗೇ ಮಚ್ಚನ ಮತ್ತೊಬ್ಬ ಎದುರಾಳಿ ಕಡಬಗೆರೆಯ ಪಾಯ್ಸನ್ ರಾಮ, ಆತನ ಅಣ್ಣ ಡಾಬಾ ಸೀನ, ಚಿಕ್ಕಗೊಲ್ಲರಹಟ್ಟಿಯ ವೈನ್ಸ್ ಲೋಕಿ, ಗೋಪಾಲಯ್ಯನ ತಮ್ಮ ಗೂಳಿ ಬಸವ, ಭಾಮೈದ ಧರಣಿ ಮತ್ತು ಮುಲಾಮ ಎಲ್ಲರೂ ಒಂದಾಗಿ ಮಚ್ಚನನ್ನು ಮುಗಿಸಿಬಿಟ್ಟರು.

ಇನ್ನು ಕೊರಂಗು ಸುಮ್ಮನಿರುತ್ತಾನಾ? ಮಚ್ಚನ ಹತ್ಯೆಯ ಸೇಡಿಗೆ ತಾನೇ ನಿಂತು ಲಗ್ಗೆರೆಯ ಮುಲಾಮನ ಮನೆ ಮೇಲೆ ಅಟ್ಯಾಕ್ ಮಾಡಿಸಿದ, ಮುಲಾಮ ಸಿಗಲಿಲ್ಲ ಎಂದು ಆತನ ಬಂಟ ಮಂಡ್ಯ ಕೃಷ್ಣನನ್ನು ಕೊಚ್ಚಿ ಹಾಕಿಸಿದ. ಇದು ಗೋಪಾಲಯ್ಯನಿಗೆ ಲಾಭವಾಯಿತು. ತನ್ನ ಮತ್ತು ಕಡಬಗೆರೆ ರಾಮನ ಎದುರಾಳಿಗಳನ್ನೆಲ್ಲ ಗೋಪಾಲಯ್ಯ ಮಂಡ್ಯ ಕೃಷ್ಣನ ಕೊಲೆ ಕೇಸಲ್ಲಿ ಸಿಕ್ಕಿಸಿಬಿಟ್ಟ. ಅನ್ಯಾಯವಾಗಿ ಗೊಲ್ಲರಹಟ್ಟಿ ಜಿಲ್ಲಾ ಪಂಚಾಯ್ತಿ ಸದಸ್ಯ ರಾಜಣ್ಣ, ಕಾಮಾಕ್ಷಿಪಾಳ್ಯದ ಜಾನಿ ಮುಂತಾದವರನ್ನೆಲ್ಲ ಮಂಡ್ಯ ಕೃಷ್ಣನ ಕೊಲೆ ಕೇಸಿಗೆ ಸಿಲುಕಿಸಲಾಯ್ತು.

ಇದು ಕೊರಂಗು ಪಾಲಿಗೆ ಇನ್ನಷ್ಟು ಲಾಭವಾಗಿತ್ತು. ಗೋಪಾಲಯ್ಯ, ಕಡಬಗೆರೆ ರಾಮ, ತಿಮ್ಮೇನಹಳ್ಳಿ ಸೂರಿ ಮುಂತಾದವರ ವಿರೋಧಿಗಳೆಲ್ಲ ಕೊರಂಗು ನೆರಳಿಗೆ ಬಂದರು. ಮಿಕ್ಕಂಥೆ ಸೂರಿಗೆ ಬನಶಂಕರಿ ಅರಸಯ್ಯ ಆತ್ಮೀಯ ಎಂಬ ಒಂದೇ ಕಾರಣಕ್ಕೆ ಅರಸಯ್ಯನ ಕಡುವೈರಿ ಜಲ್ಲಿ ವೆಂಕಟೇಶ ಆತನ ಸ್ನೇಹಿತ ಜರಗನಹಳ್ಳಿ ಸಂಜೀವ ಕೊರಂಗು ಜೊತೆ ಕೈಜೋಡಿಸಿದ್ದಾರೆ. ಈ ಅರಸಯ್ಯ ಮತ್ತು ಸೂರಿಗೆ ಹನುಮಂತನಗರದ ಒಳ್ಳೆ ಪರಮಾಪ್ತನೆಂದು ಕತ್ತಿಗುಪ್ಪೆ ಲಿಂಗ ಮತ್ತು ವಿದ್ಯಾಪೀಠದ ಕೋಳಿ ರಾಜೇಶ ಕೊರಂಗು ಜೊತೆಯಾದರು. ಹಾಗೇ ತಿಮ್ಮೇನಹಳ್ಳಿ ಸೂರಿಗೆ ದೋಸ್ತಿಯಾದವನು ಶಿವಮೊಗ್ಗ ನಾಗ. ಆತನೊಡನೆ ಯಶವಂತಪುರದ ರಾಬರಿಗಿರಿ ಮತ್ತು ವೆಂಕಿ ತಂಡಗಳೂ ಕೈಜೋಡಿಸಿದವು. ತಿಮ್ಮೇನಹಳ್ಳಿ ಸೂರಿಗೆ ಎದುರಾಳಿ ಎಂಬ ಒಂದೇ ಕಾರಣಕ್ಕೆ ಮಾರೇನಹಳ್ಳಿ ಜಗ್ಗ, ಟೀಸಿ ರಾಜ ಮಚ್ಚನ ಬಂಟ ಪೆದ್ದಗುಂಡ ಮುಂತಾದವರೆಲ್ಲ ಕೊರಂಗು ಅಧಿಪತ್ಯಕ್ಕೊಳಪಟ್ಟರು.

ಇಡೀ ಬೆಂಗಳೂರು ಅಂಡರ್‌ವರ್ಲ್ಡ್ ಗೋಪಾಲಯ್ಯ-ಜೇಕೆ ಗ್ಯಾಂಗ್ ವಿರುದ್ಧ ಕೊರಂಗು-ಸುನೀಲರ ತಂಡವಾಗಿ ಇಬ್ಭಾಗವಾಗಿ ಹೋಯಿತು. ಹಿಂದಾದರೆ ಒಂದು ಏರಿಯಾದಲ್ಲಿ ಯಾವುದೇ ಎರಡು ಗ್ಯಾಂಗ್‌ಗಳು ಹೊಡೆದಾಡಿಕೊಂಡರೆ ಆ ಬಗ್ಗೆ ಹಳೇ ರೌಡಿಗಳು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ಈಗ ಹಾಗಲ್ಲ; ಮಚ್ಚನ ಜೊತೆ ಯಾವುದೇ ಜಿದ್ದಿಲ್ಲದೇ ಹೋದರೂ ಗೋಪಾಲಯ್ಯನ ಕಾರಣಕ್ಕೆ ಸೂರಿ, ಶಿವಮೊಗ್ಗ ನಾಗನಂಥವರು ಹತ್ಯೆಯಲ್ಲಿ ಕೈ ಜೋಡಿಸುತ್ತಿದ್ದಾರೆ. ಹಾಗೇ ಸೂರಿ-ಟೋನಿ ಜೋಡಿ ಕೊಲೆಯಲ್ಲಿ ಅದ್ಯಾವುದಕ್ಕೂ ಸಂಬಂಧಪಡದ ಲಿಂಗನ ಹುಡುಗರಿದ್ದರು. ಇದಕ್ಕೆಲ್ಲ ಕೊರಂಗು ಮುಗಿಸುವುದೇ ಮದ್ದೆಂದು ಗೋಪಾಲಯ್ಯನ ಗ್ಯಾಂಗ್ ಲೆಕ್ಕ ಹಾಕಿದರೆ, ಅದೇ ವೇಳೆಗೆ ಜೇಕೆ ಅಥವಾ ಗೋಪಾಲಯ್ಯನನ್ನು ತೆಗೆದುಬಿಡಲು ಕೊರಂಗು-ಸುನೀಲರ ಕೂಟ ಕತ್ತಿ ಮಸೆಯಲಾರಂಭಿಸಿತು. ತನ್ನ ಸಿಂಡಿಕೇಟಿನ ವಿವಿಧ ರೌಡಿ ಪಡೆಗಳ ಪಡ್ಡೆಗಳನ್ನು ಒಟ್ಟು ಮಾಡಿ ಹೇಗೆ ತಿಮ್ಮೇನಹಳ್ಳಿ ಸೂರಿಯನ್ನು ತೆಗೆಸಿದನೋ ಹಾಗೇ ತನ್ನ ವಿರುದ್ಧವೂ ತನ್ನ ವಿರೋಧಿ ಪಾಳೆಯದ ಬೇರೆಬೇರೆ ಗುಂಪುಗಳು ಕೈಜೋಡಿಸುತ್ತವೆ ಎಂಬುದನ್ನು ಕೊರಂಗು ಮರೆತುಬಿಟ್ಟ. ಆದರೆ ಶಿವಮೊಗ್ಗ ನಾಗ ಮಾತ್ರ ತನ್ನ ಗುರು ಬನಾಯ್ಸ್‌ನನ್ನು ಸ್ಕ್ರಾಪ್ ಮಾಡಿಸಿದ್ದ ಕೊರಂಗುನನ್ನು ಮರೆತಿರಲಿಲ್ಲ. ಅದಕ್ಕೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯ, ಕಡಬಗೆರೆ ಪಾಯ್ಸನ್ ರಾಮ, ಗಾಯತ್ರಿನಗರದ ಜಗ್ಗಿ, ಮುಲಾಮ, ಬಳ್ಳಾರಿ ಹುಡುಗರು, ರಾಬರಿಗಿರಿಯ ಶಿಷ್ಯರು, ವೆಂಕಿಯ ಅನುಯಾಯಿ ಎಲ್ಲರನ್ನೂ ಬಳಸಿಕೊಂಡ. ಗೋಪಾಲಯ್ಯನಂಥವರೇ ಬೆನ್ನಿಗಿದ್ದ ಮೇಲೆ ದುಡ್ಡು ಕಾಸಿಗೆ ಕೊರತೆಯೆಲ್ಲಿ?

ಅಂತಿಮವಾಗಿ ಅಕ್ಟೋಬರ್ 16ರ ಸಂಜೆ ನಡೆದೇ ಹೋಯಿತು ಕೊರಂಗು ಶಿಕಾರಿ. ಆದರೆ ಬಲಿಯಾದವನು ಹೊಟ್ಟೆಗಿಲ್ಲದೇ ಕೊರಂಗು ಜೊತೆ ಸೇರಿದ್ದ ದೀಪು.

ಹೆಬ್ಬೆಟ್ಟು ಮಂಜನೋ ಪೆದ್ದಗುಂಡನೋ?

ಇಷ್ಟೆಲ್ಲಾ ರಕ್ತ ಹರಿದ ನಂತರವಾದರೂ ಪೊಲೀಸ್ ಪವರ್ ತೋರಿಸದೇ ಹೋದರೆ ಹೇಗೆ? ಅದಕ್ಕೆ ಅರ್ಜೆಂಟಾಗಿ ಯಾರಾದರೂ ಒಬ್ಬ ರೌಡಿಯನ್ನು ಎನ್‌ಕೌಂಟರ್ ಮಾಡಲೇಬೇಕಾದ ಅನಿವಾರ್ಯಕ್ಕೆ ಪೊಲೀಸರು ಬಿದ್ದಿದ್ದಾರೆ. ಕಮಲಾನಗರದ ಪೆದ್ದಗುಂಡನೇನಾದರೂ ಸಿಕ್ಕಿದ್ದರೆ ಈ ಹೊತ್ತಿಗಾಗಲೇ ಢಮ್ಮೆನ್ನಿಸಿ ಬಿಡುತ್ತಿದ್ದರು... ಅದಕ್ಕೆಂದೇ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಪೈಲಿ ಹಿಡಿದು ನಿಂತಿದ್ದ ಜೆಡಿಎಸ್ ಅನುಯಾಯಿ ಪೊಲೀಸ್ ಅಧಿಕಾರಿಗಳ ಒಂದೊಂದು ಗೋಪಾಲಯ್ಯ, ಕಡಬಗೆರೆ ಪಾಯ್ಸನ್ ರಾಮ, ವೈನ್ಸ್ ಲೋಕಿ, ಡಾಬಾ ಸೀನ, ಲೋಕಿಯ ಅಣ್ಣ ಪಟಾಕಿ ರಾಜ ಮುಂತಾದವರ ಆಣತಿಗೆ ತಕ್ಕಂಥೆ ಗೋಪಾಲಯ್ಯನ ಒಬ್ಬೊಬ್ಬರೇ ವಿರೋಧಿಗಳನ್ನು ಹಿಡಿದು ಜೈಲಿಗೆ ಹಾಕಲಾರಂಭಿಸಿತು. ಪರಿಣಾಮವೆಂಬಂತೆ ಜೆಡಿಎಸ್ ನೆರಳಿದ್ದ ರೌಡಿಗಳ್ಯಾರನ್ನೂ ಪೊಲೀಸರು ಮುಟ್ಟಲಿಲ್ಲ.



ಹೆಬ್ಬೆಟ್ಟು ಮಂಜ



ಪೆದ್ದಗುಂಡ

ಮಾಗಡಿ ಶಾಸಕ ಬಾಲಕೃಷ್ಣ, ಮಂತ್ರಿ ಚೆನ್ನಿಗಪ್ಪ, ಆತನ ಮಗ ಗೌರಿ ಶಂಕ್ರ, ಮಂತ್ರಿ ಚಲುವರಾಯಸ್ವಾಮಿಯಂಥವರೇ ಗೋಪಾಲಯ್ಯ, ಕಡಬಗರೆ ರಾಮನ ಬೆನ್ನಿಗೆ ನಿಂತಿರುವಾಗ ಯಾವ ಪೊಲೀಸ್ ಅಧಿಕಾರಿ ತಾನೇ ರಿಸ್ಕ್ ಮೇಲೆಳೆದುಕೊಳ್ಳುತ್ತಾನೆ? ಈಗ ಕೊರಂಗು ಮೇಲೆ ನಡೆದ ದಾಳಿ ಇಂಥ ಜೆಡಿಎಸ್ ಬೆಂಬಲಿತ ರೌಡಿಗಳ ಸ್ವಚ್ಛಂದಕ್ಕೆ ಸಾಕ್ಷಿಯಷ್ಟೇ.

ಸದ್ಯ ಎನ್‌ಕೌಂಟರ್ ಅನಿವಾರ್ಯಕ್ಕೆ ಬಿದ್ದ ಪೊಲೀಸರ ಮುಂದಿರುವುದು ಎರಡು ಹೆಸರು. ಒಂದು ಹೆಬ್ಬೆಟ್ಟು ಮಂಜ ಮತ್ತೊಬ್ಬ ಪೆದ್ದಗುಂಡ. ಈ ಪೈಕಿ ಪೆದ್ದಗುಂಡನ ಮೇಲೆ ಸೂರಿ ಹತ್ಯೆಯ ಹೊರತಾಗಿ ಬೇರೆ ಕೊಲೆ ಕೇಸುಗಳಿಲ್ಲ. ಆದರೆ ಹೆಬ್ಬೆಟ್ಟು ಮಂಜ ಹಾಗಲ್ಲ; ಮೊದಲು ಶಿವಮೊಗ್ಗದ ತುಕಾರಾಮನನ್ನು ಕೊಂದ. ಆನಂತರ ತೀರ್ಥಹಳ್ಳಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಹೊಸಳ್ಳಿ ವೆಂಕಟೇಶನನ್ನು ಮುಗಿಸಿ ಹಾಗೇ ಜೈಲಿಂದ ಎಸ್ಕೇಪಾದವನು ಪೊಲೀಸ್ ಕಸ್ಟಡಿಯಲ್ಲಿದ್ದ ದೀಪುವನ್ನೇ ಕೊಂದು ಕೊರಂಗು ಕೈ ಕತ್ತರಿಸಿದ್ದಾನೆ. ಪೊಲೀಸ್ ಪೌರುಷಕ್ಕೆ ಇದಕ್ಕಿಂತ ಅವಮಾನ ಬೇಕೆ?



ರಾಜ

ಸದ್ಯ ಹೆಬ್ಬೆಟ್ಟು ಮಂಜನ ವಾಸನೆ ಹಿಡಿದು ಪೊಲೀಸ್ ರಿವಾಲ್ವರುಗಳು ಹೊರಬಿದ್ದಿದ್ದೇನೋ ನಿಜ. ಆದರೆ ಆತ ಜೆಡಿಎಸ್ ನಾಯಕ ಗೋಪಾಲಯ್ಯನ ಪಾಳೆಯದ ಭಿಡ್ಡನಲ್ಲ?

ಪೊಲೀಸರ ಉಭಯ ಸಂಕಟ ಯಾರಿಗೆ ಅರ್ಥವಾಗುತ್ತೆ?

ಗೌಡರ ಕಟಾಕ್
ಕೋರೆ

ಎಂ.ಎಸ್. ಸತೀಶ್
ವಿ.ಪಿ. ಮೇಘರಾಜ್


ದಿವಂಗತ ಚಿದಾನಂದ ಕೋರೆ

ಆಸ್ತಿ, ಅಧಿಕಾರ ಮತ್ತು ದ್ವೇಷದ ಮುಂದೆ ಯಾವ ರಕ್ತ ಸಂಬಂಧವೂ ಉಳಿಯುವುದಿಲ್ಲ. ಬಿಜೆಪಿಯ ನಾಯಕ ಪ್ರಮೋದ್ ಮಹಾಜನ್‌ರವರನ್ನು ಅವರ ಸ್ವಂತ ಸೋದರ ಪ್ರವೀಣ್ ಮಹಾಜನ್ ಗುಂಡಿಟ್ಟು ಕೊಂದ. ಈಗ ರಾಜ್ಯದ ಪ್ರತಿಷ್ಠಿತ ಕೆಎಲ್‌ಇ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷ ಹಾಗೂ ಎಂಎಲ್‌ಸಿ ಪ್ರಭಾಕರ ಕೋರೆ ಮೇಲೆ ಅವರ ಸೋದರನ ಪುತ್ರ ಜಗದೀಶ್ ಕೋರೆ ಗುಂಡಿನ ದಾಳಿ ನಡೆಸಿದ್ದಾನೆ. ಅದೃಷ್ಟವಶಾತ್ ಪ್ರಭಾಕರ ಕೋರೆ ಸಾವಿನಿಂದ ಪಾರಾಗಿದ್ದಾರೆ.

ಆದರೆ ಅವರ ದೇಹದ ಯಕೃತ್ ಹೊಕ್ಕು ತಣ್ಣಗೆ ಕುಳಿತಿರುವ ಒಂದು ಬುಲೆಟ್ ಡಾಕ್ಟರ್‌ಗಳಿಗೆ ತಲೆಬಿಸಿ ಮಾಡಿದೆ. ಅತ್ಯಂತ ಡೆಲಿಕೇಟಾದ ಆಪರೇಷನ್ ಮೂಲಕ ಆ ಬುಲೆಟ್ ಹೊರತೆಗೆಯಬೇಕಾಗುತ್ತದೆ.

ಅಕ್ಟೋಬರ್ 18 ರಂದು ಬೆಳಗಾಂ ಜಿಲ್ಲೆಯ ಸ್ವಗ್ರಾಮವಾದ ಅಂಕಲಿಗೆ ಆಗಮಿಸಿದ ಪ್ರಭಾಕರ ಕೋರೆ, ಅಕ್ಟೋಬರ್ 19 ರಂದು ಅಲ್ಲಿಗೆ ಸಮೀಪದ ನಂದಿಕುರುಳಿ ಗ್ರಾಮಕ್ಕೆ ಹೋಗಿ ಇತ್ತೀಚೆಗೆ ನಿಧನರಾದ ಜಾಧವ್ ಎಂಬುವರ ಕುಟುಂಬದವರಿಗೆ ಸಾಂತ್ವನ ಹೇಳಿ ಮತ್ತೆ ಅಂಕಲಿಗೆ ಮಧ್ಯಾಹ್ನ 12 ಗಂಟೆಗೆ ಹಿಂದಿರುಗಿದ್ದಾರೆ. ಅಂಕಲಿಯಲ್ಲಿ ಅವರ ಒಡೆತನದ 'ಮಯೂರ' ಚಿತ್ರಮಂದಿರವಿದೆ. ಅದಕ್ಕೆ ಹೊಸದಾಗಿ ಅಳವಡಿಸಲಾಗಿದ್ದ 'ಡಾಲ್ಬಿ' ಸೌಂಡ್ ಸಿಸ್ಟಮ್ ಪರಿಶೀಲಿಸುತ್ತಿದ್ದ ಪ್ರಭಾಕರ ಕೋರೆಯ ಮೇಲೆ, ಜಗದೀಶ್ ಕೋರೆ ಏಕಾಏಕಿ ಪಿಸ್ತೂಲಿನಿಂದ ಗುಂಡು ಹಾರಿಸಿದ್ದಾನೆ. ಅನಿರೀಕ್ಷಿತ ದಾಳಿಯಿಂದ ಭೀತರಾದ ಕೋರೆ ತಪ್ಪಿಸಿಕೊಳ್ಳಲು ಯತ್ನಿಸಿದರೂ. ದೇಹಕ್ಕೆ ನಾಲ್ಕು ಗುಂಡು ತೂರಿ ಕೆಳಗುರುಳಿದ್ದಾರೆ.

ಪ್ರಭಾಕರ ಕೋರೆ ಸತ್ತರೆಂದು ಭಾವಿಸಿದ ಜಗದೀಶ ಕೋರೆ ತಾನು ಬಂದಿದ್ದ ಹೀರೋಹೊಂಡ ಮೋಟಾರ್ ಬೈಕ್ ಏರಿ ಪರಾರಿಯಾಗಿದ್ದಾನೆ. ಬಹುಶಃ ಜಗದೀಶ್ ಕೋರೆ, ಪ್ರಭಾಕರ ಕೋರೆಯವರನ್ನು ನಂದಿಕುರುಳಿ ಗ್ರಾಮದಿಂದಲೇ ಹಿಂಬಾಲಿಸಿಕೊಂಡು ಬಂದಿದ್ದನೆಂದು ಕಾಣುತ್ತದೆ. ಆದರೆ ಆ ರಸ್ತೆಯಲ್ಲಿ ಅವಕಾಶ ಸಿಗದೆ, ಮಯೂರ ಟಾಕೀಸಿನಲ್ಲಿ ತನ್ನ ಕೃತ್ಯ ಎಸಗಿದ್ದಾನೆ. ಪ್ರಭಾಕರ ಕೋರೆಯವರ ಆಪ್ತ ಮಹಂತೇಶ ಕವಟಗಿ ಮಠ ಹೇಳುವ ಪ್ರಕಾರ ಅಕ್ಟೋಬರ್ 18 ರ ಬುಧವಾರದಂದೇ ಪ್ರಭಾಕರ ಕೋರೆ ಮತ್ತು ಜಗದೀಶ್ ಕೋರೆ ನಡುವೆ ಚಿಕ್ಕದೊಂದು ಜಗಳ ನಡೆದು ಜಗದೀಶ, ಪ್ರಭಾಕರ ಕೋರೆಯನ್ನು ಮುಗಿಸುವುದಾಗಿ ಧಮಕಿ ಹಾಕಿದ್ದನಂತೆ. ಆದರೆ ಈ ಬೆದರಿಕೆಯನ್ನು ಕೋರೆ ನಿರ್ಲಕ್ಷಿಸಿ ತಪ್ಪು ಮಾಡಿಬಿಟ್ಟರು. ಹಾಗೆ ನೋಡಿದರೆ ಪ್ರಭಾಕರ ಕೋರೆ ತನ್ನ ಅಣ್ಣನ ಮಗ ಜಗದೀಶ್ ಕೋರೆಯ ಬಗ್ಗೆ ಸಾಕಷ್ಟು ಎಚ್ಚರದಿಂದಿರುವುದು ಅಗತ್ಯವಿತ್ತು, ಯಾಕೆಂದರೆ ಅವನು ಪ್ರಭಾಕರ ಕೊರೆಯ ಕೊಲೆಗೆ ಯತ್ನಿಸಿದ್ದು ಇದು ಮೂರನೇ ಬಾರಿ. ಒಮ್ಮೆ ಕೊಡಲಿಯಿಂದ ಹಲ್ಲೆ ನಡೆಸಲು ಯತ್ನಿಸಿದ್ದ. ಮತ್ತೊಮ್ಮೆ ಮೈಮೇಲೆ ಬಿದ್ದು ಕುತ್ತಿಗೆ ಹಿಸುಕಿದ್ದ. 1998 ರಲ್ಲೇ ಅವರ ಮಯೂರ ಚಿತ್ರಮಂದಿರಕ್ಕೆ ಬೆಂಕಿ ಇಟ್ಟು ಮೂರು ದಿನ ಜೈಲಿನಲ್ಲಿ ಕಳೆದು ಬಂದಿದ್ದ.

ಪ್ರಭಾಕರ ಕೋರೆಯ ಮೇಲೆ ಜಗದೀಶ್ ಕೋರೆಗೆ ಏಕೆ ಇಂತಾ ದ್ವೇಷ? ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಹೊರಟರೆ, 1983 ರ ಹಿಂದಿನ ಇತಿಹಾಸ ಕೆದಕಬೇಕಾಗುತ್ತದೆ. 1916 ರಲ್ಲಿ ಆರಂಭವಾದ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿ (ಕೆಎಲ್‌ಇ)ಗೆ 1983 ರಲ್ಲಿ ಅಧ್ಯಕ್ಷರಾಗಿದ್ದವರು ಚಿದಾನಂದ ಕೋರೆ. ಈತ ಪ್ರಭಾಕರ ಕೋರೆಯವರ ಅಣ್ಣ. ಚಿದಾನಂದ ಕೋರೆಯವರ ಮಕ್ಕಳಾದ ಸುರೇಶ್, ಸತೀಶ್ ಮತ್ತು ಜಗದೀಶ್ ಇನ್ನೂ ವಿದ್ಯಾಭ್ಯಾಸ ಮಾಡುತ್ತಿದ್ದ ಕಾರಣ ತಮ್ಮ ಸಹಾಯಕ್ಕಿರಲಿ ಎಂದು ಸ್ವಂತ ತಮ್ಮ ಪ್ರಭಾಕರ ಕೋರೆಯನ್ನು ಕೆಎಲ್‌ಇ ಸಂಸ್ಥೆಗೆ ಸಂಚಾಲಕ ಎಂದು ನಾಮಕರಣ ಮಾಡಿಸಿದ್ದರು ಚಿದಾನಂದ ಕೋರೆ.

ಅದೃಷ್ಟ ಎನ್ನುವುದು ಹೇಗಿರುತ್ತೆ ನೋಡಿ. ಇದಾದ ಒಂದೇ ವರ್ಷಕ್ಕೆ, ಅಂದರೆ 1984 ರಲ್ಲಿ ಚಿದಾನಂದ ಕೋರೆ ಮೃತಪಟ್ಟರು. ವಿದ್ಯಾವಂತ, ಬುದ್ಧಿವಂತ, ಎಲ್ಲರೊಂದಿಗೂ ಹೊಂದಿಕೊಂಡು ಹೋಗುವ ಸ್ವಭಾವ, ಅದರಲ್ಲೂ ಅಂಕಲಿಯ ಸ್ವಾತಂತ್ರ್ಯ ಹೋರಾಟಗಾರ, ಶ್ರೀಮಂತ ಪಾಟೀಲ ಬಸವಪ್ರಭು ಕೋರೆಯವರ ಪುತ್ರ ಪ್ರಭಾಕರ ಕೋರೆಯವರನ್ನೇ ಅಂದು ಅವಿರೋಧವಾಗಿ ಕೆಎಲ್‌ಇ ಸಂಸ್ಥೆಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯ್ತು. ಅವತ್ತಿನಿಂದಲೂ ಪ್ರಭಾಕರ ಕೋರೆ ಕೆಎಲ್‌ಇಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುತ್ತಲೇ ಬಂದಿದ್ದಾರೆ.

ಅವರ ಅಧಿಕಾರ ಅವಧಿಯಲ್ಲಿ ಕೆಎಲ್‌ಇ ಸಂಸ್ಥೆ ಉನ್ನತವಾಗಿ ಬೆಳೆದದ್ದು, 162 ಅಂಗ ಸಂಸ್ಥೆಗಳನ್ನು ಕಟ್ಟಿದ್ದು, 70 ಕೋಟಿ ರೂಪಾಯಿ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣ, ಸಂಸ್ಥೆಗೆ ಡೀಮ್ಡ್ (ಸ್ವಾಯತ್ತ) ಯೂನಿವರ್ಸಿಟಿ ಸ್ಥಾನಮಾನ ಮತ್ತು ಅದರೊಂದಿಗೆ ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ರಾಜ್ಯ ವಿಧಾನ ಮಂಡಲದ ಅಧಿವೇಶನ ಸಂಘಟನೆಯ ಯಶಸ್ಸು ಪ್ರಭಾಕರ ಕೋರೆಯವರಿಗೆ ಸೇರಬೇಕು. ಆದರೆ ಅವರು ಈ ಹಂತಕ್ಕೆ ಬೆಳೆಯಲು ಅನುಸರಿಸಿದ ಮಾರ್ಗಗಳು ಮತ್ತು ಆಡಳಿತ ಮಂಡಳಿಯಲ್ಲಿ ತಮ್ಮ ಹಿಂಬಾಲಕರೇ ಇರಬೇಕೆಂಬ ಹಠ ಮಾತ್ರ ಪ್ರಶ್ನಾರ್ಹ.

ಕೆಎಲ್‌ಇಯಂತಹ ದೊಡ್ಡ ಸಂಸ್ಥೆಯ ಮೇಲೆ ಬೆಳಗಾಂ ಜಿಲ್ಲೆಯ ಎಲ್ಲ ಪಕ್ಷಗಳ ರಾಜಕಾರಣಿಗಳ ಕಣ್ಣಿದೆ. ಆದರೆ ಪ್ರಭಾಕರ ಕೋರೆ ಅವರನ್ನು ಹತ್ತಿರ ಸುಳಿಯಗೊಡದೆ ದೂರವಿಟ್ಟಿದ್ದಾರೆ. ಮಾಜಿ ಕೇಂದ್ರ ಸಚಿವ ಬಿ. ಶಂಕರಾನಂದ, ಮಾಜಿ ಲೋಕಸಭಾ ಸದಸ್ಯ



ಎಸ್.ಬಿ. ಸಿದ್ನಾಳ್, ಚಿಕ್ಕೋಡಿ ಲೋಕಸಭಾ ಸದಸ್ಯ ರಮೇಶ್ ಜಿಗಜಿಣಗಿ, ಗೋಕಾಕದ ಜಾರಕಿಹೋಳಿ ಕುಟುಂಬ ಮತ್ತು ರಾಯಭಾಗದ ವಿ.ಎಲ್. ಪಾಟೀಲ್ ಎಲ್ಲರೂ ಕೆಎಲ್‌ಇ ರಾಜಕೀಯದಲ್ಲಿ ಕೈಯಾಡಿಸಲು ಯತ್ನಿಸಿದವರೆ. ಯಾಕೆಂದರೆ ಇವತ್ತು ಕೆಎಲ್‌ಇ ಸಂಸ್ಥೆಯ ಅಧ್ಯಕ್ಷಗಿರಿ ಎಂದರೆ ದುಡ್ಡು ಸಂಗ್ರಹಣೆ ಮತ್ತು ಅಧಿಕಾರಗಳಲ್ಲಿ ಯಾವುದೇ ಮುಖ್ಯಮಂತ್ರಿಗಿಂತ ಕಡಿಮೆ ಇಲ್ಲ.

ಆದರೆ 'ಲಿಂಗಾಯತ್ ಎಜುಕೇಷನ್ ಸೊಸೈಟಿ' ಎಂದು ಪಂಚಮಸಾಲಿ ಲಿಂಗಾಯತರೇ ಆರಂಭಿಸಿದ್ದ ಈ ಸಂಸ್ಥೆಯಿಂದ ಪ್ರಭಾಕರ ಕೋರೆ ಲಿಂಗಾಯತರ ಇತರೇ ಉಪಪಂಗಡಗಳನ್ನು ಹೊರಗಿಟ್ಟಿದ್ದರು. ಇದರ ಮಧ್ಯೆ ನಡೆದ ಬೆಳವಣಿಗೆಯಲ್ಲಿ ಸಂಸ್ಥೆಗೆ ಒಂದು ಜಾತ್ಯತೀತ ಮೆರಗು ನೀಡುವ ಉದ್ದೇಶದಿಂದ 'ಲಿಬರಲ್ ಎಜುಕೇಷನ್ ಸೊಸೈಟಿ' ಎಂದು ಹೆಸರನ್ನು ಬದಲಿಸಲಾಗಿತ್ತು. ಈ ಬದಲಾವಣೆ ಆದ ತಕ್ಷಣ ಇಡೀ ಬೆಳಗಾಂ ಜಿಲ್ಲೆಯ ರಾಜಕಾರಣಿಗಳು ಮೈಕೊಡವಿಕೊಂಡು ಕೆಎಲ್‌ಇ ಸಂಸ್ಥೆಗೆ ನುಸುಳಲು ಸಜ್ಜಾದರು. ಈ ಸೂಕ್ಷ್ಮವನ್ನರಿತ ಕೋರೆ ಮತ್ತೆ ಸಂಸ್ಥೆಯ ಹೆಸರನ್ನು 'ಲಿಂಗಾಯತ ಎಜುಕೇಷನ್ ಸೊಸೈಟಿ' ಎಂದು ಬೋರ್ಡು ತಿರುಗಿಸಿ ಇತರೇ ಜಾತಿಯವರ ಪ್ರವೇಶದ ಉತ್ಸಾಹಕ್ಕೆ ತಣ್ಣೀರೆರಚಿದರು.


ಇವತ್ತು ಕೆಎಲ್‌ಇ ಸಂಸ್ಥೆಯ ವಾರ್ಷಿಕ ಚುನಾವಣೆ ಯಾವ ಲೋಕಸಭಾ, ವಿಧಾನಸಭಾ ಚುನಾವಣೆಗಳ ಖರ್ಚು, ವೆಚ್ಚ ಮತ್ತು ಆಡಂಬರವನ್ನು ನಾಚಿಸುತ್ತದೆ. ನಕಲಿ ಮತದಾನ, ಬೂತ್ ಕ್ಯಾಪ್ಚರಿಂಗ್, ಬೆದರಿಕೆ ಇವೆಲ್ಲಾ ಕಾಮನ್. ಬೋಗಸ್ ಮತದಾರರನ್ನು ಲಾರಿ-ಬಸ್ಸುಗಳಲ್ಲಿ ಕರೆತರಲಾಗುತ್ತದೆ. ಇಡೀ ಜಿಲ್ಲೆಯಾದ್ಯಂತ ಆಳೆತ್ತರದ ಕಟೌಟ್‌ಗಳು, ಪೋಸ್ಟರ್‌ಗಳು ರಾರಾಜಿಸುತ್ತವೆ. ಹೆಂಡ, ಹಣ, ಆಮಿಷಗಳ ಪ್ರಭಾವವೂ ನಡೆಯುತ್ತದೆ. ಶಿಕ್ಷಣ ಸಂಸ್ಥೆಯೊಂದರ ಚುನಾವಣೆಯನ್ನು ಈ ಮಟ್ಟಕ್ಕೆ ಇಳಿಸಿದ ಅಪಕೀರ್ತಿಯೂ ಪ್ರಭಾಕರ ಕೋರೆಗೆ ಸಲ್ಲಬೇಕು.

ಇಂತಾ ಬಂಗಾರದ ಗಣಿಯಂಥ ಸಂಸ್ಥೆಗೆ ನನ್ನನ್ನು ನಿರ್ದೇಶಕನನ್ನಾಗಿ ಮಾಡಿ ಎಂಬುದು ಜಗದೀಶ್ ಕೋರೆಯ ಬೇಡಿಕೆ. ಅದರೊಂದಿಗೆ ಪ್ರಭಾಕರ್ ಕೋರೆಯ ನಿಯಂತ್ರಣದಲ್ಲೇ ಇರುವ ದೂದ್‌ಗಂಗಾ ಸಕ್ಕರೆ ಕಾರ್ಖಾನೆಯ ಷೇರುಗಳನ್ನು ಕೊಡಿಸಿ ಎಂದು ಜಗದೀಶ್ ಕೋರೆ ಕೇಳಿದ್ದನಂತೆ. ಇವೆರಡೂ ಬೇಡಿಕೆಗಳಿಗೆ ಈ ಹಿಂದೆ ಆಸ್ತು ಎಂದಿದ್ದ ಪ್ರಭಾಕರ. ಕೋರೆ ವಿನಾಕಾರಣ ದಿನದೂಡುತ್ತಾ ತನ್ನನ್ನು ವಂಚಿಸುತ್ತಿದ್ದಾರೆ ಎಂಬ ಅಸಹನೆ ಜಗದೀಶ್ ಕೋರೆಯೊಳಗೆ ಬೆಳೆಯುತ್ತಾ ಹೋಯಿತು. ತನ್ನ ಅಪ್ಪನಿಂದಾಗಿಯೇ ತಾನೆ ಪ್ರಭಾಕರ ಕೋರೆ ಕೆಎಲ್‌ಇ ಅಧ್ಯಕ್ಷ, ಎಂಎಲ್‌ಸಿ ಆಗಿದ್ದು. ಅದೇ ತರ ಈಗ ತನಗೂ ಸಪೋರ್ಟ್ ಮಾಡಲಿ ಎಂಬ ತರ್ಕ ಜಗದೀಶನಿಗೆ ಬಂದುಬಿಟ್ಟಿತ್ತು.


ಜಗದೀಶ್ ಕೋರೆ

ಆದರೆ ಪ್ರಭಾಕರ ಕೋರೆಯ ಆಪ್ತರು ಈ ವಾದವನ್ನು ಒಪ್ಪುವುದಿಲ್ಲ. ಜಗದೀಶ್ ಕೋರೆಯ ಅಣ್ಣ ಸುರೇಶ್ ಕೋರೆ ಈಗಾಗಲೇ ಕೆಎಲ್‌ಇ ಸಂಸ್ಥೆಯ ನಿರ್ದೇಶಕನಾಗಿದ್ದಾನೆ. ಆತ ಜಿಲ್ಲಾ ಪಂಚಾಯ್ತಿ ಸದಸ್ಯ ಕೂಡ. ಮತ್ತೊಬ್ಬ ಅಣ್ಣ ಸತೀಶ್ ಕೋರೆ ಗ್ರಾಮ ಪಂಚಾಯ್ತಿ ಸದಸ್ಯ. ಅವರೆಲ್ಲರೂ ಪ್ರಭಾಕರ ಕೋರೆಯವರೊಂದಿಗೆ ಅನ್ಯೋನ್ಯವಾಗಿದ್ದಾರೆ. ಮೇಲಾಗಿ ಒಂದೇ ಕುಟುಂಬದ ಇಬ್ಬರಿಗೆ ನಿರ್ದೇಶಕ ಸ್ಥಾನ ಕೊಡಲು ಸಂಸ್ಥೆಯ ನಿಯಮದಲ್ಲಿ ಅವಕಾಶವಿಲ್ಲ. ಜಗದೀಶ ಯಾವಾಗ ಜೈನರ ಹುಡುಗಿಯನ್ನು ವಿವಾಹವಾಗಿ ಪ್ರತ್ಯೇಕವಾದನೋ ಆಗಲೇ ಅವನಿಗೆ ಸೇರಬೇಕಾದ ಆಸ್ತಿಯನ್ನೆಲ್ಲಾ ನೀಡಲಾಗಿದೆ ಎಂಬುದು ಅವರ ವಾದ.

ಆದರೆ ಪ್ರಭಾಕರ ಕೋರೆ ಆಪ್ತರ ಈ ಹೇಳಿಕೆಯಲ್ಲಿ ಕೆಲವು ವ್ಯತ್ಯಾಸಗಳಿವೆ. ಮೊದಲಿಗೆ ಕೆಎಲ್‌ಇ ಸಂಸ್ಥೆಯ ನಿರ್ದೇಶಕನಾಗಿರುವ ಜಗದೀಶ್ ಕೋರೆಯ ಅಣ್ಣ ಸುರೇಶ್ ಕೋರೆ ಮತ್ತು ಪ್ರಭಾಕರ್ ಕೋರೆ ನಡುವೆ ಸಂಬಂಧ ಚೆನ್ನಾಗಿಲ್ಲ. ಸುರೇಶ್ ಕೋರೆ ಈ ಹಿಂದೆ 'ದೂದ್‌ಗಂಗಾ ಸಕ್ಕರೆ ಕಾರ್ಖಾನೆ'ಯ ಅಧ್ಯಕ್ಷರಾಗಿದ್ದವರು. ಆದರೆ ಕಳೆದ ಬಾರಿ ಚುನಾವಣೆಯಲ್ಲಿ ಪ್ರಭಾಕರ ಕೋರೆ ತನ್ನ ಬಂಟ ಅಶೋಕ್ ಪಾಟೀಲ್‌ನನ್ನು ಸುರೇಶ್ ಕೋರೆಯ ತಂಡದ ವಿರುದ್ಧವೇ ನಿಲ್ಲಿಸಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು.


ಗುಂಡೇಟು ತಿಂದ ಪ್ರಭಾಕರ ಕೋರೆ

ಇದರಿಂದ ಸಿಟ್ಟಿಗೆದ್ದಿದ್ದ ಸುರೇಶ್ ಕೋರೆ, ಕಳ
ವಿಧಾನಸಭಾ ಚುನಾವಣೆಯಲ್ಲಿ ಪ್ರಭಾಕರ ಕೋ
ಕಾಗವಾಡ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದಾಗ ಅ
ವಿರುದ್ಧವೇ ಕೆಲಸ ಮಾಡಿದರು. ಇವರೊಂದಿಗೆ ಮತ್ತೊ
ಸಹೋದರ ಪಂಚಾಯ್ತಿ ಸದಸ್ಯ ಸತೀಶ್ ಕೋರೆ ಕೂ
ಕೈ ಜೋಡಿಸಿದ್ದರು. ಈ ಅಣ್ಣ ತಮ್ಮಂದಿರಿಗೆ ಬೆಂಬಲವಾ
ಕಾಂಗ್ರೆಸ್ ಪಕ್ಷದವರೇ ಆದ ಮಾಜಿ ಸಚಿವ ಪ್ರಕಾ
ಹುಕ್ಕೇರಿ ಒಳಗಿಂದೊಳಗೆ ಕುಮ್ಮಕ್ಕು ನೀಡಿ ಪ್ರಭಾ
ಕೋರೆ ಸೋಲೊಪ್ಪುವಂತೆ ಮಾಡಿದರು. ಇಂತಾ ಸನ್ನಿವೇ
ದಲ್ಲಿ ಪ್ರಭಾಕರ ಕೋರೆಯೊಂದಿಗೆ ಸುರೇಶ್ ಕೋ
ಕುಟುಂಬದವರು ಅನ್ಯೋನ್ಯವಾಗಿದ್ದರು ಎಂದು ವಾದಿಸು
ದರಲ್ಲಿ ಅರ್ಥವಿಲ್ಲ. ಒಟ್ಟಿನಲ್ಲಿ ಇಡೀ ಚಿದಾನಂದಗೌಡ
ಕುಟುಂಬದವರು, ಚಿಕ್ಕಪ್ಪ ಪ್ರಭಾಕರ ಕೋರೆ
ವಿರುದ್ಧವಿದ್ದರೆಂಬುದು ಸತ್ಯ.

ಆದರೆ ಜಗದೀಶ್ ಕೋರೆಯ ವಿಚಾರ
ಬೇರೆ. ಈತ ಎಲ್ಲಿಯೂ ಸಲ್ಲದವನು. ಜೈ
ಹುಡುಗಿಯನ್ನು ಪ್ರೀತಿಸಿ ಮದುವೆಯಾದ ಮೇ
ಕುಟುಂಬದಿಂದ ಬೇರೆಯಾದ ಜಗದೀಶ್,
ಯಲ್ಲಿ ಸಿವಿಲ್ ಇಂಜಿನಿಯರ್. ಆದರೆ ಕೈಯಿ
ಯಾವ ಕೆಲಸವೂ ಬರ್ಕತ್ತಾಗಲಿಲ್ಲ. ಕಡೆಗೆ ಚಿ
ಪ್ರಭಾಕರ ಕೋರೆ ತಮ್ಮ ಸಂಸ್ಥೆಯ ಚಿಕ್ಕಪು
ಸಿವಿಲ್ ವರ್ಕ್‌ಗಳನ್ನೂ ಇವನಿಗೆ ನೀಡುತ್ತಿರಲಿ
ಯಾವ್ಯಾವುದೋ ವ್ಯವಹಾರಗಳಲ್ಲಿ ಕೈಹಾಕಿ ಬ
ಳಷ್ಟು ನಷ್ಟ ಅನುಭವಿಸಿದ್ದ. ಸಾಲ ಮಾಡಿ
ಸಾಲಗಾರರಿಗೆ ನೀಡಿದ ಚೆಕ್‌ಗಳು ಬೌನ್ಸ್
ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿ
ಅಣ್ಣಂದಿರಾದ ಸುರೇಶ್ ಮತ್ತು ಸತೀಶ್
ಇವನ ಕೈ ಬಿಟ್ಟಿದ್ದರು.

ಈ ರೀತಿ ಕೌಟುಂಬಿಕ ಸಮಸ್ಯೆ,
ಮುಂದೆಯೇ ರಕ್ತ ಸಂಬಂಧಿಗಳ ವೈಭವ, ಆವರ ತಿರು
ವ್ಯವಹಾರಗಳ ವೈಫಲ್ಯದಿಂದ ಜಗದೀಶ್ ಕೋರೆ ಎ
ಮಟ್ಟಿಗೆ ಖಿನ್ನತೆ ಮತ್ತು ಆವೇಶಕ್ಕೆ ಒಳಗಾಗುತ್ತಿದ್ದನೆಂ
'ಪರೀಕ್ಷೆಯಲ್ಲಿ ಕಾಪಿ ಹೊಡೆದ ತನ್ನ ಮಗನನ್ನು ಹಿಡಿ
ಕಾರಣಕ್ಕೆ ಚಿಕ್ಕೋಡಿಯ 'ಬಸವ ಪ್ರಭು' ಕಾಲೇ
ಪ್ರಿನ್ಸಿಪಾಲರನ್ನು ಹಿಡಿದು ಹಿಗ್ಗಾ-ಮುಗ್ಗಾ ಥಳಿ

...ನ ಮಗನ ಗುಂಡೇಟಿನ ದುರಂತ ಸಂಭವಿಸದೆಯೇ ...ಲ್ಲಿ ಕೆಎಲ್‌ಇ ಸೊಸೈಟಿ ಚೇರ್ಮನ್ ಪ್ರಭಾಕರ ... ಕೋರೆ ಇನ್ನು ಕೆಲವೇ ದಿನಗಳಲ್ಲಿ ಕಾಂಗ್ರೆಸ್‌ಗೆ ... ಹೇಳಲಿದ್ದಾರೆ!!

...ವೇಗೌಡರ ... ಆಹ್ವಾನವನ್ನೊಪ್ಪಿ ... ಕುಮಾರಣ್ಣನ ... ಸಂಪುಟದಲ್ಲಿ ...ಲಾಗಲಿದ್ದಾರೆ??

...ಲಿನ ಎರಡೂ ಪ್ರಶ್ನೆಗಳಿಗೆ "ಹೌದು. ಹೌದು" ... ಗಟ್ಟಿದನಿಯಲ್ಲಿ ಉತ್ತರಿಸುತ್ತಾರೆ ಕೋರೆಯವರ ...ತರುಗಳು ಮತ್ತು ಖಾಸಾ ಹಿತೈಷಿಗಳು....

...ಳಗಾವಿಯಲ್ಲಿ ಅಲ್ಪಾವಧಿಯಲ್ಲಿಯೇ ಯುದ್ಧದೋ...ಯಲ್ಲಿ ಸಂಘಟನೆ ಮಾಡಿ ರಾಜ್ಯ ವಿಧಾನಮಂಡಲ ...ನದ ಯಶಸ್ವೀ ನಿರ್ವಹಣೆಯ 'ರೂವಾರಿ' ಎಂದು ...ಕ್ಷಗಳಿಂದ ಶಾಬ್ಬಾಸಗಿರಿ ಪಡೆದುಕೊಂಡಿದ್ದ ಕೋರೆ ...ನ ಜೆಡಿಎಸ್ ಪಿತಾಶ್ರೀ ದೇವೇಗೌಡರಿಂದ ಅಂತಿಮ ...ಗ್ನಲ್ ದೊರೆಯುವುದು ಕೇವಲ ಔಪಚಾರಿಕ ...ತಹ ಸ್ಥಿತಿ ನಿರ್ಮಾಣವಾಗಿತ್ತು....

...ತ್ತೀಚೆಗೆ ಪದೇಪದೇ ಕಾಂಗ್ರೆ ಪಾರ್ಟಿಯ ಲಿಂಗಾಯತ ...ಯಕರುಗಳೆಲ್ಲ ದಿಲ್ಲಿಯ ತಮ್ಮ ಹೈಕಮಾಂಡ್ ...ಸಾನಿಯೆದುರು ಕೆಪಿಸಿಸಿಯಲ್ಲಿ ತಮ್ಮನ್ನು ಅಲಕ್ಷಿಸಲಾ...ದೆ. ಅವಮಾನಿಸಲಾಗುತ್ತಿದೆ ಎಂದು ದೂರು ಸಲ್ಲಿಸುತ್ತ ...ದ್ದರಲ್ಲವೆ?

...ಲಿಂಗಾಯತ ಕಾಂಗ್ರೆಸ್ಸಿಗರ ಈ ಸಾಮೂಹಿಕ ತೊಳ... ಲಾಡುವ ... ಸಲಗಳೆಲ್ಲ ದಾ... ಶಾಮನೂರು ಶಿವಶಂಕರಪ್ಪನವರನ್ನು ಬಿಟ್ಟರೆ ಕೋರೆ ... ಸಮುಖರಾಗಿದ್ದರು. ತಮ್ಮ ಜಾತಿ ಬಾಂಧವರ ಸಿಟ್ಟೋಗದ ... ಅವಮಾನಯಾನ ಮತ್ತು ... ವೇದನೆಯನ್ನೆಲ್ಲ ಧಾರಾಳವಾಗಿ ಭರಿಸುತ್ತ ಬಂದ ಕೋರೆ ಕ್ರಮೇಣ ಇಂತಹ ಪ್ರಯತ್ನಗಳ ನಿರರ್ಥಕತೆಯ...ನ್ನರಿತುಕೊಂಡು ಜೆಡಿಎಸ್‌ನ ರಾಜಪರಿವಾರದ ಜತೆ ಒಡನಾಟ ಶುರು ಮಾಡಿಕೊಂಡಿದ್ದರು.....

ಇಂತಹ ನಿರಂತರ ಒಡನಾಟದ ಫಲವಾಗಿಯೇ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಕೀರ್ತಿ ಪತಾಕೆಯನ್ನು ಹಾರಿಸಲೆಂದೇ ಆಯೋಜಿಸಬೇಕೆಂದಿದ್ದ ಬೆಳಗಾವಿ ಅಸೆಂಬ್ಲಿ ಅಧಿವೇಶನದ ಸಮಗ್ರ ಅತಿಥ್ಯದ ಸಂಘಟನೆಯ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುವುದಾಗಿ ಸ್ವತಃ ಕೋರೆಯವರೇ ಆಹ್ವಾನ ಮಂಡಿಸಿದ್ದು! ಅವರ ಆಹ್ವಾನವನ್ನು ತತ್‌ಕ್ಷಣವೇ ಒಪ್ಪಿಕೊಂಡ ಸಿ.ಎಂ. ಸಾಹೇಬರು ತಮ್ಮ ಪಿತಾಶ್ರೀಯವರೊಂದಿಗೆ ಸಮಾಲೋಚಿಸಿ ಇಡೀ ಅಧಿವೇಶನದ ಯಶಸ್ಸಿನ ಗುಂಗಿನಲ್ಲಿಯೇ ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್ಸನ್ನು ನಾಮಾವಶೇಷ ಮಾಡುವ ಅಜೆಂಡಾವನ್ನು ಸಿದ್ಧಪಡಿಸಿಕೊಂಡರು.....

ಗೌಡರಿಂದ ನೇರ ಆಮಂತ್ರಣ

ಕಾಂಗ್ರೆಸ್ ಪಾರ್ಟಿಯ ಲಿಂಗಾಯತ ನಾಯಕರ ಸಾಮೂಹಿಕ ಅತೃಪ್ತಿಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಬಂದಿದ್ದ ದೇವೇಗೌಡರು ಬೆಳಗಾವಿ ಅಸೆಂಬ್ಲಿ ಅಧಿವೇಶನದ ಶ್ರೇಯಸ್ಸನ್ನು ಕೋರೆಯವರಿಗೆ ... ತಂತ್ರವನ್ನು ಪ್ರಯೋಗಿಸಿದ್ದರು.

"... ತಹ ... ಪಾರ್ಟಿಯವರು ... ದ್ವಾರದ ... ಗಳ ಕಲ್ಪರ್ರೇ ಹೀಗಾಗಿದೆ ಏನು ಮಾಡೋದು? ನಮ್ಮ ಹಣೆಬರಹ...." ಎಂದು ಪೀಠಿಕೆ ಹಾಕಿದರು ಗೌಡ್ರು.....

ಮತ್ತೆ ಮುಂದುವರೆಸುತ್ತ "ತಾವು ತಪ್ಪು ತಿಳಕೊಳ್ಳದೇ ಇದ್ರೆ ಒಂದು ಸಲಹೆ ಕೊಡ್ತೀನಿ... ನೀವು ಆ ಕಾಂಗ್ರೆಸ್ ಎಮ್ಮೆಲ್ಸಿಗಿರಿಗೆ ರಾಜೀನಾಮೆ ಬಿಸಾಕಿಬಿಟ್ಟು ನಮ್ಮ ಪಕ್ಷಕ್ಕೆ ಬಂದ್ಬಿಡಿ ಕೋರೆಯವರೆ. ನಾನು ನಿಮ್ಮನ್ನು ನನ್ನ ಮಗನ ಕ್ಯಾಬಿನೆಟ್ಟನಲ್ಲಿ ಮಂತ್ರಿ ಮಾಡಿಸ್ತೇನೆ. ಒಳ್ಳೆಯ ಖಾತೆ ಕೊಡ್ತೇನೆ. ನಿಮ್ಮ ರಾಜೀನಾಮೆಯಿಂದ ಖಾಲಿಯಾಗೋ ಸೀಟಿಗೆ ಮುಂದೆ ಆರು ತಿಂಗಳೊಳಗೆ ನಿಮ್ಮನ್ನೇ ಎಲೆಕ್ಟ್ ಮಾಡಿ ತರೋಣವಂತೆ ಒಪ್ಪಿಗೇನಾ??" ಎಂದು ನೇರವಾದ ಆಮಂತ್ರಣ ನೀಡಿ ಅವರ ಉತ್ತರಕ್ಕಾಗಿ ಕಾದರು.

ಅಧಿಕಾರಸ್ಥ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಪಿತಾಮಹನಿಂದಲೇ ಇಂತಹ ಆಕರ್ಷಕ ಆಮಂತ್ರಣ ಬಂದದ್ದನ್ನು ಕೇಳಿಸಿಕೊಂಡ ಪ್ರಭಾಕರ ಕೋರೆ ರೋಮಾಂಚನಗೊಂಡದ್ದು ಸಹಜವೇ. ಆದರೆ ಮೂಲತಃ ಒಳ್ಳೆಯ ಬಿಸಿನೆಸ್‌ಮ್ಯಾನ್ ಕೂಡ ಆಗಿರುವ ಕೋರೆ ಗೌಡರಿಗೆ ಥ್ಯಾಂಕ್ಸ್ ಹೇಳುತ್ತ "ನಮ್ಮ ವೆಲ್‌ವಿಷರ್ಸ್ ಜತೆಗೆ ಮಾತಾಡಿಕೊಂಡು ಒಂದು ತೀರ್ಮಾನಕ್ಕೆ ಬರ್‍ತೇನೆ ಸಾರ್... ನನಗs ದಯವಿಟ್ಟು ಒಂದು ಸ್ವಲ್ಪ ಟೈಮ್ ಕೊಡ್ರಿ...." ಎಂದು ಕಾಲಾವಕಾಶ ಪಡೆದುಕೊಂಡರು.

ಈ ಮಾತುಕತೆಯ ನಂತರದ ಸನ್ನಿವೇಶದಲ್ಲಿ ಕಾಂಗ್ರೆ ಬಿಡುವ, ಎಮ್ಮೆಲ್ಸಿಗಿರಿಗೆ ರಾಜೀನಾಮೆ ಕೊಡುವ ಹಾಗು ದಳಕ್ಕೆ ಸೇರಿ ಮಂತ್ರಿಯಾಗುವ ಸಾಧ್ಯತೆಗಳ ಬಗ್ಗೆ ಗಂಭೀರವಾಗಿ ಆಪ್ತಾಲೋಚನೆ ನಡೆಸಿರುವಂತೆಯೇ ಕೋರೆ ತಮ್ಮ ದಾಯಾದಿಪುತ್ರನ ಹುಂಬ ಹಿಂಸಾಚಾರಕ್ಕೆ ಗುರಿಯಾಗಿ ಜೀವನ್ಮರಣದ ಹೋರಾಟದಲ್ಲಿ ತೊಡಗುವಂತಾಗಿದ್ದು ವಿಪರ್ಯಾಸಕರ....

... ಯಶಸ್ವಿ ... ಕೋರೆಯವರು ... ಕಟ್ಟಿಸಿಕ್ಕೊ ... ಸರ್ಕಾರದ ... ಲಿಕ್ಕೂ ಆಗಲಿಲ್ಲ.... ಆಮೇಲೆ ... ಮೂರ್ತಿಯವರನ್ನು ಕರ್ಕೊಂಡು ... ಮೆಂಬರ್ ಮಾಡ್ದೆ.... ಆಜೆ, ಅವರು ... ನಡೆದ ಪಂಚಾಯ್ತಿ ಚುನಾವಣೆಯಲ್ಲಿ ನಮಗೆ ಮೈಸೂರು-ಚಾಮರಾಜನಗರ ಜಿಲ್ಲೆಯಲ್ಲಿ ಭಾರೀ ಸೋಲಾಗಿ ಅವಮಾನವಾಯ್ತು.... ಇವಾಗ ... ಇಡೀ ಬೆಳಗಾವಿ ಜಿಲ್ಲೆನಲ್ಲಿ ನನ್ನ ಪಾರ್ಟಿ ಉಳಿಸೋ ಜವಾಬ್ದಾರಿ ಹೊತ್ಕೋಬೇಕು..... ಕ್ಯಾಬಿನೆಟ್ ಮಂತ್ರಿಯಾಗಿ ಇಡೀ ಉತ್ತರ ಕರ್ನಾಟಕದ ಲಿಂಗಾಯತರನ್ನು ನನ್ನ ಪಾರ್ಟಿಯ ಪರ ಸಂಘಟನೆ ಮಾಡ್ಬೇಕು."

ದೇವೇಗೌಡರ ರಾಜಕೀಯ ಉದ್ದೇಶ, ಜಾತಿ ಲೆಕ್ಕಾಚಾರ ಹಾಗು ಭವಿಷ್ಯದ ಮುಂದಾಲೋಚನೆಗಳ ಸಾಕ್ಷಾತ್ಕಾರಕ್ಕೋಸ್ಕರ ಈ ಪ್ರಭಾಕರ ಕೋರೆ ಎಂಬ ಯಶಸ್ವಿ ಶ್ರೀಮಂತ ಸಂಘಟನಾ ಚತುರನೇ ಅನಿವಾರ್ಯ ಎಂಬ ತೀರ್ಮಾನ ಅಂತಿಮ ಘಟ್ಟ ತಲುಪಿತ್ತು....

-ರವೀಂದ್ರ ರೇಶ್ಮೆ

...ಟ್ಟಿಸಲಿದ್ದ ದುರಂತ!

ಕೋರೆಗೆ ರಾಜ್ಯೋತ್ಸವ ಪ್ರಶಸ್ತಿ?!

ಗುಂಡೇಟನಿಂದ ಗಂಭೀರವಾಗಿ ಗಾಯಗೊಂಡು ತಾವೇ ಸ್ಥಾಪಿಸಿದ ಕೆಎಲ್‌ಇ ಸೊಸೈಟಿ ಜೆ.ಎನ್.ಎಂ.ಸಿ. ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾಂಗ್ರೆ ನಾಯಕ ಪ್ರಭಾಕರ್ ಕೋರೆಯವರಿಗೆ ಕುಮಾರಸ್ವಾಮಿ ನೇತೃತ್ವದ ಅಭಿವೃದ್ಧಿ ರಂಗ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಲಿದೆಯೇ?

ಈ ಪ್ರಶ್ನೆಗೂ ಈಗಾಗಲೇ ಇಡೀ ಬೆಳಗಾವಿಯ ಉದ್ದಗಲಕ್ಕೂ "ಹೌದಂತೆ" ಎಂಬ ಉತ್ತರವೇ ಕೋರೆ ಅಭಿಮಾನಿಗಳಲ್ಲಿ ಮೊಳಗತೊಡಗಿದೆ... ಶಿಕ್ಷಣ ರಂಗದಲ್ಲಿ ಸಲ್ಲಿಸಿದ ಅಭೂತಪೂರ್ವ ಸೇವೆಗಾಗಿ ಕೋರೆಯವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆಯೆಂಬುದು ಸರ್ಕಾರಿ ವಲಯಗಳ ಅಧಿಕೃತ ವಿವರಣೆ.....

ಆದರೆ ಈ ರಾಜ್ಯೋತ್ಸವ ಪ್ರಶಸ್ತಿಯೆ ಕೋರೆಯವರ ಚೇತರಿಕೆಯ ನಂತರ ಅವರ ಕಾಂಗ್ರೆ-ಪಕ್ಷತ್ಯಾಗ ಹಾಗು ಜೆಡಿಎಸ್ ಸೇರ್ಪಡೆಯ ಪ್ರಾರಂಭಿಕ ಸೂಚನೆಯಾಗಲಿದೆಯೆಂಬುದು ರಾಜಧಾನಿಯ ರಾಜಕೀಯ ವಕ್ತಾರರ ಅಂಬೋಣ.

...ಲಿಯ ಪಾಲಿಟೆಕ್ನಿಕ್‌ನಲ್ಲಿ ಯಾರದೋ ಪರವಾಗಿ ...ಡೆದಾಟಕ್ಕೆ ಇಳಿದು ...ಗೆ ಹೋಗಿದ್ದ ನಲವ...ತು ವರ್ಷದ ಒಬ್ಬ ...ಬಸ್ಕ ಹೀಗಾಡುತ್ತಾ...ರೆ ಅದಕ್ಕೆ ಆತನ ...ಕಿನ ಸೋಲುಗಳು, ...ಂದ ಉಂಟಾದ ...ಶ ಮಾನಸಿಕ ...ಯೇ ಕಾರಣ. ಆದರೆ ... ಪ್ರಭಾಕರ ...ಯ ಮೇಲೆ ...ದ ದಾಳಿ ಮಾತ್ರ ...ಶಪೂರ್ವ ಮತ್ತು ಪೂರ್ವ ನಿಯೋಜಿತ.



ಸುರೇಶ್ ಕೋರೆ

...ಪ್ರತಿ ದೀಪಾವಳಿ ಹಬ್ಬವನ್ನು ಪ್ರಭಾಕರ ಕೋರೆ ತಮ್ಮ ...ದಾದ ಅಂಕಲಿಯಲ್ಲಿ ಆಚರಿಸುವುದು ಗೊತ್ತಿದ್ದ ...ಶ್ ಕೋರೆ, ಒಂದು ವಾರದ ಮುನ್ನವೇ ಬೆಳಗಾಂ-...ರಾಷ್ಟ್ರ ಗಡಿ ಭಾಗದ ಕಾನಾಪುರದಿಂದ ಒಂದು ... ಪಿಸ್ತೂಲು ಕೊಂಡು ತಂದಿದ್ದಾನೆ. ಅವರ ಓಡಾಟವನ್ನು ...ವಾಗಿ ಅಭ್ಯಸಿಸಿ, ಸಾರ್ವಜನಿಕರಿಲ್ಲದ ಚಿತ್ರಮಂದಿರವನ್ನು ... ಮಾಡಿಕೊಂಡಿದ್ದಾನೆ. ಕಂಟ್ರಿ ಪಿಸ್ತೂಲಾದರೂ ಕೈ...ದೆ ಗುಂಡುಗಳು ಸರಿಯಾಗೇ ಹಾರಿವೆ. ಆಯಕಟ್ಟಿನ ... ಬಿದ್ದಿವೆ. ಆದರೆ ಪ್ರಭಾಕರ್ ಕೋರೆಯವರ ಆಯುಷ್ಯ ...ಇದೆ. ಅವರು ಉಳಿದುಕೊಂಡಿದ್ದಾರೆ. ಘಟನೆ ನಡೆದ ... 12 ಗಂಟೆಯಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದ ಜಗದೀಶ್ ... ತನ್ನ ಚಿಕಪ್ಪನ ಮೇಲಿದ್ದ ದ್ವೇಷ, ಅವರು ತನ್ನನ್ನು ... ವಂಚಿಸಿದ ರೀತಿಯಿಂದಾಗಿ ತಾನು ಅವರ ಮೇಲೆ ... ಈ ಕೃತ್ಯವೆಸಗಿರುವುದಾಗಿ ತಪ್ಪೊಪ್ಪಿ...ದ್ದಾನೆ.

ಕೆಎಲ್‌ಇ ಸೊಸೈಟಿ ಎಂಬ ಕಮರ್ಷಿಯಲ್ ಸ್ಟ್ರೀಟ್!!

ಹೌದು, ಪ್ರಭಾಕರ್ ಕೋರೆ ಚೇರ್ಮನ್ನರಾದ ಮೇಲೆ ಮುಂಬೈ ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಕೆಎಲ್‌ಇ ಸೊಸೈಟಿಯ ವರ್ಚಸ್ಸು, ಶ್ರೀಮಂತಿಕೆ ಹಾಗು ಸಂಪತ್ತುಗಳು ಹಲವಾರು ಪಟ್ಟು ಹೆಚ್ಚಳಗೊಂಡಿದ್ದು ಸತ್ಯ....

ಸುಮಾರು 46 ರಷ್ಟಿದ್ದ ಸಂಸ್ಥೆಯ ಶಾಲಾ ಕಾಲೇಜುಗಳ ಸಂಖ್ಯೆಯನ್ನು ಪ್ರಭಾಕರ ಕೋರೆ 162 ಕ್ಕೆ ಹೆಚ್ಚಿಸಿ ಸೊಸೈಟಿಯ ಕೀರ್ತಿ ಪತಾಕೆಯನ್ನು ಇಡೀ ಭಾರತದಾದ್ಯಂತ ಹಾರಾಡಿಸಿದರೆಂಬುದೂ ನಿಜವೇ....

ಆದರೆ ಇದೆಲ್ಲವೂ ಮೇಲ್ನೋಟಕ್ಕೆ ಜಗಮಗಿಸುವ, ಕಣ್ಣಿಗೆ ರಾಚುವಂತಹ ಭೌತಿಕ ಸಂಗತಿಗಳಷ್ಟೇ... 1984 ರಿಂದಾರಂಭಿಸಿ ಸತತವಾಗಿ 22 ವರ್ಷಗಳಿಂದಲೂ ಚುನಾವಣೆಗಳನ್ನು ಗೆಲ್ಲುತ್ತ, ಸೊಸೈಟಿಯ ಆಸ್ತಿಪಾಸ್ತಿಗಳು ಮತ್ತು ಸಿಬ್ಬಂದಿಯ ಮೇಲೆ ತಮ್ಮ ಕುಟುಂಬದ ಹಾಗು ತಮ್ಮ ಆಪ್ತರ ವಲಯದ ಹಿಡಿತವನ್ನು ಬಿಗಿಗೊಳಿಸುತ್ತ ಬಂದ ಕೋರೆ ನಾಯಕತ್ವ ಕೆಎಲ್‌ಇ ಸೊಸೈಟಿ ಎಂಬ ಶಿಕ್ಷಣ ಸಂಸ್ಥೆಯನ್ನು ಕ್ರಮೇಣ ಒಂದು ಯಶಸ್ವಿ ಶೈಕ್ಷಣಿಕ ಬಿಸಿನೆಸ್ ಕಂಪನಿಯನ್ನಾಗಿ ಮಾರ್ಪಡಿಸಿತೆಂಬುದೂ ಕಟುವಾಸ್ತವವೇ!

1984 ರಲ್ಲಿ ಮೊಟ್ಟಮೊದಲ ಬಾರಿಗೆ ಈ ಕೋರೆ ಚೇರ್ಮನ್ನಾಗಿ ಚುನಾಯಿತರಾದ ಸಂದರ್ಭದಲ್ಲಿಯೇ ಅದೊಂದು ಭಾರೀ ಬಂಡವಾಳ ಹೂಡಿಕೆಯ ದುಬಾರಿ ಚುನಾವಣೆ ಎಂಬ ಸಂಸ್ಕೃತಿ ಅನಾವರಣಗೊಂಡಿತು....

ಆ ದಿನಗಳಲ್ಲಿ 'ಲಂಕೇಶ್ ಪತ್ರಿಕೆ'ಯ ಪರವಾಗಿ ಬೆಳಗಾವಿಗೆ ಧಾವಿಸಿದ ಈ ಅಂಕಣಕಾರ ಕಂಡ ... 200 ... 300 ... ಖರ್ಚು ಮಾಡಿ ಕರೆಸಲಾದ ಸುಮಾರು 500 ಕ್ಕೂ ಅಧಿಕ ಖಾಸಗಿ ಕಾರು-ಜೀಪುಗಳ ಸಂಭ್ರಮ ಎದೆ ನಡುಗಿಸುವಂತಿತ್ತು....

ಈ ತಮ್ಮ ಚೇರ್ಮನ್ ಗಿರಿಯ ಆರಂಭಿಕ ಹಂತದಲ್ಲಿಯೇ ಹೀಗೆ ದುಬಾರಿ ಬಂಡವಾಳದ ಚುನಾವಣೆಗಳನ್ನು ಜರುಗಿಸುತ್ತ ಬಂದ ಕೋರೆ ಆವತ್ತೇ ಅನೇಕ ಕೊಡುಗೈ ದಾನಿಗಳು ಹಾಗು ಸಮಾಜ ಸೇವಾ ದುರಂಧರರ ನಿಸ್ವಾರ್ಥ ಸೇವೆಯ ತಾಣವಾಗಿದ್ದ ಕೆಎಲ್‌ಇ ಸೊಸೈಟಿಯನ್ನು ಒಂದು ಕಮರ್ಷಿಯಲ್ ಕಾಂಪ್ಲೆಕ್ಸನ್ನಾಗಿ ಪರಿವರ್ತಿಸಿಬಿಟ್ಟಿದ್ದರು.

22 ವರ್ಷಗಳ ಚೇರ್ಮನ್ ಗಿರಿಯಲ್ಲಿ ಹತ್ತಾರು ಹೊಸ ಹೊಸ ಕ್ಯಾಪಿಟೇಶನ್ ಆಧಾರಿತ ಇಂಜಿನಿಯರಿಂಗ್, ಡೆಂಟಲ್, ಫಾರ್ಮಸಿ, ಮ್ಯಾನೇಜ್‌ಮೆಂಟ್, ಲಾ ಇತ್ಯಾದಿ ಕಾಲೇಜುಗಳನ್ನು ಕಟ್ಟುತ್ತ ಸಂಸ್ಥೆಯನ್ನು ಶ್ರೀಮಂತಗೊಳಿಸಿದ ಕೋರೆ ಸ್ವತಃ ತಮ್ಮ ವೈಯಕ್ತಿಕ ಆರ್ಥಿಕ ಶಕ್ತಿ ಹಾಗು ರಾಜಕೀಯ ವರ್ಚಸ್ಸನ್ನು ಹಲವಾರು ಪಟ್ಟು ವರ್ಧಿಸಿಕೊಳ್ಳುತ್ತ ನಡೆದರು...

ಒಂದು ಕಡೆ ಉತ್ತರ ಕರ್ನಾಟಕ ಹಿಂದುಳಿದಿದೆ ಎಂಬ ಕೂಗಿಗೆ ದನಿಗೂಡಿಸುತ್ತಲೇ ಈ ಶಿಕ್ಷಣತಜ್ಞ ಕೋರೆ ನಿರ್ಮಿಸಿದ್ದು ಭಾರತದ ರಾಜಧಾನಿ ನವದೆಹಲಿಯಲ್ಲೊಂದು ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ಎಂಬ ಬಡಿವಾರದ ಶ್ರೀಮಂತರ ಮಕ್ಕಳ ಶಾಲೆಯನ್ನು!!

ತಮ್ಮ ಜಾತಿ ರಾಜಕೀಯಕ್ಕೆ ಪೂರಕವಾಗುವಂತೆ ತಮ್ಮ ವಿದ್ಯಾಸಂಸ್ಥೆಯ ಹೆಸರನ್ನೇ "ಕರ್ನಾಟಕ ಲಿಬರಲ್ ಎಜುಕೇಷನ್ ಸೊಸೈಟಿ" ಎಂದಿದ್ದುದನ್ನು "ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿ" ...

... ಸಮರ್ಥ ಪ್ರಿನ್ಸಿಪಾಲರಾಗಿದ್ದ ಡಾ. ಆರ್.ಆರ್. ಪಾಟೀಲರನ್ನು ಅತ್ಯಂತ ಹೀನಾಯವಾಗಿ ಡಿಸ್‌ಮಿಸ್ ಮಾಡಿಸಿಬಿಟ್ಟರು ಶಿಕ್ಷಣ ಸೇವಾ ನಿರತ ರಾಜಕಾರಣಿ ಕೋರೆ....

ಹಾಗೆಯೇ ಬೆಳಗಾವಿಯ ಜೆ.ಎನ್. ಮೆಡಿಕಲ್ ಕಾಲೇಜಿನ ಶೈಕ್ಷಣಿಕ ಗುಣಮಟ್ಟ ಮತ್ತು ಪ್ರತಿಷ್ಠೆಯನ್ನು ರಾಷ್ಟ್ರ-ಅಂತರರಾಷ್ಟ್ರೀಯ ಮಟ್ಟಕ್ಕೇರಿಸಲು ಕಾರಣರಾಗಿದ್ದ ಖ್ಯಾತ ಪೆಥಾಲಜಿ ಪ್ರೊಫೆಸರ್ ಮತ್ತು ಶ್ರೇಷ್ಠ ವೈದ್ಯಕೀಯ ಸಾಹಿತಿ ಡಾ. ಎಸ್.ಜಿ. ನಾಗಲೋತಿಮಠರಂತಹ ಸಮರ್ಪಣಾಭಾವ ಪ್ರಾಧ್ಯಾಪಕರನ್ನು ಗಡಿಪಾರು ಮಾಡಿಸಿಬಿಟ್ಟಿತು ಕೋರೆ ಪಟಾಲಂ!

ಇವತ್ತು ಹುಬ್ಬಳ್ಳಿಯ ಬಿವಿಬಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಶೆಟ್ಟರ್‌ರಂತಹ ಒಂದಿಬ್ಬರು ಶ್ರೇಷ್ಠ ಶೈಕ್ಷಣಿಕ ಆಡಳಿತಗಾರರಿರುವ ಕಾಲೇಜುಗಳನ್ನು ಹೊರತುಪಡಿಸಿದರೆ ಬಹುತೇಕ ಕೆಎಲ್‌ಇ ವಿದ್ಯಾಸಂಸ್ಥೆಗಳಲ್ಲಿ ಕಂಗೊಳಿಸುವುದು ಭಾರೀ ಕಟ್ಟಡಗಳ ಹೊರಮೈ ವೈಭವವಷ್ಟೇ. ಹೊರತು ಗುಣಮಟ್ಟದ ಶಿಕ್ಷಣ ಹಾಗು ಮೌಲ್ಯಪ್ರಜ್ಞೆಯ ದೃಷ್ಟಿಯಿಂದ ಒಳಗಡೆಯ ಹೂರಣವೇನೆಂಬುದು ಆ ಸಂಸ್ಥೆಗಳ ಸಿಬ್ಬಂದಿ ಮತ್ತು ವಿದ್ಯಾರ್ಥಿವೃಂದಕ್ಕೆಯೇ ಚೆನ್ನಾಗಿ ಗೊತ್ತು....

ಬೆಳಗಾವಿ ಮೆಡಿಕಲ್ ಕಾಲೇಜಿಗೆ ... ಯೂನಿವರ್ಸಿಟಿ ... ತಾವು ... ಎಂದು ಘೋಷಿಸಿಕೊಂಡ ... ಕೋರೆ ...


ಹೊಸಪೇಟೆ: ನಕಲಿ ಪತ್ರಕರ್ತ ಗಣೇಶ ಮಹಿಮೆ

ತೆಗಡು ಪತ್ರಕರ್ತ ಪ.ಯು. ಗಣೇಶನೆಂಬ ಬ್ಲ್ಯಾಕ್‌ಮೇಲ್ ಗಿರಾಕಿ ಹೊಸಪೇಟೆಯ ಮಾನವಂತರ ಪಾಲಿಗೆ ಹೀದೆಯಂತೆ ಹೆಗಲೇರಿ ಕಾಡತೊಡಗಿದ್ದಾನೆ. ದಿನಂಪ್ರತಿ ಸುದ್ದಿ ಬರೆಯುವ ಪತ್ರಕರ್ತರಿಗಿಂತಲೂ ಯುಗಾದಿಗೊಮ್ಮೆ, ದಸರಾಕ್ಕೊಮ್ಮೆ ಪತ್ರಿಕೆ ಪ್ರಿಂಟು ಹಾಕಿಸುವ ಈ ಪ.ಯು ಗಣೇಶ ಅತ್ಯಂತ ಬ್ಯುಸಿ ವ್ಯಕ್ತಿ.

ಹೊಸಪೇಟೆ ಸುತ್ತಮುತ್ತ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಪ.ಯು ಗಣೇಶನಂತಾ ಬ್ಲ್ಯಾಕ್‌ಮೇಲ್ ಗಿರಾಕಿಗಳಿಗೆ ಸಮೃದ್ಧ ಹುಲ್ಲುಗಾವಲನ್ನು ಒದಗಿಸಿದೆ. ಅಸಲಿಗೆ ಈ ಪ.ಯು. ಗಣೇಶ ಯಾರು? ಇವನು ಪತ್ರಕರ್ತನಾಗಿ ಅವತರಿಸಿದ್ದಾದರೂ ಹೇಗೆ ಎಂಬುದೇ ಕುತೂಹಲಕರ ಸಂಗತಿ.

ರಬ್ಬರ್‌ಸ್ಟ್ಯಾಂಪ್ ಗಿರಾಕಿ

ಮೂಲತಃ ತಮಿಳಿಗನಾದ ಈ ಗಣೇಶ್ ರಬ್ಬರ್‌ಸ್ಟ್ಯಾಂಪುಗಳನ್ನು ಮಾಡುತ್ತಿದ್ದ ಗಿರಾಕಿ. ಅದ್ಯೆಗೋ ಎ.ಕಮರೇಶ್ ಎಂಬ ಫೋಟೋಗ್ರಾಫರು ಜೊತೆಯಾಗಿ 'ನವ ಸಂದೇಶ' ಎಂಬ ಪತ್ರಿಕೆಗೆ ಮೂರ್ನಾಲ್ಕು ತಿಂಗಳು ಚೂರುಪಾರು ಸುದ್ದಿ ಬರೆದ. ಬಹುಶಃ ಆಗಲೇ ಒಂದಷ್ಟು ರುಚಿ ಸಿಕ್ಕಿ ತಾನೇ ಪತ್ರಿಕೆ ಮಾಡಿದರೆ ಹೇಗೆಂದು ಯೋಚಿಸಿ 'ರಾಜದರ್ಶನ' ಎಂಬ ಪತ್ರಿಕೆಯೊಂದನ್ನು ಶುರು ಹಚ್ಚಿಕೊಂಡ. ನಾಲ್ಕೈದು ಸಂಚಿಕೆ ತಂದು ದಂಧೆ ಶುರುವಿಟ್ಟುಕೊಂಡ. ಮತ್ತೆ 'ಗಣೇಶ್' ಅಂತಾ ತನ್ನದೇ ಹೆಸರಿನ ಪತ್ರಿಕೆಯೊಂದನ್ನು ಟೈಟಲ್ ಅಪ್ರೂವ್ ಆಗಿ ಬರುವ ಮೊದಲೇ ಆರಂಭಿಸಿದ. ಈ ನಡುವೆ ಚಿತ್ತವಾಡಗಿಯ ಸ್ಟೆಲ್ಲಾ ಮೇರಿ ಸ್ಕೂಲ್‌ನಲ್ಲಿ ಆಟೆಂಡರ್ ಕೆಲಸ ಮಾಡುತ್ತಿದ್ದ ಮುಸ್ಲಿಂ ಹುಡುಗಿಯೊಬ್ಬಳನ್ನು ವಿವಾಹವಾದ. ಆಕೆಗೊಂದು ಮಗುವನ್ನೂ ದಯಪಾಲಿಸಿದ. ನಂತರ, ಹುಲಿಗೆಮ್ಮ ಎಂಬ ಟೀಚರ್ ಹತ್ತಿರ ಸುಳಿದಾಡಲಾರಂಭಿಸಿ ಇದು ಅವನ ಮುಸ್ಲಿಂ ಪತ್ನಿಗೆ ತಿಳಿದು ದಿನಂಪ್ರತಿ ಜಗಳಾಟ ಶುರುವಾಯಿತು. ಆಕೆಗೆ "ಹುಲಿಗೆಮ್ಮ ಟೀಚರ್ ಕೆಲಸದಲ್ಲಿದ್ದಾಳೆ, ನಾನು ಮದುವೆಯಾದ್ರೆ ಲೈಫ್ ಸೆಟ್ಲ್ ಆಗುತ್ತೆ. ನೀನು ಸುಮ್ಮನಿರು, ನಿನಗೆ ತೊಂದರೆ ಯಾಗದಂತೆ ನೋಡಿಕೊಳ್ತೀನಿ" ಅಂತ ಭರವಸೆ ಕೊಟ್ಟು ಹುಲಿಗೆಮ್ಮ ಟೀಚರನ್ನು ಮದುವೆಯಾದ.



ಸ್ವಲ್ಪ ದಿನಗಳ ನಂತರ ಮೊದಲ ಮುಸ್ಲಿಂ ಪತ್ನಿ ನೇಣು ಹಾಕಿಕೊಂಡು ಸತ್ತಳು. ಆಕೆಯ ಪೋಷಕರು ಗಣೇಶನ ವಿರುದ್ಧ ಕೊಲೆ ಕೇಸು ದಾಖಲಿಸಿದರು. ಅದನ್ನು ಕೊನೆಗೆ ರಾಜಿ ಪಂಚಾಯ್ತಿ ಮೂಲಕ ಇತ್ಯರ್ಥ ಪಡಿಸಿಕೊಂಡು ಬಚಾವಾದ ಈ ಗಣೇಶ, ಎಂದಿನಂತೆ ತನ್ನ ಪೀತ ಪತ್ರಕರ್ತ ವೃತ್ತಿಯಲ್ಲಿ ಇನ್ನಷ್ಟು ಪಳಗಿದ. ಕಳೆದ ವರ್ಷ ಬಳ್ಳಾರಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಂಗ್ಲಿ ಮಲ್ಲಿಕಾರ್ಜುನ ಎಂಬಾತನ ಸಂಪರ್ಕ ಪಡೆದು ಒಳಗೊಳಗೇ ಹೊಸಪೇಟೆಯಲ್ಲಿ ಮುಖಮೂತಿಯಿಲ್ಲದ ಪತ್ರಿಕೆಯ ಹೆಸರಿನಲ್ಲಿ ಮೆಂಬರ್‌ಶಿಪ್ ಮಾಡಿಸಿ ತಾನೇ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷನೆಂದು ಘೋಷಿಸಿಕೊಂಡ. ಇವನ ಅಸಹ್ಯಕರ ನಡವಳಿಕೆಗಳಿಂದ ಬೇಸತ್ತ ಪತ್ರಕರ್ತರು ಈತನನ್ನು ಗಟಾರಕ್ಕೆ ನೂಕಿ ದಿನಮಾದ್ಯಮ ಪತ್ರಕರ್ತರ ಸಂಘ ಎಂಬ ಪ್ರತ್ಯೇಕ ಸಂಘ ಕಟ್ಟಿಕೊಂಡರು. ಇತ್ತೀಚೆಗೆ ರಾಜ್ಯಮಟ್ಟದ ಟ್ಯಾಬ್ಲಾಯ್ಡ್ ಒಂದಕ್ಕೆ ವರದಿಗಾರನಾಗಿ ವಕ್ಕರಿಸಿಕೊಂಡಿದ್ದ ಗಣೇಶ್ ಗಣಿ ವಿದ್ಯಮಾನಗಳಿಗೆ ಸಂಬಂಧಿಸಿದ ಮೂರ್ನಾಲ್ಕು ಬೈಲೈನ್ ಸ್ಟೋರಿಗಳನ್ನು ಬರೆದು ಅವುಗಳನ್ನು ಫೈಲು ಮಾಡಿಕೊಂಡು ಡೀಲುಗಳನ್ನು ಕುದುರಿಸಿಕೊಳ್ಳುತ್ತಿದ್ದ. ಆ ಪತ್ರಿಕೆಗೆ ಈತನ ಕೈಚಳಕ ಕುರಿತು ದೂರುಗಳು ಹೋದ ನಂತರ ಗಣೇಶನನ್ನು ಕೈಬಿಡಲಾಗಿದೆ.

ಗಣೇಶನ ವಸೂಲಿ ದಂಧೆಯ ಕಿರುಕುಳಗಳಿಗೆ ಗುರಿಯಾದವರೆಷ್ಟೋ? ಬಿಇಓ ಮಂಟೇಲಿಂಗಾಚಾರ್, ಪಿಎಸ್‌ಐ ಸತ್ಯನಾರಾಯಣ ಗುರುಬಸವರಾಜ್, ಸಿಪಿಐ ಸುಬಾನವಾಸ್.... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ತಾನು ವಸೂಲಿ ಮಾಡಿದ್ದಕ್ಕೆ ಸಮರ್ಥನೆಯಾಗಿ 'ಅವ್ರೂ ತಿಂತಾರೆ-ಅದ್ಕೆ ಕೊಡ್ತಾರೆ' ಅಂತಾ ಬೊಂಗು ಬಿಡುತ್ತಾನೆ.

ಇವನು ಕೆಲವು ವರ್ಷಗಳ ಕಾಲ ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಸಾಲಿಸಿದ್ಧಯ್ಯ ಸ್ವಾಮಿ ಎಂಬುವರ ಮನೆಯಲ್ಲಿ ಬಾಡಿಗೆಗಿದ್ದ. ಬಾಡಿಗೆ ಹಣ 30-40 ಸಾವಿರ ಆದರೂ ಈ ಭೂಪ ಕೊಡಲೇ ಇಲ್ಲ. ಕೊನೆಗೆ ತಾನು ಪತ್ರಕರ್ತ ಎಂದು ಹೇಳಿ ಅವರನ್ನೇ ದುಡ್ಡು ಕೊಡುವಂತೆ ಒತ್ತಾಯಿಸಲಾರಂಭಿಸಿದ್ದ. ಸಿದ್ಧಯ್ಯಸ್ವಾಮಿ ದಿನಮಾದ್ಯಮ ಪತ್ರಕರ್ತರ ಸಂಘಕ್ಕೆ ದೂರು ನೀಡಿದ್ದಾರೆ. ಸಂಘದವರು ಗಣೇಶನಿಗೂ, ನಮಗೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಕೊನೆಗೆ ನಾಲ್ಕು ತದುಕಿ ಗಣೇ[illegible] ಹೊರಹಾಕಿದ್ದಾರೆ.

ಖಲಂದರ್‌ಗಳಿಂದ ವಸೂಲಿ

ತೀರಾ ಇತ್ತೀಚೆಗೆ ಕರಡಿ ಕುಣಿಸುವ ಖಲಂ[illegible] ಗಳಿಗೆ ಸ್ವಯಂ ಉದ್ಯೋಗ ರೂಪಿಸಿಕೊಳ್ಳಲು ವೈಲ್ಡ್[illegible] ಎಸ್‌ಓಎಸ್ ಎಂಬ ಎನ್‌ಜಿಓ ಆರ್ಥಿಕ ನೆರ[illegible] ನೀಡುತ್ತಿದೆ. ಖಲಂದರ್‌ಗಳಿಗೆ ಚೆಕ್ ನೀಡುವ [illegible] ಯನ್ನು ಪತ್ರಿಕೆಗಳಲ್ಲಿ ನೋಡಿ ಪ.ಯು. ಗಣ[illegible] ಚುರುಕಾಗಿದ್ದಾನೆ. ಎಸ್.ಒ.ಎಸ್. ಪ್ರತಿನಿಧಿಗಳ[illegible] ಹೋಗಿ ದಾಖಲೆಗಳನ್ನು ಕೇಳುವ ಹೆಸರಿನಲ್ಲಿ ದಿಮಾ[illegible] ಮಾಡಿದ್ದಾನೆ. ಅವರು ಈತನ ಬ್ಲ್ಯಾಕ್‌ಮೇಲ್ ತಂತ್ರ[illegible] ಸೊಪ್ಪು ಹಾಕುವುದಿಲ್ಲವೆಂದು ಗೊತ್ತಾಗುತ್ತಿದ್ದಂತೆ ತಾನೇ ಕರಡಿ ಕುಣಿಸುವ ಖಲಂದರ್‌ಗಳನ್ನು ಸಂಘಟ[illegible] ನಾಟಕ ಮಾಡುತ್ತಿದ್ದಾನೆ. ಜೊತೆಗೆ ರೈತ ಸಂಘದವನೆ[illegible] ಹೇಳಿಕೊಳ್ಳುವ ಗಿರಾಕಿಯೊಬ್ಬನನ್ನು ಜೊತೆಗಿಟ್ಟುಕೊ[illegible] ಆಟ ಕಟ್ಟಿದ್ದಾನೆ. ಜಮೀನು-ಮನೆ ಕೊಡಿಸುವ ಭರ[illegible] ನೀಡಿಯೇ ಪ್ರತಿ ಖಲಂದರ್ ಕುಟುಂಬದಿಂದ [illegible] ನೂರರಿಂದ ಎರಡು ಸಾವಿರದವರೆಗೆ ಲಕ್ಷಾಂತರ ವಸೂಲಿ ಮಾಡಿದ್ದಾನೆ. ಬಹುಶಃ ಇದು ಗಣೇ[illegible] ನಿರ್ಲಜ್ಜತನದ ಕೊನೆಯ ಹಂತವಿರಬಹುದು. ಕೆ[illegible] ವರ್ಷಗಳ ಹಿಂದೆ ಹತ್ತು ರೂಪಾಯಿಗೂ ಅಲೆದಾಡು[illegible] ಪ.ಯ. ಗಣೇಶ ಈಗ ಲಕ್ಷಾಧಿಪತಿ. ಗಣೇಶ್ ಮತ್ತು[illegible] ಪುಂಡ ಮಿತ್ರರ ಕಿರುಕುಳಗಳಿಗೆ ಹೊಸಪೇಟೆಯ [illegible] ಅದ್ಯಾವ ಪರಿ ಬೇಸತ್ತಿದ್ದಾರೆಂದರೆ ಇಷ್ಟರಲ್ಲೇ ದ[illegible] ಶುದ್ಧಿಯ ಕಾರ್ಯಕ್ರಮ ಹಮ್ಮಿಕೊಂಡರೂ ಆಶ್ಚರ್ಯ[illegible] ಈ ಪ.ಯ ಗಣೇಶ ಎಲ್ಲಾದರೂ ತಾನು 'ಲಂಕೇ[illegible] ವರದಿಗಾರನೆಂದು ಹೇಳಿಕೊಂಡು ಬಂದರೆ 'ಲಂಕೇ[illegible] ಗೊಂದು ಮಾಹಿತಿ ಕೊಡಿ. ಪೊಲೀಸರಿಗೊಂದು ದ[illegible] ಕೊಡಿ.

–ವರದಿಗಾ[illegible]


ರಿವೇಂಜ್ ಕಿಲ್ಲಿಂಗ್ಸ್

(8ನೇ ಪುಟದಿಂದ.....)

ವಿರೋಧಿಯಾಗಿದ್ದ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಪಾಳಯದಲ್ಲಿ ಕಾಣಿಸಿಕೊಂಡ.

ಎಮ್ಮೆಲ್ಲೆ ಸೀತಾರಾಮ್ ಕುಮ್ಮಕ್ಕೇ ಹಾಗಿತ್ತು. ಮಲ್ಲೇಶ್ವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲೊಡ್ಡೆ ಚಂದ್ರ ತನ್ನ ದೌಲತ್ತು-ದರ್ಬಾರಿಗೆಂದು ಯಾವತ್ತೋ ಏರಿಯಾ ಬಿಟ್ಟು ಹೋಗಿದ್ದ ಬನಾಯ್ಸ್‌ನನ್ನು ಮತ್ತೆ ಕರೆತಂದಿದ್ದು ಅವರಿಗೆ ಭಾರೀ ಲಾಭವಾಗಿ ಕಂಡಿತ್ತು. ಕ್ರಮೇಣ ಚಂದ್ರನನ್ನೇ ಓವರ್‌ಟೇಕ್ ಮಾಡಿದ ಬನಾಯ್ಸ್ ಎಮ್ಮೆಲ್ಲೆ ಸೀತಾರಾಮ್ ಬಲಗೈ ಬಂಟನಾಗಿಬಿಟ್ಟ. ಇಡೀ ಕೋದಂಡರಾಂಪುರವನ್ನೇ ಕ್ಯಾಪ್ಚರ್ ಮಾಡಿಕೊಂಡ. ಯಾವತ್ತು 2003 ರ ಜುಲೈ ತಿಂಗಳ ಗಂಗಮ್ಮನ ಜಾತ್ರೆಗೆಂದು ಮಾರುವೇಷದಲ್ಲಿ ಬಂದಿದ್ದ ಕೊರಂಗು ಕಣ್ಣಿಗೆ ಬನಾಯ್ಸ್ ಬಿದ್ದನೋ ಕೊರಂಗು ಥಂಡಾ ಹೊಡೆದುಬಿಟ್ಟ.

ತನ್ನ ಹೊರತಾಗಿ ಆತನಿಗೆ ಕೋದಂಡರಾಂಪುರದಲ್ಲಿ ಮತ್ತೊಬ್ಬ ರೌಡಿ ಮೆರೆಯುವುದೇ ದೊಡ್ಡ ಅವಮಾನ. ಮರುದಿನವೇ ಬನಾಯ್ಸ್‌ನ ಪಕ್ಕಾ ಶಿಷ್ಯ ಹೊಟ್ಟೆ ಸೀನನನ್ನು ನಡುರಸ್ತೆಯಲ್ಲಿ ಅಟಾಕಾಯಿಸಿಕೊಂಡು ವಾರ್ನ್ ಮಾಡಿದ. ಅದು ಬನಾಯ್ಸ್ ಕಿವಿ ಮುಟ್ಟಿತು. ಆತನಿಗಾಗಲೇ ಐವತ್ತೆರಡರ ಇಳಿವಯಸ್ಸು. ಹಾಗಿದ್ದೂ ರೌಡಿಜಮ್ಮಿನ ಖಯಾಲಿಯೇನು ಇಳಿದಿರಲಿಲ್ಲ. ಜೊತೆಗೆ ತಾನೇ ಕಾರ್ಪೊರೇಷನ್ ಕಂಟ್ರಾಕ್ಟ್‌ಗಿಳಿದು ಕೊರಂಗು ಅಣ್ಣ ಮುನಿಗೆ ಸಿಗಬೇಕಿದ್ದ ಅನೇಕ ಕಾಮಗಾರಿಗಳನ್ನು ಬನಾಯ್ಸ್ ಕಿತ್ತುಕೊಂಡಿದ್ದ. ಕೇಪಿ ಅಲಿಯಾಸ್ ಕೆ.ಪುರುಷೋತ್ತಮ, ಜಿಮ್ ನರಸಿಂಹ, ಸುಂದ್ರ, ಪ್ರಕಾಶ, ಹೊಟ್ಟೆ ಸೀನರಂಥ ಮೀಟರ್ ಇದ್ದ ಲೋಕಲ್ ರೌಡಿಗಳೆಲ್ಲ ಬನಾಯ್ಸ್ ಬೆನ್ನಿಗೆ ನಿಂತಿದ್ದರು.



ಆಗಲೇ ಬನಾಯ್ಸ್ ತನ್ನ ಕೈಯಾರೆ ಒಂದು ಹತ್ಯೆ ನಡೆಸಿದ.

2004 ರ ಜನವರಿಯಲ್ಲಿ ಬನಾಯ್ಸ್ ಶಿಷ್ಯ ಕೇಪಿಯನ್ನು ಮಲ್ಲೇಶ್ವರಂ ಹದಿನೆಂಟನೇ ಕ್ರಾಸಿನ ಪಿಕ್‌ನಿಕ್ ಬಾರಿನಲ್ಲಿ ಗಾಯಿತ್ರಿನಗರದ ಮೆಂಟಲ್ ಸೀನ ಎಂಬ ಪುಡಿ ರೌಡಿ ಕುಯ್ದುಬಿಟ್ಟ. ಅಷ್ಟೇ; ಬನಾಯ್ಸ್ ತನ್ನ ಶಿಷ್ಯರನ್ನು ಬಿಟ್ಟು ಮೆಂಟಲ್ ಸೀನನನ್ನು ಎತ್ತಾಕಿಕೊಂಡು ಬಂದು ಗ್ಯಾರೇಜ್ ಒಂದರಲ್ಲಿ ಕಟ್ಟಿ ಹಾಕಿ ಮಚ್ಚಿಟ್ಟಿಕೊಂಡಿದ್ದೇ ತಲೆ ಕಡಿದುಬಿಟ್ಟ!

ಮೆಂಟಲ್ ಸೀನನ ಹೆಣವನ್ನು ಮೂಟೆ ಕಟ್ಟಿ ಯಾವ ಪಿಕ್‌ನಿಕ್ ಬಾರಿನಲ್ಲಿ ಆತ ಕೇಪಿಗೆ ಕುಯ್ದಿದ್ದನೋ ಅಲ್ಲೇ ಎಸೆದು ಹೋಗಿದ್ದ ಬನಾಯ್ಸ್ ರಾಜೇಂದ್ರ.




ಮುನಿರತ್ನ

ಎಮ್ಮೆಲ್ಲೇ ಸೀತಾರಾಮ್ ಸ್ವತಃ ಬನಾಯ್ಸ್ ಬೆನ್ನಿಗೆ ನಿಂತಿದ್ದರಿಂದ ಮಿಕ್ಕೆಲ್ಲರೂ ಮೆಂಟಲ್ ಸೀನನ ಕೊಲೆ ಕೇಸಿನಲ್ಲಿ ಅರೆಸ್ಟಾದರೆ, ಬನಾಯ್ಸ್ ಮಾತ್ರ ನಿರೀಕ್ಷಣಾ ಜಾಮೀನು ಪಡೆದು ಆರಾಮಾಗೇ ಓಡಾಡಿಕೊಂಡಿದ್ದ. ಅದಾಗಿ ತಿಂಗಳಿಗೇ ಕಾರ್ಪೊರೇಷನ್‌ನ ಇಂಜಿನಿಯರ್ ರಂಗಯ್ಯನಿಗೆ ಬನಾಯ್ಸ್ ಇರಿದು ಜೈಲು ಸೇರಿದ.

ಅಲ್ಲಿ ಪರಿಚಯವಾದವನೇ ಶಿವಮೊಗ್ಗ ನಾಗ!

ಇಡೀ ಪರಪ್ಪನ ಅಗ್ರಹಾರ ಜೈಲಲ್ಲಿ ಬನಾಯ್ಸ್ ಎಂಥಾ ಧಮಾಕಾ ಮಾಡಿಬಿಟ್ಟನೆಂದರೆ ಅರ್ಧ ಜೈಲಿನ ರೌಡಿಗಳೆಲ್ಲ ಅವನನ್ನು ಕೊಂಡಾಡುತ್ತಿದ್ದರು. ಪ್ರತಿನಿತ್ಯ ಗುಟ್ಟಹಳ್ಳಿಯ ನಂದಿನಿ ಹೋಟ್ಲಿನಿಂದ ವ್ಯಾನಿನ ತುಂಬ ಬಿರಿಯಾನಿ ಪ್ಯಾಕೆಟ್ಟುಗಳು ಜೈಲಿಗೆ ಬರುತ್ತಿದ್ದವು. ಕಂಡಕಂಡ ರೌಡಿಗಳಿಗೆ ಕೈಯೆತ್ತಿ ಕಾಸು ಕೊಡುತ್ತಿದ್ದ ಬನಾಯ್ಸ್ ಪಾಲಿಗೆ ಶಿವಮೊಗ್ಗ ನಾಗ ಸಾಕುಮಗನಂತಾಗಿಬಿಟ್ಟ. ಆ ಹೊತ್ತಿಗೆ ಯಾವುದೋ ರಾಬರಿ ಕೇಸಿನಲ್ಲಿ ಯಶವಂತಪುರ ಪೊಲೀಸರಿಂದ ಬಂಧಿತನಾಗಿ ಜೈಲು ಪಾಲಾಗಿದ್ದ ಶಿವಮೊಗ್ಗ ನಾಗನಿಗೆ ಸರಿಸುಮಾರು ಒಂದು ವರ್ಷದ ಕಾಲ ಜೈಲಿನಲ್ಲೇ ಬಿರಿಯಾನಿ ಊಟ ಸಿಗುತ್ತಿತ್ತು. ಬನಾಯ್ಸ್ ಮಾಡಿದ್ದ ವ್ಯವಸ್ಥೆ ಅದು. ಮತ್ತು ಅದೇ ಕಾರಣಕ್ಕೆ ಮುಂದೆ ಶಿವಮೊಗ್ಗ ನಾಗ ಕೊರಂಗು ತಲೆ ತೆಗೀತೀನಿ ಎಂದು ಶಪಥಗೈದಿದ್ದ.



ಶಾಸಕ ಸೀತಾರಾಂ

ಕಾರ್ಪೊರೇಷನ್ ಜೆ.ಇ. ರಂಗಯ್ಯನ ಕೊಲೆಯತ್ನದ ಕೇಸಿನಿಂದ ಒಂದೇ ತಿಂಗಳಿಗೆ ಜಾಮೀನಿನಲ್ಲಿ ಹೊರಬಿದ್ದ ಬನಾಯ್ಸ್ ಮತ್ತಷ್ಟು ಬಲಾಢ್ಯನಾದ. ಆತ ಮತ್ತು ಕೊರಂಗು ಮಧ್ಯೆ ಪದೇ ಪದೆ ಮಾರಾಮಾರಿಗಳಾದವು. ಅದೊಮ್ಮೆ ಜೈಲಿಂದ ಕೋರ್ಟಿಗೆ ಬಂದಿದ್ದ ಕೊರಂಗು ಪೊಲೀಸರ ಸಮೇತ ಕೋದಂಡರಾಂಪುರಕ್ಕೆ ಬಂದಾಗಲೇ ಬನಾಯ್ಸ್ ಶಿಷ್ಯರು ಆತನ ಮೇಲೆ ಅಟ್ಯಾಕ್ ನಡೆಸಿಬಿಟ್ಟರು. ಆವತ್ತು ಕೊರಂಗು ವೈಯಾಲಿಕಾವಲ್ ಪೊಲೀಸ್ ಠಾಣೆಯೊಳಗೆ ಓಡಿಹೋಗದೇ ಇದ್ದಿದ್ದರೆ ಆವತ್ತೇ ಅವನ ಕತೆ ಮುಗಿಯುತ್ತಿತ್ತು.

ಕೋದಂಡರಾಂಪುರದ ಆಧಿಪತ್ಯಕ್ಕಾಗಿ ಹಾಗೇ ಶುರುವಾದ ಜಿದ್ದಾಜಿದ್ದಿ ಸೆಟಲ್ ಆಗಿದ್ದು 2004 ರ ಏಪ್ರಿಲ್ ಹದಿನಾಲ್ಕರಂದು.

ಆವತ್ತು ಬೆಳಿಗ್ಗೆ ಮಾಮೂಲಿನಂತೆ ವಾಕಿಂಗ್ ಮುಗಿಸಿಕೊಂಡು ಹಿಂದಿನ ದಿನ ಗೋರಿಪಾಳ್ಯದಲ್ಲಿ ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಗ್ಯಾಂಗ್ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ಯಾಮಾರಿಸಿ ಕೊಂದು ಹಾಕಿದ ಸುದ್ದಿಯನ್ನು ತಲೆ ತಗ್ಗಿಸಿ ಓದುತ್ತಾ ಕುಳಿತಿದ್ದ ಬನಾಯ್ಸ್‌ನ ಮೇಲೆ ಕೊರಂಗು ಶಿಷ್ಯರು ದಾಳಿ ನಡೆಸಿದ್ದರು. ಬಹುಶಃ ಬನಾಯ್ಸ್ ಸತ್ತಿದ್ದರೇನೇ ವಾಸಿಯಾಗಿತ್ತೇನೋ. ಯಾಕೆಂದರೆ ಮಲ್ಲಿಗೆ ನರ್ಸಿಂಗ್ ಹೋಮಿನ ವೈದ್ಯರು ಏನೆಲ್ಲಾ ಪ್ರಯತ್ನ ಮಾಡಿಯೂ ಬನಾಯ್ಸ್ ಹಿಂದಿನಂತಾಗಲೇ ಇಲ್ಲ. ಬಿದ್ದ ಲಾಂಗ್ ಏಟು ಆತನ ಮೆದುಳಿನ ನರವನ್ನೇ ತುಂಡು ಮಾಡಿತ್ತು. ಕೈಗಳೆರಡೂ ಸ್ವಾಧೀನ ಕಳೆದುಕೊಂಡವು. ಸರಿಸುಮಾರು ಆರ[illegible] ತಿಂಗಳುಗಳ ಕಾಲ ಬನಾಯ್ಸ್ ಕೋಮಾದಲ್ಲೇ ಇದ್ದ. ಪ್ರಾಣವೇನೋ ಉಳಿಯಿತಾದರೂ ಅ[illegible] ಭಯಂಕರ ದುಬಾರಿ ಯಾಗಿತ್ತು[illegible] ಆಸ್ಪತ್ರೆಯಿಂದ ಹೊರ ಬಂದ ಕ[illegible] ದಿನಕ್ಕೇ ಬಲಪಾರ್ಶ್ವಕ್ಕೆ ಲಕ್ವಾ ಹೊಡೆಯಿತು. ಜ್ಞಾಪಕ ಶಕ್ತಿಯೆ[illegible] ನಶಿಸಿ ಹೋಗಿತ್ತು. ವ್ಹೀಲ್ ಚೇ[illegible] ನಲ್ಲಿ ಹೆಣದಂತೆ ಬಿದ್ದಿರುವ ಬನ[illegible] ಯ್ಸ್‌ನ ವಿಸರ್ಜನೆಗಳನ್ನು ಈಗ[illegible] ಶುಚಿ ಗೊಳಿಸುತ್ತಿರು ವುದು [illegible] ಮನೆಯವರು... ಅದಕ್ಕಿಂತ ದೊಡ್ಡ ಶಿಕ್ಷೆ ಬೇಕೆ?[illegible]

ತನ್ನ ಶಿಷ್ಯರನ್ನು ಬಿಟ್ಟು ಬನಾಯ್ಸ್‌ನನ್ನು ಕತ್ತರಿ[illegible] ಮರುದಿನವೇ ಕೊರಂಗುವಿನ ಕೆಂಗಣ್ಣು ಲೊಡ್ಡೆ ಚಂ[illegible] ಮೇಲೆ ಬಿತ್ತು. ಬನಾಯ್ಸ್‌ನನ್ನು ಕೊದಂಡರಾಂಪು[illegible] ಕರೆತಂದಿದ್ದ ಲೊಡ್ಡೆ ಚಂದ್ರನನ್ನು ಎತ್ತಾಕಿಕೊ[illegible] ಬಂದು ಐದು ಲಕ್ಷ ಕಿತ್ತುಕೊಂಡ. ಬನಾಯ್ಸ್‌ನ ಜ[illegible] ಮನೆ ಮೇಲೆಲ್ಲ ದಾಳಿ ಮಾಡಿ ಅವರಿಂದ ನ[illegible] ಕಾರು ಕಿತ್ತುಕೊಂಡು ತನ್ನ ಗ್ಯಾಂಗ್ ಸಮೇತ ಗೋ[illegible] ಪ್ರವಾಸಕ್ಕೆ ಹೊರಟುಬಿಟ್ಟ. ಕಾಲಕ್ರಮೇಣ ಬನಾ[illegible] ಬೆನ್ನಿಗಿದ್ದ ಭೋಟಾ, ಭೋಟಾ ರೌಡಿಗಳೆಲ್ಲ ಆತ[illegible] ಮರೆತೇಬಿಟ್ಟರು. ಒಬ್ಬ ಶಿವಮೊಗ್ಗ ನಾಗನ ಹೊರತಾ[illegible]

ಆವತ್ತು ಬನಾಯ್ಸ್ ಮೇಲೆ ನಡೆದಂಥದ್ದೇ [illegible] ಈಗ ಕೊರಂಗು ಮೇಲೆ ನಡೆದಿದೆ, ನಿಜ. [illegible] ಕೋದಂಡರಾಂಪುರದ ಕಾಂಟ್ರಾಕ್ಟ್ ಮಾಫಿಯಾ ಕಾ[illegible] ಒಂದು ಭಾಗ ಮಾತ್ರ ಎಂಬುದು ಯಾರಿಗೆ ತ[illegible] ಗೊತ್ತಾದೀತು? ಅಷ್ಟಕ್ಕೂ ಈ ಕಾರ್ಪೊರೇ[illegible] ಕಾಂಟ್ರಾಕ್ಟ್ ಮಾಫಿಯಾ ಕೋದಂಡರಾಂಪುರದ[illegible] ಹೆಡೆಯೆತ್ತಿದೆಯೇಕೆ? ಆವತ್ತು ದೇವರಾಜ ಅ[illegible] ಅಳಿಯ ಎಂ.ಡಿ ನಟರಾಜ್ ಬಲಗೈ ಬಂಟನ[illegible] ಮಾರಪ್ಪ ನಾಯ್ಡು ಎಂಥಾ ಸಾವು ಸತ್ತ? ಇನ್ನೇ[illegible] ಇಡೀ ಕೋದಂಡರಾಂಪುರವೇ ಛಟ್ಟಾಗಿ ಕೊ[illegible] ರಾಮು ಚಂದ್ರನ ಪಡೆಯನ್ನು ಅಟ್ಟಾಡಿಸಿಕೊ[illegible] ಹೊಡೆದೋಡಿಸಿ ತಲ್ಲ; ಅದರಲ್ಲಿ ಬನಾ[illegible] ಪಾತ್ರವೇನಿತ್ತು? ಅವತ್ತಿನ ಈ ರಿವೇಂಜ್ ಕಿಲ್[illegible] ಅರ್ಥಾತ್ ಸೇಡಿನ ಹತ್ಯೆಗಳು ಇವತ್ತಿನ ರಕ್ತಪಾ[illegible] ತಳಹದಿಯಾಗಿವೆಯಾ?

(ಮುಂದಿನ ವಾ[illegible]

ಶಿವಮೊಗ್ಗಕ್ಕೊಂದು ವಿಮಾನ ನಿಲ್ದಾಣ ಬರಲಿದೆ. ಇದು ಜಿಲ್ಲಾ ಬಿಜೆಪಿ ನಾಯಕರ ಭೂಕಬಳಿಕೆಯ ಹೊಸ ಸ್ಕೀಂ.

ಅದು ಉಪಮುಖ್ಯಮಂತ್ರಿ ಯಡಿಯೂರಪ್ಪ, ಶಿವಮೊಗ್ಗ ಶಾಸಕ, ಮಂತ್ರಿ ಕೆ.ಎಸ್. ಈಶ್ವರಪ್ಪ... ಅಧಿಕಾರವಿಲ್ಲದಾಗ ಇದೇ ರೈತರ ಪರ ಹೋರಾಡುವ ನಾಟಕವಾಡಿ ಗೆದ್ದು ಬಂದಿರುವ ಈ ಎರಡು ಪೀಡೆಗಳೇ ಇವತ್ತು ಶಿವಮೊಗ್ಗ ಸುತ್ತಲಿನ ರೈತರಿಗೆ ಕಂಟಕಪ್ರಾಯವಾಗಿವೆ.

ಯಡ್ಡೀಶ್ವರಪ್ಪ ವಿಮಾನ ನಿಲ್ದಾಣ
ರೈತರ ಪಾಲಿಗೆ ಸ್ಮಶಾನ




ಕೃಷಿಗೆ ಅತಿಯೋಗ್ಯವಾಗಿರುವ 1850 ಎಕರೆ ರೈತರ ಭೂಮಿಯನ್ನು ವಿಮಾನ ನಿಲ್ದಾಣ ನಿರ್ಮಾಣಕ್ಕೆ ನೀಡಲಾಗಿದೆ. 40-45 ವರ್ಷಗಳಿಂದ ಇದನ್ನು ಸಾಗುವಳಿ ಮಾಡಿಕೊಂಡು ಬರುತ್ತಿರುವ, ಹೈಕೋರ್ಟ್‌ನಿಂದ ತಮ್ಮ ಪರ ಆದೇಶ ಪಡೆದಿರುವ ಸುಮಾರು ಆರು ಸಾವಿರ ಜನ ಈಗ ಬೀದಿಗೆ ಬೀಳುತ್ತಿದ್ದಾರೆ.

ವಿಮಾನನಿಲ್ದಾಣ ನಿರ್ಮಾಣ ಯೋಜನೆ ತರುವ ಕಿಕ್‌ಬ್ಯಾಕ್ ಆದಾಗಲೇ ಈ ಮಹಾಶಯರ ಬಾಯಲ್ಲಿ ನೀರೂರಿದೆ. ಮೊದಲೇ ಈ ಇಬ್ಬರು ವಿಮಾನ ನಿಲ್ದಾಣಕ್ಕೆಂದು ಗುರುತಿಸಿ ರುವ ಶಿವಮೊಗ್ಗ ಸಮೀಪದ ಸೋಗಾನೆಯ ಸುತ್ತಮುತ್ತಲಿನ ಭೂಮಿ ಖರೀದಿಸಿ ಕುಳಿತಿದ್ದಾರೆ, ಇನ್ನೂ ಖರೀದಿಸುತ್ತಲೇ ನಡೆದಿದ್ದಾರೆ. ಈಗಲೇ ಈ ಎಲ್ಲಾ ಭೂಮಿಯ ರೇಟು ಆಕಾಶದತ್ತ ಚಿಮ್ಮತೊಡಗಿದೆ. ಅಂದರೆ ಮುಂದೆ ಅಧಿಕಾರ ಹೋದರೂ ಚಿಂತೆಯಿಲ್ಲ, ನಿಲ್ದಾಣದ ನೆಪದಲ್ಲಿ ಕೊಪ್ಪರಿಗೆ ಗಟ್ಟಲೇ ಹಣ ಯಡ್ಡಿ, ಈಶ್ವರಪ್ಪ ಮತ್ತು ಹಿಂಬಾಲಕರ ಪಾಲಾಗಲಿದೆ. ಈಗಾಗಲೇ ಜುಜುಬಿ ರೇಟಿಗೆ ಭೂಮಿ ಮಾರಿಕೊಂಡಿರುವ ರೈತರು ಅಷ್ಟೊತ್ತಿಗೆ ಸ್ಮಶಾನದತ್ತ ಮುಖ ಮಾಡಬೇಕಾಗುತ್ತದೆ.

ರೈತರ ಹೊಟ್ಟೆ ಮೇಲೆ ಕಲ್ಲು ಹಾಕಿ, ವಿಮಾನನಿಲ್ದಾಣಕ್ಕೆ ಅಡಿಗಲ್ಲು ಇಡಲು ಹೊರಟಿದ್ದಾರೆ ಯಡ್ಡಿ-ಈಶ್ವರಪ್ಪಗಳು. ಸರ್ವೆ ನಂ. 120ರಲ್ಲಿ ಬರುವ ಗೋಮಾಳ ಬಗರ್‌ಹುಕುಂ ಅಡಿಯಲ್ಲಿ ಸುಮಾರು 4-5 ದಶಕಗಳಿಂದ ರೈತರು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಈ ಮಣ್ಣಿನೊಂದಿಗೆ ಬೆರುತು ಹೋಗಿರುವ ಅವರೆಲ್ಲ ಇಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ತಮಗೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೋರಾಡಿ ಪಡೆದಿದ್ದಾರೆ.

ಶಿವಮೊಗ್ಗ



ಹಕ್ಕುಪತ್ರ ನೀಡಲಾಗದೆಂದು ಕ್ಯಾತೆ ತೆಗೆಯಲಾಗುತ್ತದೆ.

ಅಂದೇ ಈ ಕಿಡಿಗೇಡಿತನದ ವಿರುದ್ಧ ಹೋರಾಟದ ಕಿಡಿ ಎದ್ದಿತು. ಹೋರಾಟ ಹೊಕ್ಕ ಯಡ್ಡಿ-ಈಶ್ವರಪ್ಪ ಬಗರ್‌ಹುಕುಂ ಹೋರಾಟದಲ್ಲಿ ಮಿಂಚಿ ಈಗ ಅಧಿಕಾರ ಸವಿಯತೊಡಗಿದ್ದಾರೆ.

ಓಟುಗಳ ಬೇಟೆಯಾಡಿ ಮಂತ್ರಿಗಿರಿ ಗಿಟ್ಟಿಸಿಕೊಂಡು, ಇಲ್ಲಿನ ಭೂಮಿಯನ್ನೇ ಲಪಟಾಯಿಸಲು ನೋಡುತ್ತಿದ್ದಾರೆ ಈ ಇಬ್ಬರು ನಾಯಕರು. ಸೋಗಾನೆ ಸರ್ವೆ ನಂಬರ್ 120ರ 1850 ಎಕರೆ ಉಳಿಸಿಕೊಳ್ಳಲು ರೈತ ಸಂಘದ ಕೆ.ಟಿ. ಗಂಗಾಧರ ನೇತೃತ್ವದಲ್ಲಿ ಹೋರಾಟ ಶುರುವಾಗಿದೆ. ಈ ಮಧ್ಯೆ ಮತ್ತೊಂದು ಸಂಚು ನಡೆದಿದೆ.

ಬಗರ್‌ಹುಕುಂ ಜಮೀನು ಖಾತೆಯಾಗಿಲ್ಲ, ಹಣ ನೀಡಿ ಬಿಡಿಸಿಕೊಳ್ಳುವ ಪ್ರಮೇಯವೇ ಇಲ್ಲ ಎಂದು ರೈತರನ್ನು ಬರಿಗೈಲಿ ಬೀದಿಗೆ ತಳ್ಳುವ ಹುನ್ನಾರ ನಡೆದಿದೆ. ಆದರೆ ಜೂನ್ 24,2000ರ ಹೈಕೋರ್ಟ್ ಆದೇಶ ಇಲ್ಲಿನ ರೈತರಿಗೆ ಜಮೀನಿನ ಖಾತೆ ಮಾಡಿಸಿಕೊಡಬೇಕೆಂದು ಹೇಳಿದೆ. ಹಾಗೆಯೇ 5 ಕಿಮೀ ವ್ಯಾಪ್ತಿ ಪ್ರದೇಶ ಶಿವಮೊಗ್ಗ ನಗರವ್ಯಾಪ್ತಿಗೆ



ಭೂಮಿ ಉಳಿವಿಗಾಗಿ ಹೋರಾಡುತ್ತಿರುವ ರೈತರು

ಸೋಗಾನೆ ಸರ್ವೆ ನಂ 120 ... 420!

ಶಿವಮೊಗ್ಗ ಹೊರವಲಯದಿಂದ ಆಚೆ ಇರುವ ಸೋಗಾನೆ, ಸಿದ್ದನಗುಡಿ, ವಿನಾಯಕ ನಗರ, ಶಿವಣ್ಣನ ಕ್ಯಾಂಪ್, ಕೋತಿ ಘಟ್ಟ, ಜ್ಯೋತಿನಗರ, ಸೋಮಿನಕೊಪ್ಪ, ಅರೆಕಟ್ಟೆ, ನಿದಿಗೆ ಮುಂತಾದ ಹಳ್ಳಿಗಳ ಆರು ಸಾವಿರ ಜನ ಕಂಗಾಲಾಗಿ ಹೋಗಿದ್ದಾರೆ- ಇತ್ತೀಚಿನ ವಿದ್ಯಮಾನಗಳನ್ನು ನೋಡಿ.

ಸೋಗಾನೆ ಗ್ರಾಮದ ಸರ್ವೆ ನಂಬರ್ 120ರಲ್ಲಿ ಬರುವ 1850 ಎಕರೆ ಭೂಮಿಯನ್ನು ಯೋಜನೆಗೆ ಗುರುತಿಸಲಾಗಿದೆ. ಸುಂದರ ತೋಟಗಳನ್ನು ಬಲಿಕೊಟ್ಟು,

1990ರಲ್ಲಿ ಬಗರ್‌ಹುಕುಂ ಜಮೀನನ್ನು ಸಕ್ರಮಗೊಳಿಸುವಂತೆ ಸರ್ಕಾರವೇ ಸೂಚನೆ ನೀಡಿತು. 1991ರಲ್ಲಿ ಫಾರಂ ನಂಬರ್ 50ನ್ನು ನೀಡಲಾಯ್ತು. ನಿರಂತರ 20 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವವರಿಗೆ ಜಮೀನಿನ ಹಕ್ಕುಪತ್ರ ನೀಡಬೇಕೆಂದು ಫಾರಂ 50 ತಿಳಿಸುತ್ತದೆ.

ಕಿಡಿಗೇಡಿತನದ ವಿರುದ್ಧ ಕಿಡಿ!

ಸಾಗುವಳಿದಾರರನ್ನು ವಂಚಿಸಲು 1992ರಲ್ಲಿ ಸಂಚೊಂದು ರೂಪುಗೊಳ್ಳುತ್ತದೆ. ಶಿವಮೊಗ್ಗದ ಸುತ್ತಮುತ್ತಲಿನ 5 ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು ನಗರ ವ್ಯಾಪ್ತಿಗೆ ಸೇರಿಸುವ ನಿರ್ಣಯ ಕೈಗೊಂಡು,



ವಿಮಾನ ನಿಲ್ದಾಣದ ಪಕ್ಕದಲ್ಲೇ ಈಶ್ವರಪ್ಪ ಖರೀದಿಸಿರುವ 36 ಲಕ್ಷದ ಆಸ್ತಿ

...ಬಂದರೂ. ರೈತರ ಜಮೀನಿಗೆ ಇದು ... ಆಗುವುದಿಲ್ಲವೆಂದೂ ಕೋರ್ಟ್ ಹೇಳಿದೆ 9 ... ಈ ಆದೇಶದ ಪ್ರಕಾರ ಖಾತೆ ಮಾಡಿಕೊಡಬೇಕಾಗಿತ್ತು, ಆದರೆ ಶಿವಮೊಗ್ಗದ ಸಕಲ ಪಾರ್ಟಿಗಳ ಪುಢಾರಿಗಳು, ಅಧಿಕಾರಿಗಳ ದೆಸೆಯಿಂದ ಅದು ಇನ್ನೂ ಸಾಧ್ಯವಾಗಿಲ್ಲ!

ಶಿವಮೊಗ್ಗದ ನಿಧಿಗೆ ಸರ್ವೆ ನಂಬರ್ 156ರಲ್ಲಿರುವ 450 ಎಕರೆ ಜಮೀನನ್ನು ಸಕ್ರಮ ಎಂದು ಸರ್ಕಾರ ಹೇಳಿದಾಕ್ಷಣವೇ ಶ್ರೀಮಂತರ 52 ಎಕರೆ ಜಮೀನು ಮಾತ್ರ ಖಾತೆಯಾಯ್ತು, ಬಡವರು ಹಾಗೇ ಉಳಿದರು. ಈಗ ಸರ್ವೆ ನಂಬರ್ 156ರಲ್ಲಿನ ಉಳಿದ ಜಮೀನನ್ನು ಕೈಗಾರಿಕಾ ಉದ್ದೇಶಕ್ಕೆ ನೀಡಿಬಿಟ್ಟಿದ್ದಾರೆ! ಇದರ ವಿರುದ್ಧ 148 ರಿಟ್‌ಗಳಿದ್ದರೂ, ಯಾವುದಕ್ಕೂ ಕೇರ್ ಮಾಡದೇ ಕೆಐಎಡಿಬಿಗೆ ನೀಡಿದ್ದಾರೆ. ಇದು ಉಪಮುಖ್ಯಮಂತ್ರಿ ಮತ್ತು ಕ್ಷೇತ್ರದ ಶಾಸಕರ ಪರಾಕ್ರಮ!

ಸೋಗಾನೆಯ 1850 ಎಕರೆಯನ್ನು ಸಕ್ರಮ ಗೊಳಿಸಿ ರೈತರಿಗೆ ಪುನರ್ವಸತಿ ಕಲ್ಪಿಸಲು ಇವರಿಗೆ ಮನಸ್ಸೂ ಇಲ್ಲ.

ಈಶ್ವರಪ್ಪ ಮೊನ್ನೆ ...

ವಿಮಾನ ಅಭಿವೃದ್ಧಿ ಪ್ರಾಧಿಕಾರದವರು ಸರ್ವೆ ಮಾಡಿಕೊಂಡು ಹೋಗಾಯ್ತು, ವಿಮಾನ ನಿಲ್ದಾಣಕ್ಕೆ ಒಪ್ಪಿಗೆ ಪಡೆಯಲು ಬಂದ ರೆವಿನ್ಯೂ ಅಧಿಕಾರಿಗಳನ್ನು ರೈತರು ಓಡಿಸಿದ್ದಾರೆ.

ಎಚ್‌ಎಮ್‌ಟಿ ಟ್ರ್ಯಾಕ್ಟರ್ ಶೋರೂಮ್, ಗ್ಯಾಸ್ ಏಜನ್ಸಿ, ಹೀರೋ ಹೊಂಡಾ ಶೋರೂಮ್, ಜೆ.ಎಮ್. ಪೈಪ್‌ಲೈನ್ ಫ್ಯಾಕ್ಟರಿಗಳ ಒಡೆಯ ಈಶ್ವರಪ್ಪ ವಿಮಾನ ನಿಲ್ದಾಣದ ಪ್ರಸ್ತಾಪ ಬಂದಾಕ್ಷಣವೇ ಜನತಾದಳದ ವೈ.ಎಚ್. ನಾಗರಾಜು ರವರ ಮೂರು ಎಕರೆ ಜಮೀನನ್ನು 36 ಲಕ್ಷಕ್ಕೆ ಕೊಂಡುಕೊಂಡು ಬಿಟ್ಟ. ಈಗಲೂ ಸುತ್ತಲಿನ ಜಮೀನನ್ನೆಲ್ಲ ಕಡಿಮೆ ರೇಟಿಗೆ ಖರೀದಿಸುವ ಕಾರ್ಯ ನಡೆದೇ ಇದೆ.

ಚೆಡ್ಡಿಗಳನ್ನು ಆರಿಸಿದ ತಪ್ಪಿಗೆ ಜನ ಬೀದಿಗೆ ಬರುವಂತಾಗಿದೆ. ಶಿವಮೊಗ್ಗದ ಜನ ಒಟ್ಟಾಗಿ ವಿಮಾನ ನಿಲ್ದಾಣದ ನೆಪದಲ್ಲಿ ರೈತರಿಗೆ ಸ್ಮಶಾನ ತೋರಿಸುವುದನ್ನು ತಪ್ಪಿಸಬೇಕಿದೆ.

-ವರದಿಗಾರ

ಮೂರು ಸಾವಿರ ಮಠ ITI ನಲ್ಲಿ ಮೂರೂವರೆ ಸಾವಿರ ವಸೂಲಿ

ಹುಬ್ಬಳ್ಳಿಯ ಮೂರು ಸಾವಿರ ಮಠದ ವಿದ್ಯಾವರ್ಧಕ ಸಂಘ ಕೃಪಾ ಪೋಷಿತ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಯ ವಿದ್ಯಾರ್ಥಿಗಳ ಕತೆ "ಕೊಟ್ಟವನು ಕೋಡಂಗಿ ಈಸಿಕೊಂಡವನು ಈರಭದ್ರ" ಎಂಬ ಗಾದೆಯಂತಾಗಿದೆ. ಈ ಸಂಸ್ಥೆಯ ಪ್ರಿನ್ಸಿಪಾಲ್ ಪಿ.ಬಿ. ಹಿರೇಮಠ ಎಂಬ ನಾಮದಂಡೆ ಗಿರಾಕಿ, "ನೀವು ಪರೀಕ್ಷೆಯಲ್ಲಿ ಉತ್ತಮವಾಗಿ ಬರೆಯಿರಿ, ಬಿಡಿ, ಕೋಲಾರ ಜಿಲ್ಲೆಯ ಮುಳಬಾಗಲು ಐಟಿಐನಿಂದ ಪರೀಕ್ಷಕರಾಗಿ ಬರುವ ಪ್ರಿನ್ಸಿಪಾಲ್ ಜಯರಾಮೇಗೌಡರಿಗೆ ಪರ್‌ಹೆಡ್ 3500 ರೂಪಾಯಿ ಕೊಡದಿದ್ದರೆ ನೀವೆಲ್ಲಾ ಫೇಲ್" ಎಂದು ಅಡ್ವಾನ್ಸ್ ಬೆದರಿಕೆ ಹಾಕಿ ರೇಡಿಯೋ ಮತ್ತು ಟಿವಿ ವಿಭಾಗದ ವಿದ್ಯಾರ್ಥಿಗಳಿಂದ ಕಲೆಕ್ಷನ್ ಮಾಡಿದ್ದಾನೆ.

ಬಹುಶಃ ಈ ವಿಚಾರ ಹೀಗೆ ಹೊರಬರುತ್ತಿರಲಿಲ್ಲ, ಪರೀಕ್ಷೆ ಆಗಿ ಫಲಿತಾಂಶ ಬಂದಾಗ ನೋಡಿದರೆ ಹೀಗೆ ದುಡ್ಡು ಕೊಟ್ಟವರ್‍ಯಾರೂ ಪಾಸಾಗಿರಲಿಲ್ಲ, ಬರೆದರೂ ಸರಿ, ಬರೆಯದಿದ್ದರೂ ಸರಿ, ಕಾಸು ಕೊಟ್ಟಿದ್ದೇವಲ್ಲ ಎಂಬ ಧೈರ್ಯದಿಂದ ಇದ್ದ ವಿದ್ಯಾರ್ಥಿಗಳು ಈಗ ಗಾಬರಿ ಬಿದ್ದಿದ್ದಾರೆ. ಮನೆಯಲ್ಲಿ ನಾನಾ ಕಾರಣ ಹೇಳಿ, ಸಾಲ ಮಾಡಿ ಪ್ರಿನ್ಸಿಪಾಲ್ ಹಿರೇಮಠನ ಜೇಬು ಭರ್ತಿ ಮಾಡಿದ್ದ ಹುಡುಗರು ಕಂಗಾಲಾಗಿದ್ದಾರೆ. ...ವಾಗಿ ವಿದ್ಯಾರ್ಥಿಗಳ ಪೋಷಕರಿಗೂ ಸುದ್ದಿ ಗೊತ್ತಾಗಿ, ಅವರು ಈ ವಿಷಯವನ್ನು ವಿದ್ಯಾರ್ಥಿ ಸಂಘಟನೆಯ ಗಮನಕ್ಕೆ ತಂದಿದ್ದಾರೆ.

ದುಡ್ಡಂತೂ ಹೋಯಿತು ಕನಿಷ್ಠ ಅದರೊಂದಿಗೆ ಹಿರೇಮಠನ ಮರ್ಯಾದೆಯೂ ಹೋಗಲಿ ಎಂದು ನಿರ್ಧರಿಸಿದ ವಿದ್ಯಾರ್ಥಿಗಳು ಅಕ್ಟೋಬರ್ 16ರಂದು ಹಿರೇಮಠನ ಚೇಂಬರ್‌ಗೆ ದಾಳಿ ಇಟ್ಟಿದ್ದಾರೆ. ಮೊದ ಮೊದಲು ನಾನು ಹಣ ಪಡೆದೇ ಇಲ್ಲ ಎಂದು ಬಾಯಿ



ಹಿರೇಮಠನ ಮುಂದೆ ಪ್ರತಿಭಟಿಸುತ್ತಿರುವ ವಿದ್ಯಾರ್ಥಿಗಳು

ಬಡಿದ ಹಿರೇಮಠ ನಂತರ ವಿದ್ಯಾರ್ಥಿಗಳ ಒತ್ತಡಕ್ಕೆ ಬೆದರಿ, ನಾನು ಹಣ ಪಡೆದದ್ದು ನಿಜ. ಆದರೆ ಅಷ್ಟು ಹಣವನ್ನು ಪರೀಕ್ಷಕರಾಗಿ ಬಂದಿದ್ದ ಮುಳಬಾಗಲಿನ ಸರ್ಕಾರಿ ಐಟಿಐ ಪ್ರಿನ್ಸಿಪಾಲ್ ಜಯರಾಮೇಗೌಡರಿಗೆ ನೀಡಿದ್ದೇನೆ. ನನ್ನದು "ಶುದ್ಧಹಸ್ತ" ಎಂದು ಕೈ ಬಾಯಿ ತೋರಿಸಲಾರಂಭಿಸಿದ.

ಹುಬ್ಬಳ್ಳಿ

ಆದರೆ ಈ ವ್ಯವಹಾರ ಜಯರಾಮೇಗೌಡ ಮತ್ತು ಹಿರೇಮಠ ಇಬ್ಬರೂ ಕೂಡಿ ನಡೆಸಿದ ಜಂಟಿ ಕಾರ್ಯಾಚರಣೆ ಎಂಬ ಅರಿವಿದ್ದ ವಿದ್ಯಾರ್ಥಿಗಳು ಟೆಲಿಫೋನ್ ಮೂಲಕ ಜಯರಾಮೇಗೌಡನನ್ನು ಸಂಪರ್ಕಿಸಿದರೆ ಆತ ನನಗೂ ಇದಕ್ಕೂ ಸಂಬಂಧವೇ ಇಲ್ಲ ಎಂದು ಕೈಯಾಡಿಸಿಬಿಟ್ಟ. ವಿದ್ಯಾರ್ಥಿಗಳು ಏನು ಮಾಡುವಂತಿರಲಿಲ್ಲ, ಪ್ರತ್ಯಕ್ಷವಾಗಿ ಹಣ ಪಡೆದವನು ಹಿರೇಮಠ ಆದುದರಿಂದ ಅವನನ್ನೇ ಜಗ್ಗಾಡತೊಡಗಿದರು. ಕೊನೆಗೆ ಈ ವಿಚಾರ ಕೆಲವು ಸ್ಥಳೀಯ ಪತ್ರಿಕೆಗಳಲ್ಲಿ ಸಣ್ಣದಾಗಿ ಪ್ರಕಟವಾಯ್ತು, ಅಲ್ಲಿಯವರೆಗೆ ತೂಕಡಿಸುತ್ತಿದ್ದ ಮೂರುಸಾವಿರ ಮಠದ ಆಡಳಿತ ಮಂಡಳಿ ಚಿಕ್ಕಮಠ ಎಂಬ "ಅಕ್ಕಿ" ಕುಖ್ಯಾತನ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿ ವಿಚಾರಣೆ ನಡೆಸಿತು. ಆ ನಂತರ ಪ್ರಿನ್ಸಿಪಾಲ್ ಹಿರೇಮಠನನ್ನು ಅಮಾನತ್ತಿನಲ್ಲಿಡುವ ಪ್ರಹಸನ ನಡೆಯಿತು. ಆದರೆ ಹುಡುಗರು ಕೊಟ್ಟ ಹಣ? ಅದಕ್ಕೆ ಚಿಕ್ಕಮಠನ ಸಮಿತಿಯ ಬಳಿ ಉತ್ತರವಿಲ್ಲ.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಐಟಿಐ ಹಣೆಬರಹವೇ ಇಷ್ಟು. ಎರಡು ತಿಂಗಳ ಹಿಂದೆ ಧಾರವಾಡದ ಐಟಿಐ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ. ಇದಲ್ಲದೆ ಹುಬ್ಬಳ್ಳಿಯ ಖಾಸಗಿ ಭದ್ರಾ ಐಟಿಐ ಸಂಸ್ಥೆಯಲ್ಲಿ ಸಹ ವಿದ್ಯಾರ್ಥಿಗಳು ಪಾಸಾಗಲು 3 ಸಾವಿರದಿಂದ 5 ಸಾವಿರ ಲಂಚ ನೀಡಬೇಕಾಗುತ್ತದೆ. ಮೂರು ಸಾವಿರ ಮಠದ ಐಟಿಐನಲ್ಲಿ ಡೊನೇಷನ್ ರೂಪದಲ್ಲಿ ಪ್ರವೇಶ ಸಮಯದಲ್ಲೇ 5 ರಿಂದ 10 ಸಾವಿರ ವಸೂಲಿ ಮಾಡಲಾಗುತ್ತದೆ. ಅದರ ಮೇಲೆ ಪ್ರಿನ್ಸಿಪಾಲ್ ಹಿರೇಮಠನ ಸುಲಿಗೆ ಬೇರೆ.

ಖಾಸಗೀ ಐಟಿಐಗಳಲ್ಲಿ ಸರಿಯಾದ ಉಪಕರಣಗಳಿಲ್ಲ, ವಿದ್ಯಾರ್ಥಿಗಳಿಗೆ ಸರಿಯಾದ ಪ್ರಯೋಗಾಲಯಗಳಿಲ್ಲ, ಹೀಗಾಗಿ ವಿದ್ಯಾರ್ಥಿಗಳು ಇರುವ ಒಂದೇ ಸರ್ಕಾರಿ ಐಟಿಐಗೆ ಮುಗಿ ಬೀಳುತ್ತಾರೆ. ಆದರೆ ಸರ್ಕಾರಿ ಐಟಿಐನಲ್ಲಿ ಇರುವುದು 250 ಸೀಟು. ಅದಕ್ಕಾಗಿ ನೆಪ ಮಾತ್ರದ ಕೌನ್ಸಿಲಿಂಗ್ ಇದೆ. ಪ್ರತಿ ವರ್ಷ ಈ 250 ಸೀಟಿಗೆ 20 ರಿಂದ 25 ಸಾವಿರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಾರೆ. ಆದರೆ ಅಲ್ಲಿ ನಡೆಯುವುದೂ ಗೋಲ್‌ಮಾಲ್

ಮೊನ್ನೆ ಲ್ಯಾಮಿಂಗ್‌ಟನ್ ಹೈಸ್ಕೂಲಿನಲ್ಲಿ ಹೆಣ್ಣು ಮಕ್ಕಳಿಗೆ ಸೈಕಲ್ ವಿತರಿಸಿ ಮಾತನಾಡಿದ ಪ್ರೌಢ ಶಿಕ್ಷಣ ಸಚಿವ ಬಸವರಾಜ ಹೊರಟ್ಟಿ ಬಡ ವಿದ್ಯಾರ್ಥಿಗಳ ಶುಲ್ಕವನ್ನು ಸರ್ಕಾರವೇ ಭರಿಸುವ ... ಅದಕ್ಕೂ ಮುನ್ನ ಈ ದಾಖಲೆಗಳ ಐಟಿಐಗಳಿಗೆ ... ... [illegible]

-ವರದಿಗಾರ

ಪೋಲೀಸ್ ಟೆರ್ರರ್



ಮಂಗಳೂರು

ವಿಶೇಷ ವರದಿ


ಮಂಗಳೂರಿನ ಕೋಮು ಹಿಂಸೆಯನ್ನು ಪೊಲೀಸರು ನಿಭಾಯಿಸಿದ ರೀತಿಯನ್ನು ಸಮರ್ಥಿಸುತ್ತ ಮುಖ್ಯಮಂತ್ರಿ "ಮಂಗಳೂರಿನಲ್ಲಿ ಗಲಭೆ ನಡೆಯುತ್ತದೆ ಎಂದು ಪೊಲೀಸರಿಗೆ ಕನಸು ಬೀಳುತ್ತದಾ?" ಎಂದು ಇತ್ತೀಚೆಗೆ ಕೇಳಿದ್ದಾರೆ. ಮಂಗಳೂರು ಮಾತ್ರವಲ್ಲ, ಕರಾವಳಿಯ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೋಮು ಹಿಂಸೆ ಯಾವ ಕ್ಷಣದಲ್ಲಾದರೂ ಸ್ಫೋಟಗೊಳ್ಳಬಹುದು ಎಂದು ಊಹಿಸುವುದಕ್ಕೆ ಪೊಲೀಸರಿಗೆ ಕನಸು ಬೀಳಬೇಕು ಎಂದೇನೂ ಇಲ್ಲ. ಡ್ಯೂಟಿಯಲ್ಲಿರುವಾಗ ತಮ್ಮ ಕಣ್ಣು ಕಿವಿಗಳನ್ನು ತೆರೆದಿಟ್ಟುಕೊಂಡಿದ್ದಿದ್ದರೆ ಮಂಗಳೂರು ಪೊಲೀಸರಿಗೆ ಖಂಡಿತ ಮೊನ್ನೆ ನಡೆದ ಗಲಭೆಯ ಮುನ್ಸೂಚನೆಗಳು ಸಿಗುತ್ತಿದ್ದವು. ಪರಿಸ್ಥಿತಿಯನ್ನು ಎದುರಿಸಲು ಮಂಗಳೂರು ಪೊಲೀಸರು ಸನ್ನದ್ಧರಾಗಿದ್ದರೆ? ಇಲ್ಲವಾದರೆ ಪೊಲೀಸ್ ಇಲಾಖೆ ಇರುವುದಾದರೂ ಯಾಕೆ ಎಂಬ ಪ್ರಶ್ನೆ ಇದ್ದೇ ಇದೆ. ಆದರೆ ಸಮಸ್ಯೆ ಅದೊಂದೇ ಅಲ್ಲ. ಮಂಗಳೂರು ಗಲಭೆಯ ಅನೇಕ ಸಂದರ್ಭಗಳಲ್ಲಿ-ಅದರಲ್ಲೂ ವಿಶೇಷವಾಗಿ ಮುಸ್ಲಿಮರ ವಿರುದ್ಧ ಹಿಂಸೆ ಲೂಟಿಗಳು ನಡೆದಾಗ-ಪೊಲೀಸರು ಮೂಕಪ್ರೇಕ್ಷಕರಾಗಿದ್ದರು. ಉದಾಹರಣೆಗೆ ಅಕ್ಟೋಬರ್ 3ರಂದು ಶಾರದಾ ವಿಸರ್ಜನೆಯ ಮೆರವಣಿಗೆ ಸಂದರ್ಭದಲ್ಲಿ ಬಜಪೆ ಪೇಟೆಯಲ್ಲಿ ರಾತ್ರಿ ನಡೆದ ಮುಸ್ಲಿಂ ಅಂಗಡಿಗಳ ಲೂಟಿ ನೂರಾರು ಪೊಲೀಸರು ಮತ್ತು ಅಧಿಕಾರಿಗಳ ಸಮಕ್ಷಮದಲ್ಲೇ ನಡೆಯಿತು. ಬಂಟವಾಳದ ಬಿ.ಸಿ.ರೋಡಿನಲ್ಲಿ ಹೆದ್ದಾರಿಯ ಪಕ್ಕದಲ್ಲೇ ಇರುವ ವಾಸುದೇವ ಪ್ಲಾಜಾದ 5 ಅಂಗಡಿಗಳು ಮತ್ತು ಅದಕ್ಕೆ ಸಮೀಪದ 6 ಮಳಿಗೆಗಳನ್ನು ಪೊಲೀಸರ ಕಣ್ಣೆದುರೇ ಕೊಳ್ಳೆ ಹೊಡೆಯಲಾಯಿತು. ಮಂಗಳೂರಿನ ಬಂದರ್, ಉಳ್ಳಾಲ ಮತ್ತು ಬಂಟವಾಳ ಸಮೀಪದ ಗೂಡಿನ ಬಳಿಯಲ್ಲಿ ಪೊಲೀಸರು ನೂರಾರು ಮುಸ್ಲಿಮರ ಮನೆಗಳಿಗೆ ಹಿಂಬಾಗಿಲಿನಿಂದ ನುಗ್ಗಿ, ಮನೆಯ ಒಳಗಿದ್ದುದ್ದನ್ನು ಧ್ವಂಸ ಮಾಡಿ, ಕೈಗೆ ಸಿಕ್ಕ ಗಂಡಸರನ್ನು ದಸ್ತಗಿರಿ ಮಾಡಿ ಬಳ್ಳಾರಿ ಜೈಲಿಗೆ ಸಾಗಿಸಿದರು. ಯಾಕೆ ತಮ್ಮ ಮನೆಗಳ ಮೇಲೆ ಏಕಾಏಕಿ ಪೊಲೀಸ್ ದಾಳಿ ನಡೆಯಿತು? ತಮ್ಮ ಕುಟುಂಬದ ಗಂಡಸರು ಮಾಡಿದ ಅಪರಾಧವೇನು ಎಂಬುದು ಆ ಮನೆಗಳವರಿಗೆ ಇವತ್ತಿಗೂ ಗೊತ್ತಿಲ್ಲ.

ನಾವು ಈ ಸ್ಥಳಗಳಿಗೆ ಹೋಗಿ, ಅಲ್ಲಿ ನಡೆದ ದಾಂಧಲೆಯನ್ನು ಕಣ್ಣಾರೆ ನೋಡುವವರೆಗೆ, ಮಂಗಳೂರು ಆಸುಪಾಸಿನಲ್ಲಿ ಹೀಗೆಲ್ಲ ನಡೆದಿದೆ ಎಂಬ ಕಲ್ಪನೆಯೂ ನಮಗೆ ಇರಲಿಲ್ಲ. ಮಂಗಳೂರಿನಲ್ಲಿ ಮತ್ತು ಕರಾವಳಿಯ ಎಲ್ಲೆಡೆ ಮುಸ್ಲಿಮರ ಮೇಲೆ ನಡೆಯುವ ಹಿಂಸೆಯನ್ನು ಕರಾವಳಿ ಪತ್ರಿಕೆ ಮತ್ತು ಇತರ ಮಾಧ್ಯಮಗಳು ಲಾಗಾಯ್ತಿನಿಂದಲೂ ಮುಚ್ಚಿ ಹಾಕುತ್ತಲೇ ಬಂದಿವೆ. ಆದರೆ ಮೊನ್ನೆ ನಡೆದ ಗಲಭೆಯಲ್ಲಿ ಪೊಲೀಸರ ಕಾನೂನು ಬಾಹಿರ ವರ್ತನೆಯನ್ನು ಸಹ ಮಾಧ್ಯಮಗಳು ಸಂಪೂರ್ಣವಾಗಿ ಮರೆ ಮಾಚಿದೆ.

ಕರಾವಳಿಯ ಬಿಜೆಪಿಯೇತರ ರಾಜಕೀಯ ಪಕ್ಷಗಳು ಕೂಡ ಪೊಲೀಸರ ದುಂಡಾವರ್ತಿಯ ಬಗ್ಗೆ ಮೌನ ತಳೆದಿವೆ. ಕರಾವಳಿಯ ಕೋಮು ಹಿಂಸೆಯ ಚರಿತ್ರೆಯಲ್ಲಿ ಇದು ಹೊಸ ಅಧ್ಯಾಯ. ಹಿಂದೂತ್ವವಾದಿಗಳ ಜೊತೆ ಆಡಳಿತ, ಪೊಲೀಸರು ಮತ್ತು ಮಾಧ್ಯಮಗಳು ಇಷ್ಟು ಒಮ್ಮನಸ್ಸಿನಿಂದ ಹಿಂದೆಂದೂ ಕೈ ಜೋಡಿಸಿರಲಿಲ್ಲ. ಇಲ್ಲಿನ ವ್ಯವಸ್ಥೆ ಮುಸ್ಲಿಮರು ಅಪರಾಧಿಗಳು ಎಂದು ಈಗ ತೀರ್ಮಾನಿಸಿಬಿಟ್ಟಿದೆ. ಹಾಗೆಂದು ಬಾಯಿಬಿಟ್ಟು ಹೇಳ ಲಾಗದಿದ್ದಕ್ಕೆ, SIMI, KFD ಗಳನ್ನು ಈ ಗಲಭೆಗೆ ಹೊಣೆಗಾರ ಎಂದು ಪ್ರಚಾರ ಮಾಡಲಾಗುತ್ತಿದೆ. ಕರಾವಳಿಯ ಮುಸ್ಲಿಮರೆಲ್ಲರೂ ಸಜ್ಜನರು ಎಂಬುದು ಯಾರ ವಾದವೂ ಅಲ್ಲ. ಮಂಗಳೂರಿನಲ್ಲಿ ಮೊನ್ನೆ ನಡೆದ ಹಿಂಸಾಚಾರಕ್ಕೆ ಮುಸ್ಲಿಮರ ಕೊಡುಗೆಯೂ ಇದೆ. ಅದನ್ನೂ ನಾವು ಖಂಡಿಸಬೇಕು. ಆದರೆ ತಕ್ಕಡಿಯ ಒಂದು ತಟ್ಟೆಯಲ್ಲಿ ಬಜರಂಗದಳ, ಶ್ರೀರಾಮಸೇನೆ ಮತ್ತು ಇನ್ನೊಂದು ತಟ್ಟೆಯಲ್ಲಿ SIMI, KFDಗಳನ್ನು ಇಟ್ಟು ಈಗ ನಮ್ಮ ಕೆಲವು "ಪ್ರಗತಿಶೀಲರು" ಕೊಡುತ್ತಿರುವ ತೀರ್ಪು ಮಾತ್ರ ಮೂರ್ಖತನದ್ದು. ನಾವು ಮಂಗಳೂರಿನ ಗಲಭೆ ಪೀಡಿತ ಪ್ರದೇಶಗಳಿಗೆ ಹೋಗಿ ನೋಡಿದ ಪ್ರಕಾರ ಬಹುತೇಕ ಸಂದರ್ಭಗಳಲ್ಲಿ ಮುಸ್ಲಿಮರು ನಡೆಸಿದ ಹಿಂಸಾಚಾರ, ತಮ್ಮ ಮೇಲೆ ನಡೆದ ಹಿಂಸೆಗೆ ಒಂದು ಪ್ರತಿಕ್ರಿಯೆಯಾಗಿತ್ತು. ಹಿಂಸೆಗೆ ಪ್ರತಿಹಿಂಸೆ ಸಲ್ಲದು, ಸರಿ. ಆದರೆ ಮುಸ್ಲಿಮರು ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸುವಷ್ಟು ಸಜ್ಜನರೇ ಆಗಿರಬೇಕು ಎಂದು ನಿರೀಕ್ಷಿಸಲು ನಮಗಾದರೂ ಏನು ಹಕ್ಕಿದೆ?

ಬಜಪೆಯಲ್ಲಿ ಏನು ನಡೆಯಿತು?

ಅಕ್ಟೋಬರ್ ತಿಂಗಳ ಮೊದಲವಾರ ಮಂಗಳೂರಿನಲ್ಲಿ ಸ್ಫೋಟಗೊಂಡ ಹಿಂಸಾಚಾರ, ವಾಸ್ತವವಾಗಿ ಪ್ರಾರಂಭಗೊಂಡದ್ದು ಮಂಗಳೂರಿನ ಹೊರವಲಯದಲ್ಲಿರುವ ಬಜಪೆಯಲ್ಲಿ. ಅಕ್ಟೋಬರ್ 3ರಂದು ಬಜಪೆಯ ಮುಖ್ಯರಸ್ತೆಯಲ್ಲಿ ಶಾರದಾಮೂರ್ತಿಯ ವಿಸರ್ಜನೆಯ ಮೆರವಣಿಗೆ ನಡೆಯುವುದಿತ್ತು. ಮೆರವಣಿಗೆ ಹಾದು ಹೋಗುವ ರಸ್ತೆಯಲ್ಲೇ, ಬಜಪೆಯ ಮಸೀದಿಯೂ ಇದೆ. ಮೆರವಣಿಗೆಯಲ್ಲಿದ್ದ ಒಂದು ಟ್ಯಾಬ್ಲೋ ಬಗ್ಗೆ ಮಸೀದಿಯ ಎದುರು ಕೆಲವು ಮುಸ್ಲಿಮರು ತಮ್ಮ ಆಕ್ಷೇಪವನ್ನು ಪೊಲೀಸರಿಗೆ ತಿಳಿಸಿದರು; ಹಾಗೆಂದು ಒಂದು ಲಿಖಿತ ದೂರನ್ನೂ ಕೊಟ್ಟರು. ಮೆರವಣಿಗೆಯ ಜೊತೆಗೆ ಹೆಜ್ಜೆ ಹಾಕುತ್ತಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು ಆ ಟ್ಯಾಬ್ಲೋವನ್ನು ತೆಗೆಯಲು ಮೆರವಣಿಗೆಯಲ್ಲಿದ್ದವರಿಗೆ ವಿನಂತಿ ಮಾಡಿಕೊಂಡರು; ಸ್ಥಳದಲ್ಲಿದ್ದ ಶಾಸಕ ಕೃಷ್ಣ ಪಾಲೆಮಾರ್ (ಬಜೆಪಿ) ಕೂಡ ಆ ಟ್ಯಾಬ್ಲೋ ತೆಗೆಯಲು ಕೇಳಿಕೊಂಡರು. ಮೆರವಣಿಗೆಯ ಉಸ್ತುವಾರಿ ವಹಿಸಿಕೊಂಡವರು ಇವರ ಮಾತನ್ನು ಕೇಳಲಿಲ್ಲ. ಕಡೆಯ ಪಕ್ಷ ಮಸೀದಿಯ ಎದುರಾದರೂ ಆ ಟ್ಯಾಬ್ಲೋ ಬೇಡ ಎಂಬ ಮನವಿಗೂ ಅವರು ಸಮ್ಮತಿಸಲಿಲ್ಲ. ಹೀಗೆ ಮೆರವಣಿಗೆಯಲ್ಲಿದ್ದವರು ತಮ್ಮ ಹಠ ಬಿಡದಿದ್ದಾಗ ಪೊಲೀಸರು ಮೆರವಣಿಗೆಯನ್ನು ತಡೆದರು. ಆಗ ಮೆರವಣಿಗೆ ಏರ್ಪಡಿಸಿದವರು ಶಾರದಾ ಮೂರ್ತಿಯನ್ನು ನಡುರಸ್ತೆಯಲ್ಲಿಯೇ ಇಟ್ಟರು. ಪೊಲೀಸರು ಜನರನ್ನು ಚೆದುರಿಸಿದರು.


ಧ್ವಂಸವಾಗಿರುವ ಉಳ್ಳಾಲ ಝೀನತ್ ಫುಟ್‌ವೇರ್ ಮತ್ತು ಟೆಕ್ಸ್‌ಟೈಲ್ಸ್

ವಿವಾದಕ್ಕೆ ಎಡೆ ಮಾಡಿಕೊಟ್ಟ ಆ ಟ್ಯಾಬ್ಲೋದಲ್ಲಿ ಏನಿತ್ತು? ಅದು ಮುಲ್ಕಿಯ ಸಮೀಪದ ಬಪ್ಪನಾಡಿನ ದುರ್ಗಾಪರಮೇಶ್ವರಿ ದೇವಸ್ಥಾನದ ಅಮ್ಮ ಮತ್ತು ಭಕ್ತಿಭಾವದಿಂದ ನಿಂತಿರುವ ಬಪ್ಪ ಬ್ಯಾರಿಯ ಟ್ಯಾಬ್ಲೋ; ಹಾಗಾಗಿ ಅದರಲ್ಲಿ ಮುಸ್ಲಿಮರಿಗೆ ಅವಮಾನವಾಗುವಂತದ್ದು ಏನೂ ಇಲ್ಲವೆಂಬುದು ಮರವಣಿಗೆಯ ನಾಯಕತ್ವ ವಹಿಸಿದವರ ವಾದವಾಗಿತ್ತು. ಒಂದಾನೊಂದು ಕಾಲದಲ್ಲಿ ಬಪ್ಪ ಬ್ಯಾರಿ ಎಂಬ ಮುಸ್ಲಿಮ್ ವ್ಯಾಪಾರಿಯ ಹಡಗು ಸಮುದ್ರಯಾನದಲ್ಲಿ ಇರಲಾಗಿ, ಅದರಲ್ಲಿ ರಕ್ತದ ಬುಗ್ಗೆ ಚಿಮ್ಮಲಾರಂಭಿಸಿತು ಎಂದೂ ಸ್ವತಃ ಅಮ್ಮನೇ ಬ್ಯಾರಿಗೆ ಕಾಣಿಸಿಕೊಂಡು, ಅದನ್ನು ನಿಲ್ಲಿಸಿದಳೆಂದೂ, ನಂತರ ಬಪ್ಪ ಬ್ಯಾರಿ ಈ ದೇವತೆಗೆ ಭಕ್ತಿಭಾವದಿಂದ ನಡೆದುಕೊಂಡನೆಂದೂ, ದೇವಸ್ಥಾನವಿರುವ ಸ್ಥಳಕ್ಕೆ ಬಪ್ಪನಾಡು ಎಂಬ ಹೆಸರು ಬಂದಿತು ಎಂದೂ ಕತೆ. ಈ ಕತೆ ಆಧರಿಸಿ ಒಂದು ಯಕ್ಷಗಾನ ಪ್ರಸಂಗವೂ ಇದೆ. ಇದರ ಬಯಲಾಟದ ಪ್ರದರ್ಶನಗಳಲ್ಲಿ ಬಪ್ಪಬ್ಯಾರಿಯನ್ನು ಒಂದು ವಿದೂಷಕ ಪಾತ್ರದಂತೆ ಚಿತ್ರಿಸಿ; ಮುಸ್ಲಿಮರನ್ನು ಅಂದರೆ ಈಗ ನಮ್ಮ ನಡುವೆ ಬದುಕುತ್ತಿರುವ ಮುಸ್ಲಿಮರನ್ನು ಮಸ್ಕ್ವೀ ದೂಷಿಸುವುದೂ ಸಾಕಷ್ಟು ನಡೆದಿದೆ. ಬಜಪೆಯ ಮೆರವಣಿಗೆ ಟ್ಯಾಬ್ಲೋ ಕೂಡ ಇಂತಹದ್ದೇ ಒಂದು ಲೇವಡಿಯ ರೂಪಕವಾಗಿತ್ತು, ಟ್ಯಾಬ್ಲೋದಲ್ಲಿದ್ದ ಗಂಡಸು ತಲೆಗೆ ಟೊಪ್ಪಿಗೆ ಇ
ಗಡ್ಡ ಬಿಟ್ಟು, ದೇವಿಯ ಎದುರು ದೈನ್ಯಭಾವ
ಕೈಗಳನ್ನು ಎತ್ತಿ ಹಿಡಿದಿದ್ದ. ಆತನ ವೇಷಭೂಷಣ
ಮೌಲವಿಯದ್ದೇ ಹೊರತು ಬಪ್ಪಬ್ಯಾರಿಯದ್ದಲ್ಲ ಎಂಬ
ಮುಸ್ಲಿಮರ ವಾದವಾಗಿತ್ತು. ಆದರೆ ಅವರೇನೂ ಜ
ಇಳಿದಿರಲಿಲ್ಲ. ಅವರು ತಮ್ಮ ಆಕ್ಷೇಪವನ್ನು ಲಿಖಿತ
ಪೊಲೀಸರಿಗೆ ತಿಳಿಸಿದ್ದರು.

ಆದರೆ ಮರುದಿನ ಈ ಘಟನೆಯನ್ನು ಪ
ಮಾಡಿದ ಕರಾವಳಿಯ ಎಲ್ಲ ಪತ್ರಿಕೆಗಳೂ ಬಜಪ
ಮುಸ್ಲಿಮರು ಕೋಮು ಸೌಹಾರ್ದದ ಸಂಕೇತವೊ
ಆಕ್ಷೇಪ ಮಾಡಿ ಮೆರವಣಿಗೆ ನಿಲ್ಲಿಸಿದರು ಎ
ವರದಿ ಮಾಡಿದವು. ಮೆರವಣಿಗೆ ಏರ್ಪಡಿಸಿದ
ನಿಜಕ್ಕೂ ಕೋಮು ಸೌಹಾರ್ದದಲ್ಲಿ ನಂಬಿಕೆ ಇದ್
ಅವರು ತಮ್ಮ ಊರಿನ ಮುಸ್ಲಿಮರ ಮನವಿಗೆ
ಕೊಡಬೇಕಿತ್ತು. ಬಪ್ಪಬ್ಯಾರಿ ಕೋಮು ಸೌಹಾ
ಸಂಕೇತ ಎಂದು ಸಾರುವ ಜನಗಳೇ ಬಾಬಾಬು
ಗಿರಿಯ ಸಾಂಕೇತಿಕತೆಯನ್ನು ಅಲ್ಲಗಳೆದು ಅಲ್ಲಿ ಯ
ತಮ್ಮ ಯಜಮಾನಿಕೆ ಸ್ಥಾಪಿಸಲು ಹೊರಟಿ
"ಹಿಂದೂಗಳ ಭಾವನೆಗಳಿಗೆ ಘಾಸಿಯಾಗಿದೆ; ಹಿಂದ
ಮನಸ್ಸಿಗೆ ನೋವಾಗಿದೆ" ಎಂಬುದು ಹಿಂದೂತ್ವ
ಗಳು ಸದಾ ಪಠಿಸುವ ಸೊಲ್ಲು. ಸುಸಂಸ್ಕೃತನಾದ ಮ
ತನ್ನ ಮನಸ್ಸಿಗಾದ ನೋವಿಗಿಂತ, ಇನ್ನೊಬ್ಬರ ನೋ
ಬಗ್ಗೆ ಜಾಸ್ತಿ ಕಾಳಜಿ ವಹಿಸುತ್ತಾನೆ. ಅಷ್ಟಲ್ಲವಾದ
ಕಡೆಯ ಪಕ್ಷ ಇತರರಿಗೂ ತನ್ನ ಹಾಗೆಯೇ ನೋಯ
ಮನಸ್ಸು ಇದೆ ಎಂಬುದನ್ನಾದರೂ ನಾವು ಗುರು
ಬೇಕು. ಹಿಂದೂತ್ವದ ಒರಟರಿಗೆ ಈ ಸೂಕ್ಷ್ಮ
ತಿಳಿಯುವುದಿಲ್ಲ. ಆದರೆ ನಮ್ಮ ಪತ್ರಿಕೆಗಳಿಗೆ ಏನಾ
ಬಜಪೆಯ ಮೆರವಣಿಗೆ ಮತ್ತು ಅದನ್ನು ಕರಾವ
ಪತ್ರಿಕೆಗಳು ವರದಿ ಮಾಡಿದ ಪರಿ, ಹಿಂದೂ
ಸಾಂಸ್ಕೃತಿಕ ದುರಹಂಕಾರ ಮತ್ತು ಯಜಮಾನಿಕೆಗ
ಪ್ರತಿನಿಧಿಸುತ್ತದೆ. ಸಂಕೇತಗಳಿಗೆ ತಾವು ಕೊಡ
ಅರ್ಥಗಳನ್ನೇ ಎಲ್ಲರೂ ಒಪ್ಪಿಕೊಳ್ಳಬೇಕು; ಅಷ್ಟು ಮಾ
ವಲ್ಲ ತಾವು ಕೊಡುವ ಹಿಂಸೆಯನ್ನೂ ಸಹಿಸಿಕೊಳ್ಳಬ
ಮತ್ತು ತಮ್ಮಷ್ಟು ಸಜ್ಜನರು ಬೇರೆ ಯಾರೂ
ಎಂದೂ ಒಪ್ಪಿಕೊಳ್ಳಬೇಕು ಎಂಬುದೇ ಹಿಂದೂತ್ವವಾ
ದುರಾಗ್ರಹವಾಗಿದೆ.

ಬಜಪೆಯಲ್ಲಿ ಅಕ್ಟೋಬರ್ 3ರ ರಾತ್ರಿ ನ
ಘಟನೆಗಳು ಈ 'ಸಜ್ಜನಿಕೆ'ಯ ನಿಜಸ್ವರೂಪವನ್ನು ಬಯ
ಮಾಡುತ್ತವೆ. ಆ ರಾತ್ರಿ 10 ಗಂಟೆಯ ಸುಮಾ
ಹೆಚ್ಚು ಕಡಿಮೆ ಒಂದು ಸಾವಿರದಷ್ಟಿದ್ದ ಜನರ ಗು
ಬಜಪೆಯ ಮುಖ್ಯರಸ್ತೆಯಲ್ಲಿ ಮಸೀದಿಗೆ ಸಮೀ
7 ಮುಸ್ಲಿಂಮರ ಅಂಗಡಿಗಳನ್ನೂ, 2 ಹಿಂದೂ
ಅಂಗಡಿಗಳನ್ನೂ ಲೂಟಿ ಮಾಡಿತು. ಈ ಲೂಟಿಯ
ಅತಿ ಹೆಚ್ಚು ನಷ್ಟಕ್ಕೆ ಒಳಗಾದವರು 'ಟಾಪ್ ಕಲೆಕ್ಷ
ರೆಡಿಮೇಡ್ ಬಟ್ಟೆ ಅಂಗಡಿಯ ಮಾಲೀಕ ಮೊಹ
ಹನೀಫ್. ಅವರು ಬ್ಯಾಂಕ್ ಸಾಲ ತೆಗೆದು ಪ್ರಾರಂಭ
ಹೊಚ್ಚ ಹೊಸ ಅಂಗಡಿಯ ಶಟರ್ ಒಡೆದು ತೆ
ಒಳಗಿದ್ದ ಗಾಜಿನ ಫಲಕಗಳನ್ನು, ಶೋಕೇಸುಗ
ಪುಡಿ ಮಾಡಿ ಸುಮಾರು 15 ಲಕ್ಷ ರೂಪಾಯಿ
ಸೊತ್ತನ್ನು ದೋಚಿದ್ದರು. ಅದೇ ರಸ್ತೆಯಲ್ಲಿ ಹತ್ತಿರದ
ಇದ್ದ ಇಸ್ಮಾಯಿಲ್ ಎಂಬವರ ಹಣ್ಣಿನ ಅಂಗಡಿಯ
ಹಣ್ಣುಗಳನ್ನೆಲ್ಲ ಫಲಾಹಾರ ಮಾಡಿ ನಂತರ ಅಂಗ

> ಉಳ್ಳಾಲ ಕೋಡಿ ಮೇಲಿನ ಬೀದಿಯ ಹುಸೇನ್ ಮಂಝಿಲ್‌ನ ಹಿಂಬಾಗಿಲು ಅಗಳಿ ಹಾಕಿತ್ತು, ಪೊಲೀಸರು ಅದನ್ನು ಬೂಟುಗಾಲಿನಲ್ಲಿ ಒದ್ದು "ಬೋಳಿ ಮಕ್ಕಳೆ ಬಾಗಿಲು ತೆರೆಯಿರಿ" ಎಂದು ಅಬ್ಬರಿಸಿದರು. ಮನೆಯ ಯುವಕ, "ನಾವು ಏನು ಮಾಡಿದ್ದೇವೆ ಸಾರ್" ಎಂದು ಕೇಳಿದಾಗ, "ನಿನ್ನ ಅಕ್ಕನನ್ನು ಕಳುಹಿಸು; ಮಾಡಿ ತೋರಿಸುತ್ತೇವೆ" ಎಂದು ಹೇಳಿದರಂತೆ. ಒಳ ನುಗ್ಗಿದ ಪೊಲೀಸರು ಮನೆಯ ಬೆಡ್‌ರೂಂನ ಬಾಗಿಲು ಒಡೆದು, ಟೀವಿಯನ್ನು ಪುಡಿ ಮಾಡಿದರು. ಗೋದ್ರೆಜ್ ಕಪಾಟಿನ ಬಾಗಿಲು ಒಡೆದು ಒಳಗಿದ್ದ 25 ಸವರನ್ ಚಿನ್ನವನ್ನು ದೋಚಿದರು; ನಂತರ ಪೊಲೀಸರು ಮನೆಯಲ್ಲಿದ್ದ ಏಕಮಾತ್ರ ಗಂಡಸು ಅಬ್ದುಲ್ ಸಮದ್‌ರನ್ನು ಎಳೆದು ಕೊಂಡು ಹೋದರು.
>
> ಇದು ಕರಾವಳಿ ಪ್ರದೇಶದಲ್ಲಿ ಪೊಲೀಸರು ನಡೆದುಕೊಂಡ ವೈಖರಿ.
>
> ಇದು ಪೊಲೀಸ್ ಟೆರ್ರರಿಸಂ ಅಲ್ಲದೆ ಮತ್ತಿನ್ನೇನು?

ಬೆಂಕಿಕೊಡಲಾಯಿತು. ಅನ್ವಾರ್ ಅವರ ವಾಚು ಮಾರಾಟದ ಗೂಡಂಗಡಿ ಮತ್ತು ಸಿದ್ದೀಕ್ ಅವರ ಮೊಬೈಲ್ ಅಂಗಡಿಗಳೂ ಲೂಟಿಯಾದವು. ದಾಳಿಕಾರರು ಎರಡು ಪತರಾಸಿ ಅಂಗಡಿಗಳನ್ನೂ ದೋಚಿದರು. ಈ ಎಲ್ಲ ಘಟನೆಗಳನ್ನೂ ಬಜಪೆಯ "ಕೋಮು ಸೌಹಾರ್ದವನ್ನು ಎತ್ತಿ ಹಿಡಿಯುವವರು" ನಡೆಸುತ್ತಿದ್ದಾಗ, ಅದನ್ನು ಸ್ಥಳದಲ್ಲಿದ್ದ ಪೊಲೀಸರು ಕೈಕಟ್ಟಿಕೊಂಡು ನೋಡುತ್ತ ನಿಂತಿದ್ದರು. ಏನಿಲ್ಲವೆಂದರೂ ಆವತ್ತು ಸ್ಥಳದಲ್ಲಿ ಕನಿಷ್ಠ 200 ಪೊಲೀಸರು, ಐದಾರು ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಮತ್ತು ಇಬ್ಬರು ಎಸ್.ಪಿ.ಗಳು ಇದ್ದರು ಎಂದು ಆ "ರಾತ್ರಿ ದರೋಡೆಯ" ಪ್ರತ್ಯಕ್ಷದರ್ಶಿಗಳು ನಮಗೆ ತಿಳಿಸಿದರು. ಮಂಗಳೂರಿನ ಪೊಲೀಸರ ಬಗ್ಗೆ ಇನ್ನೂ ತುಂಬ ಹೇಳುವುದಿದೆ.

ಮೃಗಗಳಾದ ಪೊಲೀಸರು

ಬಜಪೆಯಲ್ಲಿ ಜನಸಮೂಹದ ಮೃಗೀಯ ವರ್ತನೆಗೆ ಪೊಲೀಸರು ಮೂಕ ಪ್ರೇಕ್ಷಕರಾಗಿದ್ದರು; ಆದರೆ ಮಂಗಳೂರಿನ ಹೊರವಲಯದ ಉಳ್ಳಾಲದಲ್ಲಿ ಪೊಲೀಸರೇ ಮೃಗಗಳಂತೆ ವರ್ತಿಸಿದರು. ಉಳ್ಳಾಲದ ಹೆದ್ದಾರಿಯಲ್ಲಿ ಬಂದ್ ಘೋಷಿಸಿಲಾಗಿದ್ದ ದಿ. 6.10.06 ಶುಕ್ರವಾರ ಸಂಜೆ ಹಿಂದೂಗಳಿಗೆ ಸೇರಿದ್ದ ಒಂದೇ ಕಟ್ಟಡದ ಮೂರು ಅಂಗಡಿಗಳನ್ನು ಬೆಂಕಿ ಕೊಟ್ಟು ನಾಶಪಡಿಸಲಾಗಿತ್ತು. ಸಮೀಪದ ಮಾಸ್ತಿ ಕಟ್ಟೆಯಲ್ಲಿಯೂ ಗಲಾಟೆ, ಕಲ್ಲು ತೂರಾಟ, ದೊಂಬಿ ಮುಂತಾದವು ನಡೆದಿದ್ದವು. ಈ ಘಟನೆಗಳಿಗೆ ಉಳ್ಳಾಲದ ಮುಸ್ಲಿಮರು ಕಾರಣ ಎಂದು ಭಾವಿಸಿ ಪೊಲೀಸರು, ಅಥವಾ ಉಳ್ಳಾಲದವರೇ ಹೇಳುವ ಪ್ರಕಾರ ಮುಖಕ್ಕೆ ಬಟ್ಟೆ ಕಟ್ಟಿಕೊಂಡು, ಮುಕ್ಕಿಯಲ್ಲಿದ್ದ ಸಿಆರ್‌ಪಿಎಫ್ ಪೊಲೀಸರು ಹೆಚ್ಚಿನ ಮುಸ್ಲಿಮ್ ಮನೆಗಳ ಮೇಲೆ ದಾಳಿ ನಡೆಸಿದರು. ಇದು ಕೂಡ ನಾವು ಭೇಟಿ ನೀಡಿದ ಮನೆಗಳವರು ನಮಗೆ ನೀಡಿದ ಊಹಾಪೋಹದ ವಿವರಣೆ.

ಇದುವರೆಗೆ ಉಳ್ಳಾಲ ಪೊಲೀಸು ಠಾಣೆಯವರು ತಮ್ಮ ಈ ದಾಳಿ ಮತ್ತು ಬಂಧನಕ್ಕೆ ಕಾರಣಗಳನ್ನು ಸಂಬಂಧಪಟ್ಟ ಮನೆಯವರಿಗೆ ತಿಳಿಸಿಲ್ಲ, ಯಾಕೆ ಏನು ಎಂದು ಪೊಲೀಸರನ್ನು ವಿಚಾರಿಸುವ ಧೈರ್ಯ ತೋರಿದ ಕೆಲವು ಮುಸ್ಲಿಮರಿಗೆ ಅವರು ಯದ್ವಾತದ್ವಾ ಥಳಿಸಿದ್ದಾರೆ. ಉಳ್ಳಾಲದಲ್ಲಿ ಈ ಪೊಲೀಸು ದಾಳಿ ನಡೆದದ್ದು ಸಂಜೆ 6.20 ರ ಸುಮಾರಿಗೆ; ಅಂದರೆ ರಮ್ಜಾನ್ ಮಾಸದ ಆ ದಿನದ ಉಪವಾಸ ವ್ರತವನ್ನು ಮುಕ್ತಾಯಗೊಳಿಸುವ ಹೊತ್ತು. ಹೆಚ್ಚಿನ ಮನೆಗಳ ಗಂಡಸರು ಸಂಜೆಯ ಪ್ರಾರ್ಥನೆಗೆ ಮಸೀದಿಗೆ ತೆರಳಿದ್ದರು. ಈ ವೇಳೆಯಲ್ಲೇ ಮನೆಗಳ ಬಾಗಿಲು ಒಡೆದು ಒಳನುಗ್ಗಿದ ಪೊಲೀಸರು ಕೈಗೆ ಸಿಕ್ಕ ಮೊಬೈಲು, ಚಿನ್ನಾಭರಣ, ನಗದು ಹಣ ಮುಂತಾದ್ದನ್ನು ಜೇಬಿಗಿಳಿಸಿದರು. ತಮ್ಮ ಜೇಬಿನಲ್ಲಿ ಹಿಡಿಯದ ಟೀವಿ, ಡಿವಿಡಿ, ಕಂಪ್ಯೂಟರ್ ಮುಂತಾದ್ದನ್ನು ಪುಡಿಪುಡಿ ಮಾಡಿದರು. ಮನೆಗಳ ಕಿಟಕಿ ಬಾಗಿಲುಗಳನ್ನು ಮುರಿದು, ಶೋಕೇಸು ಕಪಾಟು ಮುಂತಾದ್ದನ್ನು ಚಿಂದಿ ಮಾಡಿ, ಮನೆಯಲ್ಲಿದ್ದವರಿಗೆ ಹೆಂಗಸರು, ಪ್ರಾಯದವರು, ಮಕ್ಕಳು ಎಂದು ನೋಡದೇ ಬಾರಿಸಿದರು.

ಯಾಕೆ ಹಾಗೆ ಮಾಡುತ್ತೀರಿ ಎಂದು ಪ್ರಶ್ನೆ ಹಾಕಿದವರಿಗೆ ಪಿಸ್ತೂಲು ತೋರಿಸಿದರು. ಈ ಎಲ್ಲ ದಾಂಧಲೆ ಮುಗಿಸಿ ಹೋಗುವಾಗ, ಪೊಲೀಸರು ಕೆಲವು ಮನೆಗಳಲ್ಲಿದ್ದ ಗಂಡಸರು ಮತ್ತು ಯುವಕರನ್ನೂ ಎಳೆದುಕೊಂಡು ಹೋಗಿ ಪೊಲೀಸು ವ್ಯಾನಿನಲ್ಲಿ ದಬ್ಬಿದರು. ಉಳ್ಳಾಲದ ಸುಮಾರು 60 ಮುಸ್ಲಿಮ್ ಗಂಡಸರು –ಇವರಲ್ಲಿ ಹೆಚ್ಚಿನವರು ಯುವಕರು–ಈಗ ಬಂಧನದಲ್ಲಿದ್ದಾರೆ. ಉಳ್ಳಾಲದಿಂದ ಇವರನ್ನೆಲ್ಲ ಮಂಗಳೂರಿಗೆ ಒಯ್ದು, ಅಲ್ಲಿಂದ ತಾ. 8.10.2006 ಭಾನುವಾರದಂದು ಬಳ್ಳಾರಿ ಜೈಲಿಗೆ ತೆಗೆದುಕೊಂಡು ಹೋಗಲಾಗಿದೆ. ಜಾಮೀನಿಗೆ ಅವಕಾಶವಿಲ್ಲದ ಕ್ರಿಮಿನಲ್ ಕಾಯ್ದೆಯ ಕಲಂಗಳ ಅನ್ವಯ ಅವರ ವಿರುದ್ಧ ಕೇಸುಗಳನ್ನು ಹಾಕಲಾಗಿದ್ದು ಅವರು ಮಾಡಿದ ಅಪರಾಧವೇನು ಎಂದು ಈಗಲೂ ಉಳ್ಳಾಲದ ಅವರ ಮನೆಗಳವರಿಗೆ ಗೊತ್ತಿಲ್ಲ.

ಈ ಮನೆಗಳ ಒಳ ನುಗ್ಗಿ, ಕೈಗೆ ಸಿಕ್ಕವರನ್ನು ಬಂಧಿಸುವಾಗ ಪೊಲೀಸರು ಅವರ ಹೆಸರು ಕೂಡ ಕೇಳಲಿಲ್ಲ, ಹಾಗಾಗಿ ಕೆಲವು ಮನೆಗಳಲ್ಲಿ ಇಫ್ತಾರ್‌ನ ಅತಿಥಿಗಳಾಗಿ ಹೋದ ಉಳ್ಳಾಲದ ಹೊರಗಿನವರೂ ಬಂಧನಕ್ಕೆ ಒಳಗಾಗಿದ್ದಾರೆ. ಉಳ್ಳಾಲದಲ್ಲಿ ಹೀಗೆ ದಸ್ತಗಿರಿಯಾದ ಮುಸ್ಲಿಮರನ್ನು ಎರಡು ಬಸ್ಸುಗಳಲ್ಲಿ ಬಳ್ಳಾರಿಗೆ ಸಾಗಿಸಲಾಗಿದೆ. ಬಸ್ ಹೊರಡುವ ವೇಳೆ ಒಂದು ಬಸ್ಸಿನಲ್ಲಿ 6 ಸೀಟು ಖಾಲಿ ಇದ್ದುದರಿಂದ, ಅದನ್ನು ಯಾಕೆ ಖಾಲಿ ಬಿಡುವುದು ಎಂದು ಪೊಲೀಸರು, ಮತ್ತೆ ತಮ್ಮ ಕೈಗೆ ಸಿಕ್ಕ 6 ಜನರನ್ನು ಬಸ್ಸಿಗೆ ತುಂಬಿದರಂತೆ! ಕ್ರಿಮಿನಲ್ ಕಾಯ್ದೆಯ ಯಾವ ಕಲಂ ಪ್ರಕಾರ ಈ ಬಂಧನ ನಡೆಯಿತು? ಉಳ್ಳಾಲ ಪೊಲೀಸರ ಈ ಮುಸ್ಲಿಂ ದೌರ್ಜನ್ಯದ ಬಗ್ಗೆ ಇದುವರೆಗೆ ಮಂಗಳೂರಿನ ಹಿರಿಯ ಪೊಲೀಸು ಅಧಿಕಾರಿಗಳಿಂದ ವಿವರಣೆ ಬಂದಿಲ್ಲ.

ಉಳ್ಳಾಲದಲ್ಲಿ ನಾವು ಮೊದಲು ನೋಡಿದ ಮನೆ ಯು.ಎಚ್. ನಝೀರ್ ಅವರದ್ದು. ಸುಮಾರು ಮೂವತ್ತರ ಹರೆಯದ ನಝೀರ್, ಎರಡು ಕಾಲುಗಳಲ್ಲೂ ಪೋಲಿಯೋ ಪೀಡಿತರಾಗಿದ್ದು ಸಂಪೂರ್ಣ ಅಂಗವಿಕಲರಾಗಿರುವವರು. ಅವರು ಮನೆಯ ಒಳಗೆ ಕೂಡ, ಒಂದು ಪುಟ್ಟ ಸ್ಟೂಲಿನ ಮೇಲೆ ಕೂತು, ಅದನ್ನೇ ಕೈಯಿಂದ ಅತ್ತ ಇತ್ತ ಚಲಿಸಿ ಓಡಾಡುವುದು. ಅವರ ಮನೆ ಸಮೀಪದಲ್ಲೇ, ಅವರು ಮತ್ತು ಅವರ ತಮ್ಮ ನಡೆಸುತ್ತಿರುವ ಝೀನತ್ ಟೆಕ್ಸ್‌ಟೈಲ್ಸ್ ಮತ್ತು ಫುಟ್‌ವೇರ್ ಅಂಗಡಿಗಳಿವೆ. ಈ ಎರಡು ಅಂಗಡಿಗಳನ್ನೂ ದೋಚಿ, ಕಟ್ಟಡಕ್ಕೆ ಬೆಂಕಿ ಕೊಡಲಾಗಿದೆ.



ಪೊಲೀಸರ ಬೂಟಿನ ಒದೆತ ತಿಂದ ಎಪ್ಪತ್ತರ ಹರೆಯದ ಉಳ್ಳಾಲ ಮುಕ್ಕಚ್ಚೇರಿಯ ಜಮೀಲ

ಬಂದ್‌ನ ದಿನ ಸಂಜೆ, ನಝೀರ್ ಮನೆಯಲ್ಲಿ ಇಫ್ತಾರ್ ಕೂಟ ನಡೆಯುವುದಿತ್ತು; ಡೈನಿಂಗ್ ಟೇಬಲ್ಲಿನಲ್ಲಿ ಎಲ್ಲ ಸಜ್ಜಾಗಿತ್ತು, ಆಗಿನ್ನೂ ಕರ್ಫ್ಯೂ ಹಾಕಿರಲಿಲ್ಲ, ಅಷ್ಟರಲ್ಲಿ ಮನೆಯ ಮೇಲೆ ಕಲ್ಲು ತೂರಾಟ ಪ್ರಾರಂಭವಾಯಿತು. ಇದ್ದಕ್ಕಿದ್ದಂತೆ ಮನೆಯ ಹಿಂಬಾಗಿಲನ್ನು ಒದ್ದು ಮುರಿದು ಒಳನುಗ್ಗಿದ ಪೊಲೀಸರು, ಮನೆಯಲ್ಲಿದ್ದವರಿಗೆಲ್ಲ ಥಳಿಸಿದರು; ಹೆಂಗಸರ ಕುತ್ತಿಗೆಯಲ್ಲಿದ್ದ ಸರಗಳನ್ನು ಕಸಿದರು. ನಝೀರ್ ಅವರನ್ನು ಎಳೆದುಕೊಂಡು ಹೋಗಲು ಯತ್ನಿಸಿದಾಗ ಆತ ಅಂಗವಿಕಲ ಎಂದು ಗೊತ್ತಾಗಿ ಅವರನ್ನು ನೆಲಕ್ಕೆ ಎತ್ತಿ ಹಾಕಿದರು. ಆದರೆ ಅವರ ತಮ್ಮ ಅರೀಫ್‌ರನ್ನು ಎಳೆದುಕೊಂಡು ಹೋಗಿ ವ್ಯಾನಿಗೆ

ಜಿ. ರಾಜಶೇಖರ
ಪಟ್ಟಾಭಿರಾಮ ಸೋಮಯಾಜಿ
ಹರ್ಷಾದ್ ವರ್ಕಾಡಿ

ತಳ್ಳಿದರು. ಅರೀಫ್‌ರ ಮೊಬೈಲು ಮತ್ತು ನಗದು ಹಣ ಪೊಲೀಸರ ಜೇಬು ಸೇರಿತು.

ಉಳ್ಳಾಲ ಕೋಡಿ ಮೇಲಿನ ಬೀದಿಯ ಹುಸೇನ್ ಮಂಝಿಲ್‌ನ ಹಿಂಬಾಗಿಲು ಅಗಳಿ ಹಾಕಿತ್ತು, ಪೊಲೀಸರು ಅದನ್ನು ಬೂಟುಗಾಲಿನಲ್ಲಿ ಒದ್ದು "ಬೋಳಿ ಮಕ್ಕಳೆ ಬಾಗಿಲು ತೆರೆಯಿರಿ" ಎಂದು ಅಬ್ಬರಿಸಿದರು. ಉಳ್ಳಾಲದ ಪೊಲೀಸರು ಅಲ್ಲಿನ ಮುಸ್ಲಿಮರ ಜೊತೆ ಈ ದಾಳಿಯ ಉದ್ದಕ್ಕೂ ಇಂತಹದ್ದೇ ಕೊಳಕು ಭಾಷೆಯಲ್ಲಿಯೇ ವ್ಯವಹರಿಸಿದ್ದಾರೆ. ಒಂದು ಮನೆಯ ಯುವಕ, "ನಾವು ಏನು ಮಾಡಿದ್ದೇವೆ ಸಾರ್" ಎಂದು ಕೇಳಿದಾಗ, "ನಿನ್ನ ಅಕ್ಕನನ್ನು ಕಳುಹಿಸು; ಮಾಡಿ ತೋರಿಸುತ್ತೇವೆ" ಎಂದು ಹೇಳಿದರಂತೆ. ಹುಸೇನ್ ಮಂಝಿಲ್‌ನ ಹಿಂಬಾಗಿಲು ಒದ್ದು ಒಳ ನುಗ್ಗಿದ ಪೊಲೀಸರು ಮನೆಯಲ್ಲಿ ಅವರಿಗೆ ಅಡ್ಡವಾಗಿ ನಿಂತಿದ್ದ 11 ವರ್ಷದ ಮುಫೀದಾ ಎಂಬ ಬಾಲಕಿಗೆ ರಿವಾಲ್ವರ್ ತೋರಿಸಿ ಆಕೆಯನ್ನು ಅತ್ತ ತಳ್ಳಿದರು; ಮನೆಯ ಬೆಡ್‌ರೂಂನ ಬಾಗಿಲು ಒಡೆದು, ಟೀವಿಯನ್ನು ಪುಡಿ




ಪೊಲೀಸರ ದಾಂಧಲೆಗೆ ಬಲಿಯಾದ ಟಿವಿ

ಮಾಡಿದರು. ಮನೆಯವರು ಹೇಳುವ ಪ್ರಕಾರ ಸುಮಾರು 20 ಪೊಲೀಸರು ತಂಡದಲ್ಲಿದ್ದರು. ಮನೆಯವರಿಗೆ ಅವರು 'ಒಂದಕ್ಷರ ಮಾತಾಡಲು ಬಿಡಲಿಲ್ಲ'. ಮನೆಯಲ್ಲಿದ್ದ ಗೋದ್ರೆಜ್ ಕಪಾಟಿನ ಬಾಗಿಲು ತೆಗೆಯಿರಿ ಎಂದು ಪೊಲೀಸರು ಅಬ್ಬರಿಸಿದರು. ಮನೆಯವರು ತೆಗೆಯಲಿಲ್ಲ, ಆಗ ಪೊಲೀಸರೇ ಕಪಾಟು ಒಡೆದು ಒಳಗಿದ್ದ 25 ಸವರನ್ ಚಿನ್ನವನ್ನು ದೋಚಿದರು; ಕಣ್ಣಿಗೆ ಬಿದ್ದ ಗೋಡೆಗಡಿಯಾರವನ್ನೂ ನೆಲಕ್ಕೆ ಎತ್ತಿ ಹಾಕಿದರು; ಅಡುಗೆ ಮನೆಯಲ್ಲಿದ್ದ ಗ್ಯಾಸ್ ಸಿಲಿಂಡರ್ ಮತ್ತು ಪಾತ್ರೆಗಳನ್ನು ಚೆಲ್ಲಾಪಿಲ್ಲಿ ಮಾಡಿದರು. ನಂತರ ಪೊಲೀಸರು ಮನೆಯಲ್ಲಿದ್ದ ಏಕಮಾತ್ರ ಗಂಡಸು ಅಬ್ದುಲ್ ಸಮದ್‌ರನ್ನು ಎಳೆದುಕೊಂಡು ಹೋದರು. ಅವರೀಗ ಬಳ್ಳಾರಿ ಜೈಲಿನಲ್ಲಿದ್ದಾರೆ. 21 ವರ್ಷ ಪ್ರಾಯದ ಸಮದ್ ಓದಿದ್ದು 7 ನೇ ಕ್ಲಾಸಿನವರೆಗೆ. ಊರಿನಲ್ಲಿ ಸಣ್ಣಪುಟ್ಟ ಕೂಲಿ ಕೆಲಸ ಮಾಡಿಕೊಂಡಿರುವ ಸಮದ್‌ರ ಸಂಪಾದನೆಯಿಂದಲೇ ಆ ಮನೆ ನಡೆಯಬೇಕು.

ಹುಸೇನ್ ಮಂಝಿಲ್‌ಗೆ ಹತ್ತಿರದಲ್ಲಿರುವ ಅಮೀನಮ್ಮನ ಸಣ್ಣ ಮನೆಯಲ್ಲಿ ಒಟ್ಟು 24 ಜನರಿದ್ದಾರೆ. ಫಿಶ್‌ಬೋಟಿನ ಕೆಲಸ ಮಾಡುವ ಯು.ಕೆ. ಮೊಯುದಿನ್, ಗೋಣಿ ಚೀಲ ವ್ಯಾಪಾರ ಮಾಡುವ ಮೊಹ್ಮದ್ ಹನಿಫ್, ಮೀನಿನ ಕೆಲಸ ಮಾಡುವ ಯು.ಕೆ. ಬಶೀರ್ ಮತ್ತು ಅವರ ಭಾವ ಯು.ಕೆ. ಮೂಸ –ಹೀಗೆ ಅದು ನಾಲ್ವರ ಅವಿಭಕ್ತ ಕುಟುಂಬ. ಅವರಲ್ಲಿ ಯು.ಕೆ. ಮೂಸ ಕುರುಡರಾದ್ದರಿಂದ ಉದ್ಯೋಗ ಮಾಡುವುದಿಲ್ಲ, ಪೊಲೀಸರು ಇವರ ಮನೆ ಬಾಗಿಲನ್ನೂ ಒದ್ದು ಕಿಟಕಿ, ಗಾಜುಗಳನ್ನು ಪುಡಿ ಮಾಡಿ ಒಳನುಗ್ಗಿದರು. ಆದರೆ ಅವರಿಗೆ ದೋಚಲು ಏನೂ ಸಿಗಲಿಲ್ಲ, ಗಂಡಸರೆಲ್ಲ ಮಸೀದಿಗೆ ಹೋಗಿದ್ದುದರಿಂದ ಅವರಿಗೆ ಬಳ್ಳಾರಿ ಪ್ರಯಾಣ ತಪ್ಪಿತು.

ಉಳ್ಳಾಲದ ಒಂಭತ್ತು ಕೆರೆಯ ಮೊೖದಿನಬ್ಬ ರಿಕ್ಷಾ ಚಾಲಕರು. ಪೊಲೀಸರು ಅವರ ಮನೆಗೆ ನುಗ್ಗಿದ್ದಾಗ ಮೊೖದಿನಬ್ಬ ಮಸೀದಿಗೆ ಹೋಗಿದ್ದರು. ಹಾಗಾಗಿ ನಮಗೆ ಅವರೊಡನೆ ಮಾತಾಡಲು ಸಾಧ್ಯವಾಯಿತು. ಪೊಲೀಸರು ಅವರ ಮನೆಯ ಸ್ವಿಚ್ ಬೋರ್ಡನ್ನು ಗನ್ನಿನಲ್ಲಿ ಗುದ್ದಿ



ಸುಟ್ಟುಕರುಕಲಾದ ಬೈಕ್

ಚೂರು ಮಾಡಿದ್ದರು. ಅಂಗಳದಲ್ಲಿ ನಿಲ್ಲಿಸಿದ್ದ ಅವರ ರಿಕ್ಷಾದ ಗಾಜು ಪೂರ್ತಿ ಪುಡಿ ಮಾಡಿದ್ದರು. ಮನೆಯ ನಡುಕೋಣೆಯಲ್ಲಿದ್ದ ಹೊಚ್ಚಹೊಸ ಒನಿಡಾ ಟಿವಿ ಚಿಂದಿಯಾಗಿದ್ದುದನ್ನು ನಾವು ನೋಡಿದೆವು. ಅದು 6 ತಿಂಗಳ ಕೆಳಗೆ ಕಂತಿನ ಸಾಲದಲ್ಲಿ ಕೊಂಡದ್ದು ಎಂದೂ, ಕಂತು ಇನ್ನೂ ಬಾಕಿ ಇದೆ ಎಂದೂ ಮೊೖದಿನಬ್ಬ ನಮಗೆ ಹೇಳಿದರು. ಟೀವಿ ಜೊತೆಗೆ ಕೊಂಡ ಡಿವಿಡಿ ಪ್ಲೇಯರ್ ಕೂಡಾ ನಾಶವಾಗಿತ್ತು. ಅವರ ಮನೆ ಸಮೀಪದ ನಝ್ಮ ಎಂಬವರ ಮನೆಯ ಬಾಗಿಲನ್ನೂ ಮುರಿದು ಪೊಲೀಸರು ಮನೆಯ ಶೋಕೇಸನ್ನು ಪುಡಿ ಮಾಡಿದ್ದರು. ಆ ಮನೆಯವರು ಗಲ್ಫ್‌ನಲ್ಲಿ ವಾಸವಿರುವುದರಿಂದ ಅದು ಖಾಲಿ ಇತ್ತು.

ಉಳ್ಳಾಲ ಮಕ್ಕಚ್ಚೇರಿಯ ಹಲೀಮಾ ಉಡುಪಿಯ ಹೆಣ್ಣುಮಗಳು. ಅವರ ಗಂಡ ಅಬ್ದುಲ್ ರಝಾಕ್ ವೃತ್ತಿಯಲ್ಲಿ ಪೈಂಟರ್. ಉಳ್ಳಾಲದಲ್ಲಿ ಎಲ್ಲರೂ ಅವರನ್ನು ಪೈಂಟರ್ ರಝಾಕ್ ಎಂದೇ ಕರೆಯುವುದು. ರಝಾಕ್‌ಗೆ ಮೈ ಹುಷಾರಿಲ್ಲವಾದ ಕಾರಣ ಈಗ ಕೆಲಸಕ್ಕೆ ಹೋಗುವುದಿಲ್ಲ, ಅವರ ಇಬ್ಬರು ಮಕ್ಕಳು– 20 ವರ್ಷದ ಮುಸ್ತಫ ಮತ್ತು 18 ವರ್ಷದ ಸಂಶುದ್ದೀನ್ ಉಳ್ಳಾಲ ಪೇಟೆಯಲ್ಲಿ ಒಂದು ಪುಟ್ಟ ಕಂಪ್ಯೂಟರ್ ಅಂಗಡಿ ನಡೆಸಿಕೊಂಡಿದ್ದಾರೆ. ಶುಕ್ರವಾರ ಸಂಜೆ ಪೊಲೀಸರು ಇವರ ಮನೆ ಬಾಗಿಲು ಒಡೆದು ಮನೆಯ ಒಳಗಿದ್ದ ಸ್ವತ್ತನ್ನೆಲ್ಲ ನಾಶ ಮಾಡಿ ಹೋಗಿದ್ದಾರೆ; ಶೋಕೇಸು ಚಿಂದಿಯಾಗಿದೆ. ಪೊಲೀಸರು ಚಾವಡಿಯಲ್ಲಿದ್ದ ಗೋದ್ರೆಜ್ ಕಪಾಟು ಬಾಗಿಲು ಒಡೆದು ಒಳಗಿದ್ದುದನ್ನೆಲ್ಲ ತೆಗೆದುಕೊಂಡು ಹೋಗಿದ್ದಾರೆ ಎಂದು ಹಲೀಮಾ ನಮಗೆ ತಿಳಿಸಿದರು. ಶುಕ್ರವಾರ ಬಂದ್ ಇದ್ದುದರಿಂದ, ಅವರ ಮಕ್ಕಳು ತಮ್ಮ ಅಂಗಡಿಯಲ್ಲಿದ್ದ ಕಂಪ್ಯೂಟರ್ ಸಾಮಗ್ರಿಯನ್ನು ಮನೆಗೆ ತಂದಿದ್ದರು. ಪೊಲೀಸರು ಅವನ್ನೆಲ್ಲ ಜಪ್ತಿ ಹಾಕಿದ್ದಾರೆ. ಹೀಗೆ ತಮ್ಮ ಪ್ರತಾಪ ತೋರಿಸಿದ ನಂತರ ಪೊಲೀಸರು ಅಬ್ದುಲ್ ರಝಾಕ್‌ರನ್ನು, ಅವರ ಇಬ್ಬರು ಮಕ್ಕಳನ್ನೂ ಬಂಧಿಸಿ ಒಯ್ದಿದ್ದಾರೆ. ನಾವು ಅವರ ಮನೆಗೆ ಹೋದಾಗ, ಮನೆಯಲ್ಲಿ ಹರಡಿಕೊಂಡಿದ್ದ ಗಾಜಿನ ಚೂರು, ಕಂಪ್ಯೂಟರ್ ಪಾರ್ಟುಗಳು ಮುಂತಾದ ಅವಶೇಷಗಳ ನಡುವೆ ಹಲೀಮಾ ಒಬ್ಬರೇ ಇದ್ದರು. ತನ್ನ ಗಂಡ ಮತ್ತು ಮಕ್ಕಳು ಯಾಕೆ ಬಳ್ಳಾರಿ ಜೈಲಿನಲ್ಲಿದ್ದಾರೆ ಎಂಬುದು, ಅವರ ಬಂಧನವಾಗಿ 9 ದಿನದ ನಂತರವೂ ಆಕೆಗೆ ಗೊತ್ತಿರಲಿಲ್ಲ.

ಉಳ್ಳಾಲ ಮುಕ್ಕಚ್ಚೇರಿ ಬೀಚ್ ರೋಡಿನಲ್ಲಿ ವಾಸವಾಗಿರುವ ಫಿರೋಜ್ ಅಬೂಬಕ್ಕರ್ ವಿಂಡಿಷ ವ್ಯಾಪಾರಿ. ಅವರು ತಕ್ಕ ಮಟ್ಟಿಗೆ ಸ್ಥಿತಿವಂತರು. ಅವರ ಮನೆ ಬಂಗ್ಲೆ ಎನ್ನಬಹುದಾದಷ್ಟು ದೊಡ್ಡದಾಗಿದೆ. ಮೊನ್ನೆಯ ಪೊಲೀಸು ದಾಳಿಯಿಂದ ಅವರಿಗೆ ಆಗಿರುವ ನಷ್ಟವೂ ದೊಡ್ಡದೇ. ಫಿರೋಜ್ ಅವರ ಮನೆಯ ಕಂಪೌಂಡ್ ಹಾರಿ ಒಳ ನುಗ್ಗಿದ ಪೊಲೀಸರು ಮನೆಯ ಅಂಗಳದಲ್ಲಿ ನಿಲ್ಲಿಸಿದ್ದ ಮೂರು ಕಾರುಗಳ ಗಾಜು ಪುಡಿ ಮಾಡಿ, ಬಾಡಿಯನ್ನು ಜಜ್ಜಿ ನಂತರ ಒಂದು ಬೈಕನ್ನೂ ಜಖಂಗೊಳಿಸಿದ್ದಾರೆ. ಮನೆಯ ಒಳಗೆ ಇದ್ದ ಟೀವಿ, ರೇಡಿಯೋ, ಸಿಡಿ ಪ್ಲೇಯರ್ ಮುಂತಾದ ಎಲ್ಲ ಎಲೆಕ್ಟ್ರಾನಿಕ್ ಸಾಮಗ್ರಿಗಳೂ ಚಿಂದಿಯಾಗಿವೆ. ಫಿರೋಜ್‌ರ 20,000 ರೂಪಾಯಿಯ ಮೊಬೈಲು ಮಾತ್ರ ಸುರಕ್ಷಿತವಾಗಿದೆ; ಪೊಲೀಸರ ಜೇಬಿನಲ್ಲಿ! ಫಿರೋಜ್ ತನಗೆ ಈ ದಾಳಿಯಿಂದ 1 ಲಕ್ಷದಷ್ಟು ನಷ್ಟವಾಗಿರಬಹುದು ಎಂದು ನಮ್ಮೊಡನೆ ಮಾತಾಡುತ್ತಾ ತಿಳಿಸಿದರು. ಪೊಲೀಸರ ಈ ದಾಳಿ ನಡೆದಾಗ ಮನೆಯಲ್ಲಿ ಫಿರೋಜ್‌ರ ತಾಯಿ ಖತೀಜಮ್ಮ ಇದ್ದರು. ಖತೀಜಮ್ಮ ಉಳ್ಳಾಲ ಪೊಲೀಸು ಠಾಣೆಗೆ, ತನ್ನ ಮನೆಯಲ್ಲಿ ಪೊಲೀಸರು ನಡೆಸಿದ ದಾಂಧಲೆಯನ್ನು ವಿವರಿಸಿ ಒಂದು ಲಿಖಿತ ದೂರು ಕೊಟ್ಟರು. ಆದರೆ ಠಾಣೆಯವರು ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರು. "ನಿಮ್ಮ ದೂರಿನಲ್ಲಿ ಪೊಲೀಸರು ಕಾರಣ ಎಂದು ತಿಳಿಸಿದ್ದೀರಿ. 'ಗುರುತು ಪರಿಚಯ ವಿಲ್ಲದ ಗುಂಪಿನವರು ಮಾಡಿದ ಆ ಕೃತ್ಯ' ಎಂದು ಕಾಣಿಸಿದರೆ ಮಾತ್ರ ನಿಮ್ಮ ದೂರು ತೆಗೆದುಕೊಳ್ಳುತ್ತೇವೆ" ಎಂದು ಠಾಣೆಯ ಅಧಿಕಾರಿಗಳು ಖತೀಜಮ್ಮನಿಗೆ ತಿಳಿಸಿದರಂತೆ!

ಉಳ್ಳಾಲ ಮುಕ್ಕಚ್ಚೇರಿಯ ಇಸ್ಮಾಯಿಲ್‌ರ ಮನೆಯಲ್ಲಿ ಅವರ ಹೆಂಡತಿ ತಾಹಿರಾ, ತನ್ನ ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದಾರೆ. ಇಸ್ಮಾಯಿಲ್ ದುಬೈನಲ್ಲಿ ಉದ್ಯೋಗದಲ್ಲಿದ್ದಾರೆ. ಶುಕ್ರವಾರ ಸಂಜೆ ಪೊಲೀಸರು ಮನೆ ಬಾಗಿಲಿಗೆ ಒದ್ದಾಗ, ನಿದ್ರೆಯಲ್ಲಿದ್ದ ಅವರ ಮಗ ಅಶ್ಫಾಕ್ ಕಣ್ಣುಜ್ಜಿಕೊಂಡು ಬಾಗಿಲು ತೆಗೆದ. 19 ವರ್ಷ ಪ್ರಾಯದ ಅಶ್ಫಾಕ್ ಪಿಯುಸಿ ಮುಗಿಸಿ ಈಗ ಕಂಪ್ಯೂಟರ್ ಕೋರ್ಸ್ ಮಾಡು ತ್ತಿದ್ದಾನೆ. ಪೊಲೀಸರು, ಅವನ ತಾಯಿಯ ಎದುರೇ ಅವರ ತಲೆಗೆ ಗುದ್ದಿ, ಬೂಟು ಗಾಲಿನಲ್ಲಿ ಒದ್ದು ಎಳೆದುಕೊಂಡು ಹೋಗಿ ವ್ಯಾನಿಗೆ ದಬ್ಬಿದರು. ತನ್ನ ಮನೆಯಲ್ಲಿ ಆ ದಿನ ನಡೆದದ್ದನ್ನೆಲ್ಲ ವಿವರಿಸಿದ ತಾಹಿರಾ, "ನಮಗೆ ರಕ್ಷಣೆ ಕೊಡಬೇಕಾದ ಪೊಲೀಸರೇ ಹೀಗೆ ಮಾಡಿದರೆ ನಾವು ಇನ್ನು ಯಾರ ಹತ್ತಿರ ದೂರು ಕೊಡುವುದು?" ಎಂದು ನಮ್ಮನ್ನು ಕೇಳಿದರು.

ಇದೇ ಪ್ರಶ್ನೆಯನ್ನು, ಬೇರೆಬೇರೆ ಶಬ್ದಗಳಲ್ಲಿ ನಾವು ಹೋದ ಉಳ್ಳಾಲದ ಪ್ರತಿ ಮನೆಯವರೂ ನಮ್ಮ ಬಳಿ ಕೇಳಿದ್ದಾರೆ. ತನ್ನ ಮಗನ ಬಂಧನದ ಸುದ್ದಿ ತಿಳಿದು ದುಬೈನಿಂದ ಉಳ್ಳಾಲಕ್ಕೆ ಧಾವಿಸಿ ಬಂದ ತಾಹಿರಾ ಅವರ ಗಂಡ ಇಸ್ಮಾಯಿಲ್ ನಡೆದ ಸಂಗತಿಯ ಬಗ್ಗೆ ಪೊಲೀಸರಿಗೆ ಲಿಖಿತ ದೂರು ಸಲ್ಲಿಸಿ, ಅದರ ಪ್ರತಿಯನ್ನು ಐಜಿಪಿ ಸತ್ಯನಾರಾಯಣರಾವ್‌ರಿಂದ ಹಿಡಿದು ಎಲ್ಲ ಪೊಲೀಸ್ ಅಧಿಕಾರಿಗಳು, ಜೊತೆಗೆ ಪ್ರಧಾನಿ ಮನಮೋಹನ್ ಸಿಂಗ್, ಮುಖ್ಯಮಂತ್ರಿ ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಧರಂಸಿಂಗ್, ಮಲ್ಲಿಕಾರ್ಜುನ ಖರ್ಗೆ, ಗೃಹಮಂತ್ರಿ ಎಂ.ಪಿ. ಪ್ರಕಾಶ್, ಕಾಂಗ್ರೆಸ್ ನಾಯಕರಾದ ಜನಾರ್ಧನ ಪೂಜಾರಿ, ಆಸ್ಕರ್ ಫರ್ನಾಂಡೀಸ್, ರಮಾನಾಥ್ ರೈ, ಜಿಲ್ಲಾ ಉಸ್ತುವಾರಿ ಸಚಿವ ನಾಗರಾಜ ಶೆಟ್ಟಿ, ಧರ್ಮಸ್ಥಳದ ವೀರೇಂದ್ರ ಹೆಗ್ಡೆ, ಮಾನವ ಹಕ್ಕುಗಳ ಆಯೋಗ, ಅಲ್ಪಸಂಖ್ಯಾತ ಆಯೋಗಗಳ ಅಧ್ಯಕ್ಷರು ಮತ್ತು ಇನ್ನೂ ಹಲವು ಗಣ್ಯರಿಗೆ ರಿಜಿಸ್ಟರ್ಡ್ ಪೋಸ್ಟಿನಲ್ಲಿ ಕಳುಹಿಸಿ ಕೊಟ್ಟಿದ್ದಾರೆ. ಇಸ್ಮಾಯಿಲ್ ಮುಗ್ಧರಾಗಿ ನಮ್ಮೆದುರು ಪೋಸ್ಟ್ ಆಫೀಸಿನ ಕಂಪ್ಯೂಟರ್ ಮುದ್ರಿತ ರಶೀದಿಯ ಉದ್ದ ಹಾಳೆಯನ್ನು ಇಟ್ಟಾಗ ನಮಗೆ ಖೇದವಾಯಿತು. ಆದರೆ ಈ ರಶೀದಿಯಲ್ಲಿ ನಮೂದಾಗಿರುವ ಗಣ್ಯರು ತನಗೆ ನ್ಯಾಯ ಕೊಡಿಸಿಯಾರು ಎಂಬ ಭರವಸೆ ಬಿಟ್ಟರೆ ಇಸ್ಮಾಯಿಲ್‌ರಿಗೆ ಈಗ ಬೇರೆ ಏನು ಉಳಿದಿದೆ?

ಉಳ್ಳಾಲದಲ್ಲಿ ನಾವು ಭೇಟಿ ಮಾಡಿದ ಪ್ರತಿ ಮನೆಯವರೂ, "ದೇವರು ಅವರಿಗೆ ಶಿಕ್ಷೆ ಕೊಡುತ್ತಾನೆ" ಎಂದು ಹೇಳಿದರು. ಈ ನಾಡಿನ ನ್ಯಾಯದಲ್ಲಿ ಇಸ್ಮಾಯಿಲ್‌ರಿಗೆ ಈಗಲೂ ಇರುವ ವಿಶ್ವಾಸಕ್ಕಿಂತ, ದೇವರ ನ್ಯಾಯದಲ್ಲಿ ಉಳ್ಳಾಲದ ಮುಸ್ಲಿಮರಿಗೆ ಇರುವ ವಿಶ್ವಾಸವೇ, ಪ್ರಾಯಶಃ ಈ ಕಷ್ಟದ ದಿನಗಳಲ್ಲಿ ಅವರನ್ನು ಕಾಪಾಡುತ್ತಿದೆ. ಉಳ್ಳಾಲದಲ್ಲಿ ತಿರುಗಾಡುತ್ತಿದ್ದಂತೆ ನಮಗೆ ಒಂದು ಸಂಗತಿ ಅನುಭವಕ್ಕೆ ಬಂದಿತು. ಈ ಪೊಲೀಸು ದಾಳಿ ಉಳ್ಳಾಲದ ಮುಸ್ಲಿಮರನ್ನು ಇನ್ನಷ್ಟು ನಿಕಟವಾಗಿ ಬೆಸೆದಿದೆ. ಒಂದು ಸಮುದಾಯವನ್ನು ಹೊಡೆದು ಬಡಿದು ಮಣಿಸಲಾಗುವುದಿಲ್ಲ, ಹೊಡೆಸಿಕೊಂಡ ಜನ ತಮಗೆ ಬಿದ್ದ ಹೊಡೆತಗಳನ್ನೇ ತಮ್ಮ ಶಕ್ತಿಯನ್ನಾಗಿ ಮಾರ್ಪಡಿಸಿಕೊಳ್ಳುತ್ತಾರೆ ಎಂಬ [illegible]

ಚೇರಿಗೆ ಬಿಸಿನೀರನೆರೆದು ಹೂ ಹಣ್ಣನು ಆಶಿಸುತ್ತಾ....

(ಒಂದನೆ ತರಗತಿಯಿಂದಲೇ ಇಂಗ್ಲಿಶ್ ಕಡ್ಡಾಯ : ಭ್ರಮೆ ಮತ್ತು ವಾಸ್ತವ)

ಅ ಆ ಇ ಈ ಉ ಊ

ಒಂದನೇ ತರಗತಿಯಿಂದಲೆ ಇಂಗ್ಲಿಷ್ ಕಲಿಸುವ ಯೋಜನೆಯ ಹಿಂದಿರುವ ಉದ್ದೇಶ ಇಂಗ್ಲಿಷ್ ಕಲಿಸಬೇಕು ಎಂಬುದಲ್ಲ. ವರ್ತಮಾನದಲ್ಲಿ ಯಾರು ಯಾರು ತಮ್ಮತಮ್ಮ ಕಷ್ಟ ಸಂಕಟಗಳಿಗಾಗಿ ಆಳುವ ವರ್ಗದ ವಿರುದ್ಧ ಅಸಹನೆಗೊಂಡಿದ್ದಾರೊ, ಅಂತಹವರ ಅಸಹನೆ ಮತ್ತು ಆಕ್ರೋಶವನ್ನು ಶಮನಗೊಳಿಸುವುದಾಗಿದೆ.

ವಿಶೇಷ ಲೇಖನ

ಬಿ.ಎಂ. ಪುಟ್ಟಯ್ಯ

ಮುಂದಿನ ಶೈಕ್ಷಣಿಕ ವರ್ಷದಿಂದ ಒಂದನೇ ತರಗತಿಯಿಂದಲೇ ಕಡ್ಡಾಯವಾಗಿ ಇಂಗ್ಲಿಷ್ 'ಕಲಿಸುವ' ನಿರ್ಧಾರವನ್ನು ಸಂಪುಟ ಸಭೆ ಕೈಗೊಂಡಿದೆ. ಇದನ್ನು ಕೆಲವು ಸಂಘಟನೆಗಳು, ಬುದ್ಧಿಜೀವಿ ಸಾಹಿತಿಗಳು ಸಮರ್ಥಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲರು ನಾಡಿನ ಹಿರಿಯ ಸಾಹಿತಿಗಳನ್ನು ಸಂಘಟಿಸಿಕೊಂಡು, ಖಾಸಗಿ ಶಾಲೆಗಳಲ್ಲಿ ಕನ್ನಡ ಕಡ್ಡಾಯವಿಲ್ಲದಿರುವುದರ ಬಗ್ಗೆ ಸುಪ್ರೀಂಕೋರ್ಟಿನ ರಿಟ್ ಅನ್ನು ತೆರವುಗೊಳಿಸಿ, ನಂತರ ಇಂಗ್ಲಿಷನ್ನು ಕಡ್ಡಾಯಗೊಳಿಸುವ ಬಗ್ಗೆ ತೀರ್ಮಾನಿಸಿ ಎಂಬ ನಿಲುವನ್ನು ತಾಳಿದ್ದಾರೆ. ಎರಡೂ ನಿಲುವಿನವರು ಶಿಕ್ಷಣದ ಚೌಕಟ್ಟಿನಲ್ಲಿ ಮತ್ತು ಭಾಷಾ ಕಲಿಕೆಯ ನೆಲೆಯಲ್ಲಿ ಮಾತ್ರ ಆಲೋಚಿಸಿದ್ದಾರೆ. ಉಳಿದಂತೆ ಇಂಗ್ಲಿಷ್ ಕಲಿಸುವುದನ್ನು ಸಮರ್ಥಿಸುವವರು, ಇಂದು ಮಕ್ಕಳು ಒಂದನೇ ತರಗತಿಯಿಂದಲೆ ಇಂಗ್ಲಿಷ್ ಕಲಿತರೆ ಮುಂದೆ ಅವರು ಬದುಕಲು ಎಲ್ಲ ಅವಕಾಶ ಪಡೆಯಲು ಸಮರ್ಥರಾಗುತ್ತಾರೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಆದರೆ ಪ್ರಸ್ತುತ ವಿಷಯವನ್ನು ಕೇವಲ ಶೈಕ್ಷಣಿಕ ಚೌಕಟ್ಟು ಮತ್ತು ಭಾಷಾ ಕಲಿಕೆಯ ವಿಷಯವನ್ನಾಗಿ ಮಾತ್ರ ಪರಿಗಣಿಸುವಂತಿಲ್ಲ, ಆದರಿಂದ ಮೇಲಿನ ವಿಷಯವನ್ನು ರಾಜಕೀಯ ಹಾಗೂ ಸಾಮಾಜಿಕ ಆಯಾಮಗಳ ಸಮಗ್ರ ನೆಲೆಯಲ್ಲಿ ಆಲೋಚಿಸಬೇಕು.


ಆಳುವ ವರ್ಗಕ್ಕೆ ಈ ನಾಡಿನ ಪ್ರಜೆಗಳ ಬಗ್ಗೆ ಮತ್ತು ಇಂದಿನ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಇಷ್ಟೊಂದು ಕಾಳಜಿ ಮೂಡಿರುವುದು ತುಂಬಾ ಸ್ವಾಗತಾರ್ಹ ಬೆಳವಣಿಗೆ. ಆದರೆ ಒಂದು ವಿಚಿತ್ರ ಸಂಗತಿಯೇನೆಂದರೆ, ಆಳುವ ವರ್ಗ ತನ್ನ ಹಿತಾಸಕ್ತಿಯನ್ನು ಸಾಮಾನ್ಯ ಜನರ ಮತ್ತು ದಲಿತರ ಹಿತಾಸಕ್ತಿ ಎಂಬುದಾಗಿ ಮೊದಲು ಅಭಿಪ್ರಾಯ ಹುಟ್ಟಿಸಿಬಿಡುತ್ತದೆ. ನಂತರ ದಲಿತ ಸಮುದಾಯದ ಕೆಲವರು, ಜೊತೆಗೆ ದಲಿತ ಸಹಾನುಭೂತಿವುಳ್ಳವರು ಇದನ್ನು ಸಮರ್ಥಿಸುತ್ತ ಹೋಗುತ್ತಾರೆ. ಜಾಗತೀಕರಣದ ಸಮರ್ಥನೆಯಲ್ಲೂ ಇದೇ ನಡೆಯಿತು. ಈಗ ಇಂಗ್ಲಿಷ್ ಕಲಿಸುವ ಸರದಿ. ಈಗಾಗಲೆ ದಲಿತ ಸಮುದಾಯದ ಕೆಲವರು 'ದಲಿತ ಮಕ್ಕಳು ಇಂಗ್ಲಿಷ್ ಕಲಿತರೆ ಮಾತ್ರ ಅವರ ವಿಮೋಚನೆ' ಎಂಬಂತೆ ಮಾತಾಡುತ್ತಿದ್ದಾರೆ. ಉಳಿದವರು ಇದನ್ನು ಸಮರ್ಥಿಸುತ್ತಿದ್ದಾರೆ. ದಲಿತರು ಆಳುವ ವರ್ಗಕ್ಕೆ ಓಟ್ ಬ್ಯಾಂಕ್ ಮಾತ್ರ ಆಗಿಲ್ಲ, ಆಳುವ ವರ್ಗದ ಕುತಂತ್ರ ಯೋಜನೆಗಳು ದಲಿತಪರ ಎಂದು ಹೇಳಿಸಲು ಎಲೈಟ್ ದಲಿತರನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ತುಂಬಾ ವಿಷಾಧದ ಸಂಗತಿ. ಪರಿಣಾಮವಾಗಿ, 'ಒಂದನೆ ತರಗತಿಯಿಂದಲೆ ಕಡ್ಡಾಯ ಇಂಗ್ಲಿಷ್ ಕಲಿಕೆ'ಯನ್ನು ವಿಮರ್ಶಾತ್ಮಕವಾಗಿ ಗ್ರಹಿಸುವವರನ್ನು 'ದಲಿತ ವಿರೋಧಿ'ಗಳೆಂದು ಪರಿಗಣಿಸುವ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ.

ಔಪಚಾರಿಕ ಶಿಕ್ಷಣದಲ್ಲಿ ಈಗ ಭಾಷೆಯನ್ನು ಅಥವಾ ಇಂಗ್ಲಿಷ್ ಭಾಷೆಯನ್ನು ಕಲಿಸುತ್ತಿರುವ ವಿಧಾನವು ಭಾಷಾ ಕಲಿಕೆಯ ಕ್ರಮಕ್ಕೆ ವಿರುದ್ಧವಾಗಿದೆ. ಭಾಷೆಯನ್ನು ಬರಹದ ಹಂಗಿಲ್ಲದೆ ಕಲಿಯುವ ಸಾಮರ್ಥ್ಯ ಮನುಷ್ಯನ ಮೆದುಳಿಗಿದೆ. ಇದು ಬಹಳ ಸಹಜವಾದುದು. ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಆಡುವ ಅನಕ್ಷರಸ್ಥರಿದ್ದಾರೆ. ಹಂಪಿಯಲ್ಲಿ ದನ ಕಾಯುವ ಅನಕ್ಷರಸ್ಥ ಮಕ್ಕಳು, ಹಣ್ಣು ಹೂ ಮಾರುವವರು, ಜೀವನೋಪಾಯಕ್ಕಾಗಿ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಂಡವರು ಲೀಲಾಜಾಲವಾಗಿ ಇಂಗ್ಲಿಷ್ ಮಾತಾಡುತ್ತಾರೆ. ಇವರ್ಯಾರೂ ಒಂದನೇ ತರಗತಿಯಿಂದ 'ಕಡ್ಡಾಯವಾಗಿ' ಇಂಗ್ಲಿಷ್ ಕಲಿತವರಲ್ಲ. ಇವರ್ಯಾರೂ ಕೂಡ ಬರಹದ ಮೂಲಕ ಎರಡನೆ ಅಥವಾ ಮೂರನೇ ಭಾಷೆಯನ್ನು ಕಲಿತವರಲ್ಲ. ಅಂದರೆ ಶಿಕ್ಷಣದಲ್ಲಿ ಓದು – ಬರಹದ ಮೂಲಕವೇ ಭಾಷೆಯನ್ನು ಕಲಿಸುವ ವಿಧಾನ ಭಾಷಾ ಕಲಿಕೆಯ ಸಾಮಾನ್ಯ ಕ್ರಮಕ್ಕೆ ವಿರುದ್ಧವಾಗಿದೆ.

ಇಂದಿನ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಆಳುವ ವರ್ಗಕ್ಕೆ ಅಷ್ಟೊಂದು ಕಾಳಜಿ ಇರುವುದು ನಿಜವೇ ಆದರೆ ಒಂದೇ ಒಂದು ಗಂಭೀರ ಪ್ರಶ್ನೆಯನ್ನು ಕೇಳಬೇಕಾಗಿದೆ. ಈಗಾಗಲೇ ವಿವಿಧ ಬಗೆಯ ಶಿಕ್ಷಣ ಪಡೆದು, ಆಳುವ ವರ್ಗದ ಶೋಷಣೆಯ ತಂತ್ರಗಳಿಂದಾಗಿ ನಿರುದ್ಯೋಗಿಗಳಾಗಿರುವ ಮತ್ತು ಪ್ರತಿವರ್ಷ ಶಿಕ್ಷಣ ಪಡೆದ ತಪ್ಪಿಗೆ ನಿರುದ್ಯೋಗಿಗಳಾಗುತ್ತಿರುವ ಲಕ್ಷಲಕ್ಷ ಯುವಜನಾ[...] ಕರಾಳ ಬದುಕನ್ನು ಹಸನು ಮಾಡಲು ಆಳುವ ವರ್ಗ[...] ಯಾಕೆ ಸಾಧ್ಯವಾಗಿಲ್ಲ?. ಗ್ರಾಮಾಂತರ ಪ್ರದೇಶದ ಅದ[...] ದಲಿತ ಕುಟುಂಬದ ಕೆಲವೇ ಕೆಲವರು ಮಾತ್ರ ಇಂ[...] ಕಲಿತು ನೌಕರ, ಅಧಿಕಾರಿ ಆದ ತಕ್ಷಣ ಅದ[...] ಸಾಮಾಜಿಕ ಬೆಳವಣಿಗೆಯ ಪ್ರಧಾನ ಭಾಗ ಎಂ[...] ಪರಿಗಣಿಸುವುದು ಸಂಕುಚಿತ ವಿಧಾನ. [...] ಸಮುದಾಯಗಳಿಂದ ಶಿಕ್ಷಣ ಪಡೆಯಲು ಬಂ[...] ಇಂಗ್ಲಿಷ್ ಪಾಸು ಮಾಡಲಾಗದೆ ನಿರುದ್ಯೋಗಿಗಳಾದ[...] ಬಹುಸಂಖ್ಯಾತರು. ಬಹುಸಂಖ್ಯೆಯನ್ನು ಪ್ರಧಾನ ಎಂ[...] ಪರಿಗಣಿಸುವುದು ಪ್ರಜಾಪ್ರಭುತ್ವದ ಪದ್ಧತಿ ಆಗ[...] ಇಂಗ್ಲಿಷ್ ಪಾಸು ಮಾಡಲಾಗದೆ ಮನೆಗೆ ಹ[...] ಕೂಲಿನಾಲಿ ಮಾಡಿಕೊಂಡಿರುವ ಬಹುಪ್ರಮಾಣ[...] ಪ್ರಧಾನವೆಂದು ಪರಿಗಣಿಸಬೇಕು. ಆ ಮೂ[...] ಸಾಮಾಜಿಕ ಬೆಳವಣಿಗೆಯನ್ನು ಪರಿಗಣಿಸಿದಾಗ ವಾ[...] ತಿಳಿಯುತ್ತದೆ.

ಕಳೆದ ಶತಮಾನದ **60-70** ರ ದಶಕದಲ್ಲಿ ದಲಿತ[...] ಹಿಂದುಳಿದವರು ಮತ್ತು ಗ್ರಾಮಾಂತರ ಪ್ರದೇಶದ[...] ಶಿಕ್ಷಣ ಪಡೆದರೆ ಸಾಕು; ಅವರಿಗೆ ನೌಕರಿ ಗ್ಯಾರ[...] ಎಂಬ ಅಭಿಪ್ರಾಯವನ್ನು ಗಟ್ಟಿಗೊಳಿಸಲಾಗಿತ್ತು. ಆ[...] ಆದದ್ದಾದರೂ ಏನು? ನಿರುದ್ಯೋಗಿಗಳ ಸೃಷ್ಟಿ. ಆ[...] **1986**ರವರೆಗೆ ಸ್ನಾತಕೋತ್ತರ ಪದವಿ ಪಡೆದ[...] ನೇರವಾಗಿ ಉಪನ್ಯಾಸಕ ಹುದ್ದೆಗೆ ಅರ್ಹರಾಗಿದ್ದ[...] ಕ್ರಮೇಣ ಆ ಪದವಿ ಪಡೆದವರ ಸಂಖ್ಯೆ ಜಾಸ್ತಿಯಾಗ[...] ಹೋಯಿತು. ಆಗ ನಿರುದ್ಯೋಗಿಗಳನ್ನು ತಡೆಹಿಡಿಯ[...] ಸಲುವಾಗಿ ಮತ್ತು ಅವರಲ್ಲಿ ಅಪರಾಧಿ ಪ್ರಜ್ಞೆಯ[...] ಹುಟ್ಟುಹಾಕುವ ಉದ್ದೇಶದಿಂದ ಎನ್‌ಇಟಿ/ಯು[...] ಎಂಬ ಕರಾಳ ಪರೀಕ್ಷೆಯಲ್ಲಿ ಪಾಸಾಗಬೇಕೆ[...] ನಿಯಮವನ್ನು ಜಾರಿಗೆ ತಂದರು. ಆ ಪರೀಕ್ಷೆಯ[...] ಪಾಸಾಗುವುದಕ್ಕೂ ತಗರತಿಯೊಳಗಿನ ಬೋಧನೆ[...] ಎಳ್ಳಷ್ಟೂ ಸಂಬಂಧವಿಲ್ಲ ಎಂಬುದು ಎಲ್ಲರಿಗೂ ಗೊ[...] ಆದರೆ ಆ ಪರೀಕ್ಷೆಯಲ್ಲಿ ಪಾಸಾಗಲಿಲ್ಲವಲ್ಲ [...] ಆತಂಕ ಸ್ನಾತಕೋತ್ತರ ಪದವಿ ಮುಗಿಸಿದವರಲ್ಲಿ [...] ಕಾಡುತ್ತಿದೆ. ಅಂದರೆ ಆ ಪರೀಕ್ಷೆಯ ಉದ್ದೇಶ[...] ಸ್ನಾತಕೋತ್ತರ ಪದವೀಧರರನ್ನು ಅನರ್ಹಗೊಳಿ[...]ವುದಾಗಿದೆ. ಇದರ ಹಾಗೆ ಇಂದು ಒಂದ[...] ತರಗತಿಯಿಂದ ಇಂಗ್ಲಿಷ್ ಕಲಿತ ತಕ್ಷಣ ಮುಂ[...] **15-20** ವರುಷಗಳಲ್ಲಿ ನೌಕರಿ ಇತ್ಯಾದಿ ಗ್ಯಾರ[...] ಎಂಬ ಭ್ರಮೆಯನ್ನು ಹುಟ್ಟುಹಾಕಲಾಗಿದೆ. ಈಗ ಕ[...] ಇವರು, ಆಗ ನೌಕರಿ ಕೇಳುವ ಪ್ರಸಂಗ ಬಂದ[...] ಎನ್‌ಇಟಿ/ಯುಜಿಸಿಯಂತಹ ಯಾವುದೋ ಕ[...] ಪರೀಕ್ಷೆಯನ್ನು ತಂದು ಇವರನ್ನು ಮತ್ತೆ ಅನರ್ಹಗೊ[...]ಳಿಸ]ಲಾರರು ಎಂಬ ಗ್ಯಾರಂಟಿ ಏನಿದೆ?

ಅನಿತಕ್ಕಾ ಯಲ್ಲಾ ನಿನ್ನಣೆಬರ ಕಣಕ್ಕ!



ಕುಮಾರಸ್ವಾಮಿಗಳು ಹಳ್ಳಿಗಳ ಗರೀಬರ ಮನೆಯಲ್ಲಿ ಮಲಗಿದ್ದು ಎದ್ದು ಬರುತ್ತಿರುವುದು ಶಾನೆ ಪ್ರಭಾವ ಬೀರಿ ಹಲವು ಮಹಿಳೆಯರು ಕುಮಾರಸ್ವಾಮಿಯ ಕಟೌಟಿಗೆ ಹಾಲು ಕುಡಿಸತೊಡಗಿದ್ದಾರಂತಲ್ಲಾ. ಈ ಮೂರ್ಖ ಮಹಿಳೆಯರ ಕ್ಷೀರ ಚೆಲ್ಲಾಟ ನೋಡಿದ ಅಹಿಂದ ಮಹಿಳೆಯರು ಆಡಿಕೊಳ್ಳುತ್ತಿದ್ದಾರಂತಲ್ಲಾ, "ಈ ಮುಂಡೇರಿಗೆ ಹಾಲಿನ ಬೈಲೆ ಗೊತ್ತಿದ್ರೆ ಹಿಂಗೆ ಉಯ್ತಿದ್ರೆ?" ಎಂದು ಕೆಲವರು, "ಮಕ್ಕಳಿಗೆ ಹಾಲು ಕುಡಿಸಿದ್ರೆ ಗೊತ್ತಾಗೋದು" ಎಂದು ಹಲವರು ಅಣಕಿಸುತ್ತಿರಬೇಕಾದರೆ ಚೆನ್ನಮ್ಮನ ವಾರಿಗೆಯ ಕೆಲವು ಹಳೆ ಹೆಂಗಸರು, "ಪಾಪ ಚೆನ್ನಮ್ಮನಿಗೆ ಮ್ಯಾಲಿಂದ ಮ್ಯಾಲೆ ವರುಸುಕ್ಕೊಂದು ಮಕ್ಕಳಾಗಿಬುಟ್ಟು ಕುಮಾರಸ್ವಾಮಿಗೆ ಸರಿಯಾಗಿ ಹಾಲೇ ಸಿಕ್ಕಲಿಲ್ಲ, ಅದು ತಿಳಕಂಡು "ಹೆಂಗಸರು ಅವುನ ಪೋಟಕೆ ಹಾಲುಯ್ತಾ ಅವುರೆ. ಅದರಲ್ಲಿ ತಪ್ಪೇನು?" ಎಂದರಂತಲ್ಲಾ, ಥೂತ್ತೇರಿ!

* * * * * * * *

ಕುಮಾರಸ್ವಾಮಿ ಮನೆಯಲ್ಲಿ ಮಲಗುವುದನ್ನು ಬಿಟ್ಟು ಶಾನೆ ದಿನವಾಗಿರುವುದಕ್ಕೆ ಧರ್ಮಸಿಂಗರಿಗೇ ಕನಿಕರವಾಗಿದೆಯಂತಲ್ಲಾ, "ಇನ್ನೂ ಪ್ರಾಯವಿರುವ ಕುಮಾರಸ್ವಾಮಿ ವಯಸ್ಸಾದವರ ಕೆಲಸ ಮಾಡುತ್ತಿರುವುದು ನಮ್ಮಲ್ಲಿ ಮರುಕ ಹುಟ್ಟಿಸಿದೆ. ಆಡಳಿತ ಗೊತ್ತಿಲ್ಲದವರು ಮಾಡುವ ಮೊದಲ ಕೆಲಸವೆಂದರೆ ಫೈಲುಗಳಿಲ್ಲದ ಜಾಗದಲ್ಲಿ ಮಲಗುವುದು" ಎಂದು ಆಡಿಕೊಂಡರಂತಲ್ಲಾ, ಈ ನಡುವೆ ಅನಿತಕ್ಕನಿಗೆ ಹಿಂದಿನಿಂದಲೂ ರೇಷ್ಮೆ ಸೀರೆ ಮಾರುವ ವ್ಯಕ್ತಿಯೊಂದು ಕುಮಾರಣ್ಣನ ಹಳ್ಳಿ ವಾಸ್ತವ್ಯದ ವಿಷಯ ತಿಳಿದುಕೊಂಡು, "ಅನಿತಕ್ಕ, ಯಲ್ಲಾ ನಿನ್ನ ಹಣೇ ಬರ. ನಮಿಗೆ ದಕ್ಕಿದ್ದೇ ಇಷ್ಟು, ಸಿಕ್ಕಿದ್ದೇ ಸಾಕು ಅನ್ನಕೊಬೇಕು" ಎಂದನಂತಲ್ಲಾ, "ಯಾಕಿಂಗೇಳ್ತಿಯೋ?" ಎಂದು ಅನಿತಕ್ಕ ಗದರಿದಾಗ "ನೋಡಕ್ಕ, ಹಿಂಗೇಳ್ತಿನಿ ಅಂತ ಬೇಜಾರು ಮಾಡಿಕೊಬ್ಯಾಡ. ಕೈ ತ್ವಳಕಂಡು ಮುಟ್ಟೊ ಅಂತ ಹೆಂಡ್ತಿ ಕಟಿಗಂಡು ಕುಮಾರಣ್ಣ ಹಿಂಗೆ ಮಾಡಬೌದೆ? ಆ ಬಂಡಿಪಾಳ್ಯದಲ್ಲಿ ಜನವಳೊ ಕುಮಾರಣ್ಣನ ಏಟಚ್ಚಗಂಡವುಳೆ ಅಂದ್ರೆ, ಕುಮಾರಣ್ಣನ ಕಟೌಟಿಗೆ ಹಾಲುಕರದು ಹೂದ್ದುಂತೆ. ನೀನು ಸ್ಯಟ್ಟಾಗಿದ್ರೆ ಇವ್ನೆಲ್ಲ ಯಾಕೆ ನ್ಯಡಿಯುವು?" ಎಂದನಂತಲ್ಲಾ, ಥೂತ್ತೇರಿ!!


* * * * * * * *

ಒಂದು ಕುಟುಂಬದ ಓಟಿಗೆ ಐದು ಸಾವಿರವೆಂದು ಬೆಲೆಕಟ್ಟಿರುವ ಕುಮಾರಸ್ವಾಮಿ, ಅದರಂತೆ ಚಾಮುಂಡೇಶ್ವರಿ ಕ್ಷೇತ್ರದ ಹಲವರಿಗೆ ಚೆಕ್ ವಿತರಿಸಿ ಬಂದರಂತಲ್ಲಾ, ಏನು ಕೊಟ್ಟರೂ ಕೂಡ ಕ್ಷಣಾರ್ಧದಲ್ಲಿ ಖಾಲಿ ಮಾಡುವ ಆ ಜನ, ಕುಮಾರಣ್ಣ ಕೊಟ್ಟ ಚೆಕ್ಕನ್ನು ಅತ್ಯಂತ ನಿರುತ್ಸಾಹದಿಂದಲೇ ಹಿಡಿದುಕೊಂಡು "ಇದೇನು ಮಾಡಬೇಕು ಸ್ವಾಮಿ?" ಎಂದರಂತಲ್ಲಾ, ಆಗ ದಳ್ಳಾಳಿಯಂತಹ ಜನ "ಇದನ್ನು ತಗಂಡೋಗಿ ಬ್ಯಾಂಕಿಗೆ ಕೊಟ್ಟು ನಿಮ್ಮ ಅಕೌಂಟ್ ಮುಖಾಂತರ ಕ್ಯಾಷ್ ಮಾಡಿಕೊಬೇಕು" ಎಂದು ಬ್ಯಾಂಕಿನ ರಗಳೆ ಹೇಳಿದಾಗ "ಅದ್ಯಲ್ಲ ಬ್ಯಾಡಿ, ಇದ ಮಡಿಕಂಡು ಅರ್ಧ ದುಡ್ಡು ಕೊಡಿ" ಎಂದರಂತಲ್ಲಾ, ಥೂತ್ತೇರಿ!!

* * * * * * * *

ಇತ್ತ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಏನಾದರೂ ಮಾಡಿ ಒಬ್ಬನೇ ಅಭ್ಯರ್ಥಿ ಹಾಕಬೇಕೆಂದು ಎಂ.ಪಿ. ಪ್ರಕಾಶ್ ಹೋರಾಡುತ್ತಿರಬೇಕಾದರೆ, ಎಡೂರಪ್ಪ ಈಶ್ವರಪ್ಪ ಎಂಬ ಚೆಡ್ಡಿಗಳು "ಚಾಮುಂಡೇಶ್ವರಿಯನ್ನು ನಮಗೆ ಕೊಟ್ಟು ನೋಡಿ, ಆ ಸಿದ್ಧರಾಮಯ್ಯನನ್ನು ಮಹಿಷಾಸುರನಂತೆ ಬಲಿ ಹಾಕುತ್ತೇವೆ" ಎಂದರಂತಲ್ಲಾ, ಚೆಡ್ಡಿಗಳ ಹಟ ನೋಡಿದ ದೇವೇಗೌಡ, "ಒಂದು ವೇಳೆ ಈ ಬಜೆಪಿಗಳು ಸರಿಯಾದ ಅಭ್ಯರ್ಥಿಯನ್ನೇ ನಿಲ್ಲಿಸಿಬಿಟ್ಟರೆ ನಾವು ತೀರಾ ದುರ್ಬಲ ವ್ಯಕ್ತಿಯನ್ನು ನಿಲ್ಲಿಸಿ ಒಳಗಿಂದೊಳಗೆ ಬಜೆಪಿಯೇ ಗೆಲ್ಲುವಂತೆ ಮಾಡಿಬಿಡೋಣ. ಒಟ್ಟಿನಲ್ಲಿ ಆ ಸಿದ್ಧರಾಮಯ್ಯ ತಲೆ ಎತ್ತಬಾರದು" ಎಂದು ಯೋಚಿಸುತ್ತ ಈ ಬಗ್ಗೆ ಇನ್ನೂ ದತ್ತನೊಂದಿ[...] ಮಾತನಾಡಿಲ್ಲವಂತಲ್ಲಾ, ಥೂತ್ತೇರಿ!!!

* * * * * * * *



ಸಿದ್ಧರಾಮಯ್ಯನ ಜನ ಸಿದ್ಧರಾಮಯ್ಯನ ವಿರುದ್ಧವೇ ತಿರುಗಿ ಬೀಳು[...] ಮಾಡಬೇಕೆಂದು ಯೋಚಿಸುತ್ತಿರುವ ಕುಮಾರಸ್ವಾಮಿ "ಇನ್ನು ಮು[...] ಕುರುಬರ ಊರಿಗೆ ಹೋಗಿ [...] ಮಲಗಿದ್ದು ಬರುತ್ತೇನೆ" ಎಂ[...] ಮಂಡ್ಯ ಜಿಲ್ಲೆಯ ಬೇವುಕಲ್[...] ಸೆಲೆಕ್ಟ್ ಮಾಡಿದರಂತ[...] ಇದರಿಂದ ಗಲಿಬಿಲಿಯಾದ ಚೀ[...] ರಾಯಸ್ವಾಮಿ "ಅಯ್ಯೋ, ಆ ಬೀ[...] ಕಲ್ನ ಕುರುಬರಿಗಿಂತ ಹರಿಜನ[...] ವಾಸಿ ಸಾ. ಅವುರ ಮನೇಲೇನಾ[...] ಉಳಕೊಳೊದಾದ್ರೆ, ಇಡೀ ಮ[...] ನಮ್ಮ ಅಧಿಕಾರಿಗಳು ಮೂರು [...] ಕ್ಲೀನ್ ಮಾಡಬೇಕು, ಅಷ್ಟೋ[...] ಆಡು ಕುರಿ ಕುಂಚು ವಾಸ[...] ಎಂದನಂತಲ್ಲಾ, "ಅದೆಲ್ಲಾ ನ[...] ಅಭ್ಯಾಸದೆ. ನಮ್ಮ ರೇವಣ್ಣನ ಜೊ[...] ಮನಗಿದಾಗ ನನಿಗೆ ಅಂತದೇ ವಾ[...] ಬಂದು ತಡಕಂಡಿದ್ದಿನಿ" ಎಂ[...] ಕುಮಾರಸ್ವಾಮಿ ಬೇವುಕಲ್ಲ[...] ಮುಖ ಮಾಡಿದರಂತಲ್ಲಾ, ಬೇವುಕಲ್ಲಿನ ಕುಟುಂಬಗಳೂ ಕ[...] ಕುಮಾರಣ್ಣನ ಐದು ಸಾ[...] ರೂಪಾಯಿ ಚೆಕ್ ಕಾಯು[...] ಕುಂತಿವೆಯಂತಲ್ಲಾ, ಥೂತ್ತೇರಿ[...]

* * * * * * * *

ಕಾಂಗ್ರೆಸ್ಸನ್ನು ಕಾಡಿ[...] ಪೂಜಾರಿಯಂತೆ ಬಜೆಪಿಯ[...] ಕಾಡಿಸುತ್ತಿರುವ ಸದಾನಂದ ಗ[...] ರನ್ನು ಮಾತನಾಡಿಸಿದರೆ [...]

ಕಳೆದ 90ರ ದಶಕದಲ್ಲಿ ಸಾಮ್ರಾಜ್ಯಶಾಹಿ ಶೋಷಣೆಯನ್ನು ನಯವಾಗಿ ಮುಂದುವರಿಸಲಾಯಿತು. ಈಗ ಇಡಿಯಾಗಿ ಶಿಕ್ಷಣ ವ್ಯವಸ್ಥೆಯನ್ನು ನೇರವಾಗಿ ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ, ಸಾಮ್ರಾಜ್ಯಶಾಹಿ ಶೋಷಣೆಗೆ ತೆರೆದಿಟ್ಟಿದ್ದಾರೆ. ಪರಿಣಾಮವಾಗಿ ಅವರ ನಿರ್ದೇಶನಗಳನ್ನು ಶಿಕ್ಷಣದಲ್ಲಿ ಜಾರಿಮಾಡುವ ಜರೂರಿಗೆ ಆಳುವ ವರ್ಗ ಒಳಗಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭ ಜಾಸ್ತಿಯಾಗಬೇಕಾದರೆ ಅವರು ಕೊಡುವ ಕೂಲಿ ಅತ್ಯಂತ ಕಡಿಮೆಯಾಗಬೇಕು. ಹರುಕುಮುರುಕು ಇಂಗ್ಲಿಷ್ ಕಲಿತವರು ಅತ್ಯಂತ ಕಡಿಮೆ ಕೂಲಿಗೆ ದುಡಿಯುತ್ತಾರೆ. ಇಂಗ್ಲಿಷನ್ನು ಮಾಧ್ಯಮ ಮಾಡಿ ಎಂಬ ಇನ್‌ಫೋಸಿಸ್ ನಾರಾಯಣ ಮೂರ್ತಿ ಹೇಳಿಕೆಯಲ್ಲಿ ಇದೇ ಸ್ಪಷ್ಟ ಹುನ್ನಾರ ಅಡಗಿದೆ. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗಿನ ಸಮಾಜ ಕಲ್ಯಾಣ ರೂಪದ ಎಲ್ಲ ಧನ ಸಹಾಯವನ್ನು ಸರಕಾರಗಳು ಬಹುತೇಕ ನಿಲ್ಲಿಸಿವೆ; ಮುಂದೆ ಸಂಪೂರ್ಣ ನಿಲ್ಲಿಸುವ ಸ್ಥಿತಿ ತಲುಪಿವೆ. ಇನ್ನು ಮುಂದೆ ದಲಿತ ಬಡಮಕ್ಕಳ ಹಾಸ್ಟೆಲ್‌ಗಳು ಬಂದ್ ಆಗುತ್ತವೆ. ಶಿಕ್ಷಣದಲ್ಲಿದ್ದ ಮೀಸಲಾತಿ ಬಂದ್ ಆಗುತ್ತದೆ. 'ಬಾ ಮರಳಿ ಶಾಲೆಗೆ', ವಯಸ್ಕರ ಶಿಕ್ಷಣ, ಸರ್ವಶಿಕ್ಷಣ ಅಭಿಯಾನ ಮುಂತಾದ ವಿಶ್ವಬ್ಯಾಂಕ್ ಮತ್ತು ಐಎಂಎಫ್‌ನ ನೇರ ಕಾರ್ಯಕ್ರಮಗಳು ಶಿಕ್ಷಣದ ಬಗ್ಗೆ ಇನ್ನಿಲ್ಲದ ಭ್ರಮೆಗಳನ್ನು ಈಗಾಗಲೆ ಹುಟ್ಟುಹಾಕಿವೆ. ಕಳೆದ 90ರ ದಶಕದಲ್ಲೆ ಐಎಂಎಫ್ ನಿರ್ದೇಶನದಂತೆ ಶಿಕ್ಷಣ ಕ್ಷೇತ್ರವನ್ನು 'ಅನುತ್ಪಾದಕ ಕ್ಷೇತ್ರ'ವೆಂದು ತೀರ್ಮಾನಿಸಲಾಗಿದೆ. ಪರಿಣಾಮವಾಗಿ ಶಿಕ್ಷಣ ಎಂಬುದು ಈಗ ಬಂಡವಾಳ ಹಾಕಿ ಬಂಡವಾಳ ವೃದ್ಧಿಸಿಕೊಳ್ಳುವ ಅಗ್ಗದ ಕ್ಷೇತ್ರವಾಗಿದೆ. ಔಷಧಿ, ಕುಡಿಯುವ ನೀರು ಮತ್ತು ಶಿಕ್ಷಣ ಇವು ಈ ಕಾಲದ ಪ್ರಧಾನ ಲಾಭದ ಇಂಡಸ್ಟ್ರಿಗಳು. ಶಿಕ್ಷಣ ಎಂಬುದು 'ಕಲಿಯುವ ಮತ್ತು ಕಲಿಸುವ ಕ್ಷೇತ್ರ' ಎಂದು ಭಾವಿಸುವ ಕಾಲ ಮುಗಿದು ಹೋಗಿದೆ. ಈಗ ಏನಿದ್ದರೂ ಅದು ಇಂಡಸ್ಟ್ರಿ. ಈ ಕ್ರೂರ ಸತ್ಯಗಳನ್ನೆಲ್ಲ ಮುಚ್ಚಿಟ್ಟು ಇಂಗ್ಲಿಷ್ ಕಲಿಸುವುದರಿಂದ, ಅದನ್ನು ಮಕ್ಕಳು ಕಲಿಯುತ್ತಾರೆ; ಆದರಿಂದ ಸ್ವರ್ಗ ಭೂಮಿಗೆ ಬರುತ್ತದೆ ಎಂದು ಸಂಭ್ರಮ ಪಡುವುದು ಸಮಾಜದ ಬಗೆಗಿನ ಅಜಾಗೃತ ಮನಸ್ಥಿತಿಯ ಸೂಚನೆ ಅಷ್ಟೆ. ಹಾಗಾಗಿ ಇಂಗ್ಲಿಷ್ ಕಲಿಸುವ ಯೋಜನೆ ನಿಜವಾಗಲೂ ಜನತೆಯ ಹಿತಾಸಕ್ತಿಯಿಂದ ಹುಟ್ಟಿಲ್ಲ, ಅಂದರೆ ಒಂದನೆ ತರಗತಿಯಿಂದಲೆ ಇಂಗ್ಲಿಷ್ ಕಲಿಸುವ ಯೋಜನೆಯ ಹಿಂದಿರುವ ಉದ್ದೇಶ ಇಂಗ್ಲಿಷ್ ಕಲಿಸಬೇಕು ಎಂಬುದಲ್ಲ, ವರ್ತಮಾನದಲ್ಲಿ ಯಾರು ಯಾರು ತಮ್ಮತಮ್ಮ ಕಷ್ಟ ಸಂಕಟಗಳಿಗಾಗಿ ಆಳುವ ವರ್ಗದ ವಿರುದ್ಧ ಆಸಹನೆಗೊಂಡಿದ್ದಾರೊ, ಅಂತಹವರ ಅಸಹನೆ ಮತ್ತು ಆಕ್ರೋಶವನ್ನು ಶಮನಗೊಳಿಸುವುದಾಗಿದೆ.

ಇಂಗ್ಲಿಷ್ 'ಕಲಿಸುವುದನ್ನು' ಕಡ್ಡಾಯಗೊಳಿಸುವುದರಿಂದ ಯಾರಿಗೆ ಲಾಭವಾಗುತ್ತದೆ? ಹೇಗೆ ಲಾಭವಾಗುತ್ತದೆ? ಯಾರಿಗೆ ನಷ್ಟವಾಗುತ್ತದೆ? ಹೇಗೆ ನಷ್ಟವಾಗುತ್ತದೆ? ಎಂಬುದನ್ನು ಸ್ಪಷ್ಟವಾಗಿ ಬಿಡಿಸಿ ಹೇಳಬೇಕಾಗಿದೆ. ಇದರಿಂದ ಆಳುವ ವರ್ಗವು ರೈತ, ಕಾರ್ಮಿಕ, ವಿದ್ಯಾರ್ಥಿ ಯುವಜನರು, ಅದರಲ್ಲೂ ಶೋಷಿತ, ವಂಚಿತ ಮತ್ತು ನಿರುದ್ಯೋಗಿಗಳಿಂದ ತನ್ನ ಮೇಲೆ ಬರುವ ಒತ್ತಡದಿಂದ ತಪ್ಪಿಸಿಕೊಳ್ಳುತ್ತದೆ. ಇದು ಆಳುವ ವರ್ಗಕ್ಕೆ ಆಗುವ ಭಾರೀ ಲಾಭ. 'ಒಂದನೆ ತರಗತಿಯಿಂದಲೇ ಇಂಗ್ಲಿಷ್ ಕಲಿತ ನಮ್ಮ ಮಕ್ಕಳು ಮುಂದೆ ಇಂದ್ರನ ನಂದನವನದಲ್ಲಿ ನಲಿಯುತ್ತಾರೆ' ಎಂದು ಭ್ರಮಿಸಿ ತಮ್ಮ ಇವತ್ತಿನ ತುತ್ತು ಅನ್ನದ ಪ್ರಶ್ನೆಯನ್ನು ಮರೆಯುವ ಹುನ್ನಾರಕ್ಕೆ ಒಳಗಾಗುವ ನಷ್ಟ ನಾಡಿನ ನತದೃಷ್ಟರದು. ●

ಅನ್ನಿಸಿತು. ಕೂಡಲೇ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ ಯಾರು ಮಾತನಾಡುವುದು? ಬೇಗ ಹೇಳಿ ನನಗೆ ಸಮಾ ಕೆಲಸವುಂಟು."

"ನಾನು ಯಾಹೂ ಅಂತ ಪತ್ರಕರ್ತ ಸಾರ್."

"ನಿಮಗೆ ವಂದನೆಗಳು. ದತ್ತಪೀಠದ ವಿಷಯದಲ್ಲಿ ನಮಗೆ ತುಂಬ ಸಪೋರ್ಟು ಮಾಡಿದಿರಿ."

"ಹೌದು ಸಾರ್, ಒಂದು ವಾರ ಪತ್ರಿಕೆ ಮುಖ ಪುಟ ಕೇಸರಿಮಯ ವಾಗಿರಂಗೆ ನೋಡಿಕೊಂಡೊ."

"ಇಷ್ಟಕ್ಕೆ ಮುಗಿಯಲಿಲ್ಲ, ಮತ್ತೆ ಡಿಸೆಂಬರಿನಲ್ಲಿ ಉಂಟು. ಆಗಲೂ ನೀವು ಹೀಗೇ ಕೋ ಆಪರೇಟ್ ಮಾಡಬೇಕು, ಆಯ್ತಾ?"

"ಆಗ್ಲಿ ಸಾರ್. ಆ ದಿನ ನೀವು ಸೀಟಿ ರವಿ ಜೊತೆ ಕಷಾಯ ವಸ್ತ್ರಧಾರಿಯಾಗಿ ನಿಂತದ್ದು ನೋಡಿ ನನಗೆ ನಿಜಕ್ಕೂ ರಾಮಲಕ್ಷ್ಮಣರನ್ನು ನೋಡಿ ದಂಗಾಯ್ತು ಸಾರ್."

"ನನಗೂ ಅಷ್ಟೇ ಸಂತೋಷವಾಯ್ತು. ಆ ವೇಷದಲ್ಲಿ ನಾನು ನನ್ನನ್ನು ನೋಡಿಕೊಂಡಿರಲಿಲ್ಲ, ಇನ್ನು ಮುಂದೆ ಪದೇಪದೇ ಚಿಕ್ಕಮಗಳೂರಿಗೆ ಹೋಗಿ ಕಾಷಾಯವಸ್ತ್ರಧಾರಿಯಾಗಿ ದತ್ತಪೀಠಕ್ಕೆ ಹೋಗಿ ಬರ್ತೇನೆ."

"ನಿಮ್ಮ ಜೊತೆಲಿರೊ ಪಾರ್ಟಿ ತಕರಾರು ತೆಗೆದ್ರೆ?"

"ಅವರ ಅಜೆಂಡವನ್ನು ಅವರು ಪಾಲಿಸಲಿ, ನಮ್ಮ ಅಜೆಂಡವನ್ನು ನಾವು ಪಾಲಿಸುತ್ತೇವೆ."

"ಅಂದರೆ?"

"ಅಂದರೆ, ದತ್ತಮಾಲೆ ಅಭಿಯಾನ ನಮ್ಮ ಅಜೆಂಡ. ಅರೆಸ್ಟು ಮಾಡಿ ಕೈ ಬಿಡುವುದು ಅವರ ಅಜೆಂಡ. ಇದರಿಂದ ಯಾರಿಗೂ ತೊಂದರೆಯಿಲ್ಲ, ಅವರ ಪಾರ್ಟಿ ಬೆಳೆಯಲಿಕ್ಕೆ ಅವರು ಹಾಕಿಕೊಳ್ಳುವ ಕಾರ್ಯಕ್ರಮಕ್ಕೆ ನಮ್ಮ ಅಡ್ಡಿಯಿಲ್ಲ, ಹಾಗೆ, ನಮ್ಮ ಕಾರ್ಯಕ್ರಮಗಳಿಗೆ ಅವರು ಅಡ್ಡಿಪಡಿಸುವುದಿಲ್ಲ, ಒಂದು ರೀತಿ ಅಗೋಚರದ ಸಮನ್ವಯದ ಕಾರ್ಯಾಚರಣೆ ನಮ್ಮಲ್ಲುಂಟು. ಇದರಿಂದ ಉಭಯ ಪಾರ್ಟಿಗಳಿಗೂ ಒಳ್ಳೆಯದಾಗುವುದುಂಟು. ಹಾಗೆ ಕರ್ನಾಟಕದ ಜನರಿಗೂ ಒಳ್ಳೆಯದಾಗುವುದುಂಟು, ಅಲ್ಲವೆ ನೀವೆ ಹೇಳಿ?"

"ಥೂತ್ತೇರಿ!!!"

-ಯಾಹೂ



ಮೂರು ಜಡೆಗಳ ಮಧ್ಯೆ ಗೆದ್ದೆ...

"ಏನ್ರೀ ಸುರೇಶ್, ಮೂರ ಜಡೆಗಳ ಮಧ್ಯೆ ಅದ್ಹೇಗೆ ಸಿನಿಮಾ ಮಾಡಿ ಮುಗಿಸಿದಿರಿ? ಕವಿತಾ ಲಂಕೇಶ್, ರಮ್ಯ, ರಕ್ಷಿತಾ ಎಲ್ಲರೂ ಸ್ಟ್ರಾಂಗೇ! ಎಲ್ಲರೂ ಹಠಮಾರಿಗಳೇ... ಅದ್ಹೇಗೆ ಸಿನಿಮಾ ಕಂಪ್ಲೀಟ್ ಮಾಡಿದಿರೊ?"

-ಇದು ನನ್ನ ಪರಿಚಯಸ್ಥ ರಾಜಕಾರಣಿಗಳು, ಐಎಎಸ್ ಆಫೀಸರುಗಳಿಂದ ಹಿಡಿದು ದಾರಿಯಲ್ಲಿ ಹೋಗೋ ಪಡ್ಡೆ ಹುಡುಗರು ಕೇಳುವ ಪ್ರಶ್ನೆ!

ಅಂತೂ ಬುದ್ಧಿ ಉಪಯೋಗಿಸಿ ಬ್ಯಾಲನ್ಸ್ ಮಾಡಿಕೊಂಡು ಬಂದೆ... ನಾ ಹೇಗೆ ಬ್ಯಾಲನ್ಸ್ ಮಾಡಿದೆ ಗೊತ್ತಾ? ಶೂಟಿಂಗ್ ಸ್ಪಾಟ್‌ನಿಂದ 100 ಕಿ.ಮೀ. ದೂರ ಇರ್‍ತಾ ಇದ್ದೆ. ರಮ್ಯಾ, ರಕ್ಷಿತಾರ ಒಣ ಜಗಳಗಳನ್ನು ಕವಿತಾ ನಿಭಾಯಿಸುತ್ತಿದ್ದರು. ಕವಿತಾರವರು ತುಂಬಾ ಪ್ರೊಫೆಷನಲ್ ಮತ್ತು ಡೆಡಿಕೇಟೆಡ್ ಆಗಿರುವುದರಿಂದಲೇ ಇದೆಲ್ಲ ಸಾಧ್ಯವಾಗಿದ್ದು.... ಅವರು ಅಷ್ಟೇ ಸ್ಟ್ರಿಕ್ಟ್ ಕೂಡಾ!

ನಾನವರನ್ನು 'ಬೆಳಿಗ್ಗೆ 10 ಗಂಟೆ ಡೈರೆಕ್ಟ್ರು' ಅಂತಾ ಕರೀತಾ ಇದ್ದೆ. ಸಿನಿಮಾ ಕುರಿತು ಚರ್ಚಿಸಲು ಉಳಿದೆಲ್ಲ ನಿರ್ದೇಶಕರಿಗೆ ಬೆಳಿಗ್ಗೆ ಎಂಟಕ್ಕೇ ಫೋನ್ ಮಾಡುತ್ತಿದ್ದ ನನಗೆ ಕವಿತಾರ ಬಳಿ ಅದು ಸಾಧ್ಯವಾಗಲೇ ಇಲ್ಲ. ಶೂಟಿಂಗ್ ವೇಳೆ ಆರಕ್ಕೆ ಹಾಜರಿದ್ದು, ಕಾಲ್ ಅಟೆಂಡ್ ಮಾಡೋರು ಶೂಟಿಂಗ್ ಇಲ್ಲದ ವೇಳೆ ಅವರು ಮನೆಯಲ್ಲಿದ್ದಾಗ, ಎಂಟಕ್ಕೆಲ್ಲಾ ಕಾಲ್ ಮಾಡಿದರೆ ಗದರಿ ಬಿಡೋರು. ಬೆಳಿಗ್ಗೆ ಹತ್ತು ಗಂಟೆ ನಂತರವೇ ಅವರು ಫೋನಲ್ಲಿ ಚರ್ಚೆಗೆ ಸಿಗುತ್ತಿದ್ದರು. ಅವರ ಪುಟಾಣಿ ಇಶಾ ಜೊತೆಗೆ ಆಡುವ, ಅವಳನ್ನು ಸ್ಕೂಲ್‌ಗೆ ರೆಡಿ ಮಾಡುವ ಸಂಭ್ರಮದಲ್ಲಿರುತ್ತಿದ್ದ ಅವರನ್ನು disturb ಮಾಡಬಾರದೆಂದು ನಾನೇ ಹತ್ತರ ನಂತರ ಕಾಲ್ ಮಾಡುತ್ತಿದ್ದೆ.

ಅದೆಲ್ಲ ಇರಲಿ, ಮೂರು ಜಡೆಗಳ ಮಧ್ಯೆ ಸಿನಿಮಾ ಮಾಡಿ ಮುಗಿಸಿದ್ದ ಕ್ಕಾಗಿಯಾದರೂ ನನಗೊಂದು ಸ್ಪೆಷಲ್ ಅವಾರ್ಡು ಕೊಡಲೇಬೇಕಲ್ಲವೇ? ಚಿತ್ರತಂಡಕ್ಕೆ ಬೇಕಾದ್ದನ್ನೆಲ್ಲ ನಾನು ಪೂರೈಸುತ್ತಾ ಹೋದೆ. ಶಿಸ್ತಿನ ನಿರ್ದೇಶಕಿ, ಪ್ರೊಫೆಷನಲ್ ಕಲಾವಿದರು, ಟೆಕ್ನಿಷಿಯನ್‌ಗಳೆಲ್ಲ ಶ್ರಮ ವಹಿಸಿ ಬ್ಯೂಟಿಫುಲ್ ಪ್ರಾಡಕ್ಟ್ ರೆಡಿ ಮಾಡಿದ್ದಾರೆ.... ಅದು ಆಡಿಯೋದ ಮೂಲಕ ನಿಮ್ಮನ್ನಾಗಲೇ ತಲುಪಿರುವ 'ತನನಂ ತನನಂ'..... ಈಗ ಸರಿಯಾಗಿ ಪ್ಲಾನ್ ಮಾಡಿ ಬಿಡುಗಡೆ ಮಾಡುವುದು ನನ್ನ ಕೆಲಸ..


ಒಂದಿಷ್ಟು ಫ್ಲಾಶ್‌ಬ್ಯಾಕ್ ಸಹ ಹೇಳಬೇಕೆನಿಸುತ್ತಿದೆ. ನಾನು ಈ ಚಿತ್ರರಂಗಕ್ಕೆ ಬಂದಿದ್ದೇ ಆಕಸ್ಮಿಕವಾಗಿ! ಯಾರೋ ಒಬ್ಬರು 'ಸಿನಿಮಾ ಮಾಡೋದು ತುಂಬಾ ಕಷ್ಟ' ಅಂತಾ ವಾದಿಸಿದ್ರು. ನೋಡೇ ಬಿಡೋಣ ಎಂದು ತಯಾರಾದೆ. ಒಂದು ವರ್ಷ ಈ ಚಿತ್ರರಂಗವನ್ನು ಸ್ಟಡಿ ಮಾಡಿದೆ. ಅದನ್ನು ಒಂದು ರೀತಿ R&D ವರ್ಕ್ ಎನ್ನಬಹುದು ಬಿಡಿ! ಹನುಮಂತು ಎನ್ನುವ ನನ್ನ ಮಿತ್ರರ ಮೂಲಕ ಪ್ರೇಮ್ ಪರಿಚಯವಾಯ್ತು. ತುಂಬಾ ಹಾರ್ಡ್ ವರ್ಕಿಂಗ್ ನಿರ್ದೇಶಕ ಅನಿಸ್ತು. ಗಾಂಧಿನಗರದ ಸೂತ್ರಗಳನ್ನು ನೆಚ್ಚದೇ, ವ್ಯವಸ್ಥಿತ ಪ್ಲಾನ್‌ನೊಂದಿಗೆ, ಕಾರ್ಪೊರೇಟ್ ಶಿಸ್ತಿನೊಂದಿಗೆ, ಸ್ಟೈಲಿನೊಂದಿಗೆ 'ಎಕ್ಸ್‌ಕ್ಯೂಸ್ ಮಿ' ನಿರ್ಮಿಸಿದೆ.

'ಎಕ್ಸ್‌ಕ್ಯೂಸ್ ಮಿ'ಗೆ ನಾವು ಮಾಡಿದ ಪಬ್ಲಿಸಿಟಿ ಎಷ್ಟೊಂದು ವೈಭವವಾಗಿತ್ತೆಂದರೆ ಅದಕ್ಕೂ ಹಿಂದಿನ ಐದು ವರ್ಷಗಳಲ್ಲಿ ಅಂತಹ ಪ್ರಚಾರ ನಡೆದಿರಲಿಲ್ಲ. ಮೊದಲ ಬಾರಿಗೆ ವಿನೈಲ್ ಬೋರ್ಡ್‌ಗಳು ಎಲ್ಲ ಕಡೆ ಮಿಂಚಿದ್ದವು. ಚಿತ್ರ ಸಿಲ್ವರ್ ಜ್ಯೂಬಿಲಿ ಸಂಭ್ರಮ ಕಂಡಿತ್ತು. ಕಪಾಲಿಯಲ್ಲಿ ಒಂದು ವರ್ಷ steady ಕಲೆಕ್ಷನ್ ಮಾಡುತ್ತಾ 'ಎಕ್ಸ್‌ಕ್ಯೂಸ್ ಮಿ' ದಾಖಲೆ ಮಾಡಿತ್ತು. ಮುಂಬೈನಲ್ಲಿ ಡಿಡಿಎಲ್‌ಜೆ ಒಂದು ವರ್ಷ ಪೂರೈಸಿದಂತೆ ಇಲ್ಲೂ ಆಗಿತ್ತು! 'ಎಕ್ಸ್‌ಕ್ಯೂಸ್ ಮಿ'ಯನ್ನು ನಾನೇ ವಿತರಿಸುವ ಜವಾಬ್ದಾರಿ ಹೊತ್ತು ಗೆದ್ದಿದ್ದೆ.

ಚಿತ್ರರಂಗಕ್ಕೂ ಬರುವ ಮೊದಲು ಫೈಬರ್ ಮೆಟೀರಿಯಲ್ಸ್ ಸಪ್ಲೈ ಮಾಡುತ್ತಿದ್ದೆ. ಗ್ರಾಮೀಣ ಪ್ರದೇಶಗಳ ಆಧುನಿಕ ಶೌಚಾಲಯ ನಿರ್ಮಾಣಕ್ಕೆ ಈ ಫೈಬರ್ ಮೆಟೀರಿಯಲ್ ಸಪ್ಲೈ ಆಗುತ್ತಿತ್ತು. ಆಗ ಮಲ್ಲೇಶ್ವರ ಕೋ-ಆಪ್ ಬ್ಯಾಂಕಿನ ನಿರ್ದೇಶಕನಾಗಿದ್ದ ನಾನು ಇಂದು ಅದರ ಚೇರ್ಮನ್. ನಂತರ 'ಚಪ್ಪಾಳೆ'ಯನ್ನು ಶ್ರದ್ಧೆಯಿಂದಲೇ ನಿರ್ಮಿಸಿದೆ. ಹಾಡು, ಸಂಗೀತ ಎಲ್ಲವೂ ಸೂಪರ್ ಆಗಿದ್ದವು. ಆದರೆ ಕತೆಯಲ್ಲಿ ಎಡವಿದ್ದರಿಂದ ಚಿತ್ರ ಕೈಕೊಟ್ಟಿತು. ನಂತರ ನಿರ್ದೇಶಕ, ಸಂಗೀತ ನಿರ್ದೇಶಕ, ಕ್ಯಾಮರಾಮನ್, ನಾಯಕ, ನಾಯಕಿ, ಹೀಗೆ ಹೊಸಬರೇ ತುಂಬಿದ್ದ 'ಸೆವೆನ್ ಓ ಕ್ಲಾಕ್' ಮಾಡಿದೆ. ಪ್ಲಾನಿಂಗ್ ಇಲ್ಲದೇ, ಬಿಡುಗಡೆಯ ಗೊಂದಲದಲ್ಲಿ ಫುಲ್ ಫ್ಲಾಪ್ ಆಯ್ತು, ಅದೇ ಹೊತ್ತಿಗೆ ತೆಲುಗಲ್ಲಿ ಒಂದು ಚಿತ್ರ ಕೈಕೊಟ್ಟಿತ್ತು.

ಕವಿತಾ ಲಂಕೇಶ್ ಸಂಪರ್ಕವಾಗಿದ್ದು ಹೇಗೆ? ಅದೂ ಆಕಸ್ಮಿಕವೇ. 'ಸೆವೆನ್ ಓ ಕ್ಲಾಕ್' ಪೂಜೆಗೆಂದು ಬೆಳಗೂರು ಆಂಜನೇಯ ಸ್ವಾಮಿ ಮಠಕ್ಕೆ ಹೋಗಿದ್ದೆ, ಅಲ್ಲಿನ ಸ್ವಾಮೀಜಿ ಮುಂದಿನ ಚಿತ್ರವನ್ನು ರಂಗಭೂಮಿ ಕುರಿತು ಮಾಡಲು ಹೇಳಿದ್ದರು. ಇನ್ನೂ 'ಸೆವೆನ್ ಓ ಕ್ಲಾಕ್' ರಿಲೀಸ್‌ಗೆ 20 ದಿನ ಇತ್ತು. ಆಗಲೇ ನಾನು 'ರಂಗಭೂಮಿ' ಟೈಟಲ್ ರಿಜಿಸ್ಟರ್ ಮಾಡಿಸಿಬಿಟ್ಟಿದ್ದೆ. ಒಮ್ಮೆ ಆಕಸ್ಮಿಕವಾಗಿ ಸಿಕ್ಕ ರಾಜೇಂದ್ರಕುಮಾರ್ ಆರ್ಯಗೆ 'ರಂಗಭೂಮಿ' ಟೈಟಲ್ಲು ಕುರಿತು ಕೇಳಿ 'ತನನಂ ತನನಂ' ಟೈಟಲ್ಲು ನಮಗೆ ಸಿಕ್ಕಿದ್ದರೆ ಒಳ್ಳೇದಿತ್ತು ಎಂದೆ. 'ನಿಮಗೆ ರಂಗಭೂಮಿ ಹಿನ್ನೆಲೆಯ ಸಿನಿಮಾ ಮಾಡಲು ನಿಜವಾಗಿಯೂ ಆಸಕ್ತಿ ಇದೆಯಾ' ಎಂದು ಕೇಳಿದ ಆರ್ಯ ಅವರು ನನ್ನ ಆಸಕ್ತಿ ನೋಡಿ ಕವಿತಾ ಲಂಕೇಶ್ ಹೆಸರು ಹೇಳಿದರು. ಕವಿತಾರಿಗೆ ಒಳ್ಳೆ ಹೆಸರಿದ್ದುದು ನನಗೆ ಗೊತ್ತಿತ್ತು. ಆಫ್‌ಬೀಟ್ ಚಿತ್ರಗಳ ಜೊತೆ 'ಪ್ರೀತಿ ಪ್ರೇಮ ಪ್ರಣಯ'ದಂತಹ ಫ್ರೆಶ್ ಕಮರ್ಷಿಯಲ್ ಹಿಟ್ ಚಿತ್ರ ಸಹ ನೀಡಿದ್ದು ಅವರ ಬಗ್ಗೆ ಗೌರವ ಮೂಡಿಸಿತ್ತು. ಕೆ. ಮಂಜು ಸೇರಿದಂತೆ ಇಬ್ಬರು, ಮೂವರು ನಿರ್ಮಾಪಕರು 'ತನನಂ ತನನಂ' ನಿರ್ಮಿಸಲು ಮುಂದಾಗಿದ್ದರು.

ಕೊನೆಗೂ ಕವಿತಾ ಲಂಕೇಶ್‌ರನ್ನು ಭೇಟಿ ಆದಾಗ ಅವರು ಒನ್‌ಲೈನ್ ಸ್ಟೋರಿ ಹೇಳಿದರು. ಆ ಕ್ಷಣವೇ ಆ



ಸ್ಟೋರಿ ನನಗೆ ಹಿಡಿಸಿಬಿಟ್ಟಿತು. ಹಿಂದೆಮುಂದೆ ನೋಡದೇ ಮುಹೂರ್ತ ಮಾಡಿಯೇಬಿಟ್ಟೆ. ಸಂಗೀತ ನಿರ್ದೇಶನಕ್ಕೆ ಕೆ. ಕಲ್ಯಾಣ್‌ರನ್ನು ಕವಿತಾ ಮೇಡಮ್ ಆರಿಸಿದಾಗ ನನಗೆ ಮೊದಲಿಗೆ ನಿಜಕ್ಕೂ ಭಯವಾಗಿತ್ತು. ಆದರೆ ಕವಿತಾರವರು 'ನೀವು ಸುಮ್ನಿರಿ..... ಅವರೇ ಸಾಹಿತ್ಯ ರಚಿಸಿರುವುದರಿಂದ ಸಂಗೀತವನ್ನು ಚೆನ್ನಾಗಿ ಮಾಡ್ತಾರೆ' ಎಂದು ನನ್ನನ್ನು ಸುಮ್ಮನಾಗಿಸಿದರು. ಹೀರೋ ಹೀರೋಯಿನ್, ಟೆಕ್ನಿಷಿಯನ್‌ಗಳೆಲ್ಲರ ಆಯ್ಕೆಯಲ್ಲೂ ನಾನು ತಲೆ ತೂರಿಸಲಿಲ್ಲ, ಎಲ್ಲವೂ ಕವಿತಾರ ಅರ್ಥಪೂರ್ಣ ಆಯ್ಕೆಗಳೇ. ರಕ್ಷಿತಾಳನ್ನು ಒಪ್ಪಿಸಿ, ಅವಳ ಸಂಭಾವನೆಯನ್ನು ಕವಿತಾರೇ ನಿಗದಿಗೊಳಿಸಿದರು. ರಮ್ಯಾ ಸ್ವಲ್ಪ 'ಅಂ, ಊಂ' ಅಂದಿದ್ದರಿಂದ ರಮ್ಯಾ ಸಂಭಾವನೆ ವಿಷಯವನ್ನು ನಾನೇ ಕ್ಲಿಯರ್ ಮಾಡಿದೆ. ಆಗ ಕವಿತಾರವರು 'ಯಾಕೆ ಹೆಚ್ಚಿಗೆ ಖರ್ಚು?' ಎಂದಿದ್ದರು. ಗಿರೀಶ್ ಕಾರ್ನಾಡ್, ಭಾರತಿ ವಿಷ್ಣುವರ್ಧನ್, ಡಾ. ಎಲ್.ಎಸ್.ರ ವಿಚಾರದಲ್ಲಿ ನಮ್ಮಂತಹವರೇನು ಬಾರ್ಗೇನ್ ಮಾಡೋದಿದೆ? ಗೌರವದಿಂದ ಎಲ್ಲವನ್ನು ಒಪ್ಪಿಕೊಂಡೆ. ಅದಕ್ಕೆ ಕಾರಣ ಕವಿತಾ ಲಂಕೇಶರ ಮೇಲಿನ ವಿಶ್ವಾಸ.... ಶ್ಯಾಮ್ ಹೊಸ ಫೇಸ್ ಎಂಬುದೂ ಆರಂಭದಲ್ಲಿ ನನಗೆ ಭಯ ಹುಟ್ಟಿಸಿತ್ತು. ಆದರೆ ಚಿತ್ರ ಮುಗಿದಾಗ ಆತನ ಆಕ್ಟಿಂಗ್ ನನಗೆ ಮೆಚ್ಚುಗೆ ಆಗಿಬಿಟ್ಟಿತು. ಬೇರೆ ಹೀರೋಗಳು ಅದಕ್ಕೆ ಒಪ್ಪುತ್ತಿರಲಿಲ್ಲ ಎಂದು ಮನದಟ್ಟಾಗಿತ್ತು. ರಮ್ಯಾ, ರಕ್ಷಿತಾರ ಮನೋಜ್ಞ ಅಭಿನಯ, ಗ್ಲಾಮರ್‌ಗಳ ಸಂಗಮದಲ್ಲಿ 'ತನನಂ ತನನಂ' ಚೆನ್ನಾಗಿ ಮೂಡಿಬಂದಿದೆ. ಸುಮಾರು ಎರಡೂವರೆ ಕೋಟಿ ಹಾಕಿ ರಿಸ್ಕ್ ತೆಗೆದುಕೊಂಡಿದ್ದೇನೆ. Making a movie is not a joke.... ಯಾವುದನ್ನೂ ನಾನು ಕಾಟಾಚಾರಕ್ಕೆ ಮಾಡಿಲ್ಲ... ಶ್ರದ್ಧೆಯಿಂದ ಮಾಡಿದ್ದೇನೆ. ಸ್ಟ್ರೇಟ್ ಫಾರ್ವರ್ಡ್ ಕವಿತಾರವರು ಎಲ್ಲೂ ಕಾಂಪ್ರಮೈಸ್ ಆಗದೇ ತಮಗನ್ನಿಸಿದಂತೆಯೇ ಚಿತ್ರ ಮಾಡಿದ್ದಾರೆ. 'ತನನಂ ತನನಂ'ನ ಆಡಿಯೋ ಈಗಾಗಲೇ ಭರದಿಂದ ಮಾರಾಟವಾಗುತ್ತಾ ಜನರ ಮೆಚ್ಚುಗೆ ಗಳಿಸುತ್ತಿದೆ.

ಹಿಂದಿಯ ರಾಜಶ್ರೀ ಬ್ಯಾನರ್‌ನಂತೆ ಇಲ್ಲಿ ನಮ್ಮ ತುಳಜಾ ಭವಾನಿ ಬ್ಯಾನರ್‌ಗೆ ಒಳ್ಳೆ ಹೆಸರಿದೆ. ಕವಿತಾ ಲಂಕೇಶ್‌ರ ಪ್ರತಿಭೆ ಬಗ್ಗೆ ಕನ್ನಡಿಗರಿಗೆ ವಿಶ್ವಾಸವಿದೆ. ಕವಿತಾರಿಗೊಂದು ಇಮೇಜ್ ಇದೆ.... ನನಗಂತೂ ಈ ಚಿತ್ರ ಖುಷಿ ತಂದಿದೆ. ಹಿಂದಿನ ನನ್ನ ಚಿತ್ರಗಳು ಕೊಟ್ಟ ಏಟನ್ನು ಮರೆಸುವಂತೆ ಪಾರಾಗಲು 'ತನನಂ ತನನಂ' ಸಂಜೀವಿನಿಯಂತೆ ಮೂಡಿ ಬಂದಿದೆ.

ನೀವೆಲ್ಲ ಚಿತ್ರ ನೋಡಿ enjoy ಮಾಡಿ. ಇಂತಹ ಹಲವಾರು ಚಿತ್ರ ಮಾಡಲು ನನಗೆ ಸ್ಫೂರ್ತಿ ಸಿಗುವಂತಾಗುತ್ತದೆ....

-ಎನ್.ಎಂ. ಸುರೇಶ

(ನಿರೂಪಣೆ: ಪಿ.ಕೆ. ಮಲ್ಲನಗೌಡರ್)

ಆಚಾರ ಕೆಟ್ಟರೂ ಆಕಾರ ಕೆಡಬಾರದು ಅಂತಾನೋ ಏನೋ ಕೆಲವರು ಅದೇನು ಮುತುವರ್ಜಿ ವಹಿಸುತ್ತಾರೆ ಅಂತೀರಿ. ಚುನಾವಣೆ ಸಮಯದಲ್ಲಿ ಸಮೀಕ್ಷೆ ನಡೆಸುತ್ತಾರಲ್ಲ, ಅದೇನು ಅಂದುಕೊಂಡಿದ್ದೀರಿ. ಜನರ ಅಭಿಪ್ರಾಯ ಅಂತಾನ? ಕೆಲವು ಸಮೀಕ್ಷೆಗಳು ಹಾಗೂ ಇರಬಹುದು. ಬಹಳ ಸಮೀಕ್ಷೆಗಳು ಏನು ತೋರಿಸುತ್ತವೆ ಅಂದರೆ ಅವು ಸಮೀಕ್ಷಕರ ಅಭಿಪ್ರಾಯ ಅಂತ. ಆದರೆ ಆಕಾರ ಕೆಡಬಾರದು ನೋಡಿ. ಜನರ ಬಾಯಿಂದ ತಮ್ಮ ಭಾವನೆಗಳನ್ನು ಹೊರಗೆ ಹಾಕ್ತಾರೆ.

ನಮ್ಮ ಹಾಗೆ ಮಾಡುವುದಕ್ಕೆ ಬೇರೆ ಕೆಲಸ ಇಲ್ಲದ ಮುದುಕರು ಮಧ್ಯಾಹ್ನ ಒಂದು ಗಂಟೆಗೆ ಟಿವಿಯಲ್ಲಿ ಬರೋ ಸುದ್ದಿ ನೋಡ್ತೀವಿ. ಅಲ್ಲಿ ಜನ ದನಿ ಅಂತ ಬರುತ್ತೆ. ಪ್ರಸ್ತುತ ಸಮಸ್ಯೆ ಕುರಿತು ಜನರ ಅಭಿಪ್ರಾಯ ತಿಳಿಸುವ ಕಾರ್ಯಕ್ರಮ ಇದು. ಅವರು ಹೀಗಂದರು ಇವರು ಹಾಗಂದರು ಅಂತ ಆ ವಿಷಯದ ಬಗ್ಗೆ ತಮ್ಮಾರು ಜನರ ಅಭಿಪ್ರಾಯ ಎಂದು ತಮ್ಮ ಅಭಿಪ್ರಾಯವನ್ನು ಏನು ಪಸಂದಾಗಿ ಪ್ರಸಾರ ಮಾಡುತ್ತಾರೆ ಅಂತೀರಿ. ಆದರೂ ಒಂದೊಂದು ಸಲ ಯಡವಟ್ಟಾಗಿ ಬಿಡುತ್ತೆ. ಇತ್ತೀಚೆಗೆ ಬಾಬಾಬುಡನ್‌ಗಿರಿ ವಿವಾದ ತಾರಕಕ್ಕೇರಿತಲ್ಲ, ಆಗ ಅದನ್ನು ಕುರಿತು ಜನ ದನಿ ಬಂತು. ಹಲವರು ದತ್ತಮಾಲೆ, ದತ್ತ ಪೂಜೆ ನಡೆಯಲೇಬೇಕು ಅಂತ ಹೇಳಿದರು. ಹಾಗೆ ಹೇಳಿದವರೆಲ್ಲರೂ ತಮ್ಮ ಹಣೆಗೆ ಕುಂಕುಮ ಧರಿಸಿದ್ದರು! ಕುಂಕುಮಧಾರಿ ಮನುಷ್ಯರನ್ನೇ ಆಯ್ದು ಆಯ್ದು ಈ ಪ್ರಶ್ನೆ ಕೇಳಿದರೂ ಟೀವಿ ಪರದೆ ಮೇಲೆ ಅವರು ಕುಂಕುಮ ಸಮೇತ ಬರದಂತೆ ನೋಡಿಕೊಳ್ಳಬೇಕಾಗಿತ್ತು. ಕುಂಕುಮ ಅಳಿಸಿ ಹಾಕಿ ತೋರಿಸಿದ್ದರೆ ಯಾರಿಗೂ ಅನುಮಾನ ಬರುತ್ತಿರಲಿಲ್ಲ, ತಮ್ಮ ಒಳಮನಸ್ಸಿನ ಭಾವನೆಗಳನ್ನು ಇದು ಜನರ ಅಭಿಪ್ರಾಯ ಎಂದು ಪರಿಣಾಮಕಾರಿಯಾಗಿ ಬಿಂಬಿಸಬಹುದಾಗಿತ್ತು!

ಇರಲಿ. ಇಂತಹ ಯಡವಟ್ಟು ಕೆಲಸಗಳು ಆಗೊಮ್ಮೆ ಈಗೊಮ್ಮೆ ಸಂಭವಿಸಬಹುದಾದರೂ ಬಹಳಷ್ಟು ಸಲ ಜನರ ಅಭಿಪ್ರಾಯವೇ ಹೀಗಿದೆ ಎಂದು ಸಂಬಂಧಿಸಿದವರ ಮೇಲೆ ಯಶಸ್ವಿಯಾಗಿ ಒತ್ತಡ ತರಲು ಇದು ಸಹಕಾರಿಯಾಗುತ್ತದೆ ಎಂಬುದಂತೂ ನಿಜ.

ಈಗ ಯಾಕೆ ಅದರ ಸುದ್ದಿ ಅಂದರೆ, ಚಂಪಾ ಅವರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇಂತಹದೇ ಕೆಲಸ ನಡೆದಿದೆ. ಯಾವ ಕೇಡುಗಾಲಕ್ಕೋ ಏನೋ ಬೆಂಗಳೂರು ನಗರದ ಸಮಸ್ಯೆಯೇ ಇಡೀ ರಾಜ್ಯದ ಸಮಸ್ಯೆ. ಬೆಂಗಳೂರಿನಲ್ಲಿರುವ ಸಾಹಿತಿಗಳೇ ಇಡೀ ಕರ್ನಾಟಕದ ಸಾಹಿತಿಗಳು, ಬೆಂಗಳೂರೇ ಕರ್ನಾಟಕ ಅನ್ನುವ ರೀತಿಯ ನಡವಳಿಕೆಗಳು ಈ ಅಖಂಡ ಕರ್ನಾಟಕದಲ್ಲಿ ಹೊಸದೇನೂ ಅಲ್ಲ. ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಮೊದಲನೆ ತರಗತಿಯಿಂದ ಮುಂದಿನ ಸಾಲಿನಿಂದ ಕಲಿಸಲಾಗುವುದು ಎಂದು ಸರ್ಕಾರ ಕಾಲದಿಂದಲೂ ಹೇಳುತ್ತಾನೆ ಬರ್‍ತಿದೆ. ಆದರೆ ನಮ್ಮ ಚಂಪಾಗೆ ಸರ್ಕಾರದ ಈ ನಿಲುವು ಇಷ್ಟ ಆಗಲ್ಲ. ಮಾಡ್ತೀವಿ ಮಾಡ್ತೀವಿ ಅಂತ ಮುಂದೂಡ್ತಾ ಇದೆಯಲ್ಲ ಸರ್ಕಾರ, ಅದಲ್ಲ, ಮಾಡೇ ಬಿಡ್ತೀನಿ ಅಂತ ಕುಳಿತಿದೆಯಲ್ಲ ಅದು. ಒಬ್ಬರೇ ಇದರ ವಿರುದ್ಧ ದನಿ ಎತ್ತಿದರೆ ಏನು ಪಸಂದು ಅಂತ ತಮ್ಮ ಅಭಿಪ್ರಾಯವನ್ನೇ

ಆಚಾರ ಕೆಟ್ಟರೂ ಆಕಾರ ಕೆಡಬಾರದು!

ಬಿಂಬಿಸುವ ಸಾಹಿತಿಗಳ ಸಭೆ ಕರೆದು 'ಇಂಗ್ಲಿಷ್ ಕಲಿಕೆಗೆ ಸಾಹಿತಿಗಳ ವಿರೋಧ' ಅನ್ನುವ ಸುದ್ದಿ ಮಾಧ್ಯಮಗಳಲ್ಲಿ ಮೆರೆಯುವಂತೆ ನೋಡಿಕೊಂಡರು.

ಯಾರು ಈ ಸಾಹಿತಿಗಳು? ಎಲ್ಲಾ ವಯಸ್ಸಿನಲ್ಲಿ ಅರವತ್ತು ಪ್ಲಸ್ ಆದವರು! ಅವರಲ್ಲಿ ಬಹಳಷ್ಟು ಮಂದಿ ತಮ್ಮ ಮಕ್ಕಳು, ಮೊಮ್ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಕಲಿಸಿ, ಅಮೆರಿಕಾಕ್ಕೆ ಕಳಿಸಿ (ತಾವು ಮಾತ್ರ ಇಲ್ಲೇ ಇದ್ದು ಕನ್ನಡಮ್ಮನ ಸೇವೆ ಮಾಡುತ್ತಾ!) ಅವರು ಕಳುಹಿಸಿದ ಡಾಲರ್‌ನಿಂದ ನೆಮ್ಮದಿಯಿಂದ ಕಾಲ ಕಳೀತಾ ಇರೋರು! ಯುವ ಸಾಹಿತಿಗಳನ್ನು



ಸಭೆಯಿಂದ ಹೊರಗಿಡಲಾಗಿತ್ತು, ಈಗಿನ ಜರೂರು ಅವರಿಗಿಂತ ಮುದಿ ಸಾಹಿತಿಗಳಿಗೇ ಚೆನ್ನಾಗಿ ಅರಿವಿದೆ ಅಂತ! ಭಿನ್ನ ಅಭಿಪ್ರಾಯ ಇರುವ ಇತರೆ ಸಾಹಿತಿಗಳಿಗೂ 'ಪ್ರವೇಶ ನಿಷೇಧ!' ಯಾಕೆ ಈ ನಿಷೇಧ ಅಂದರೆ 'ಆಕಾರ' ಕೆಡಬಾರದು ಅಂತ.

ಈ ಸಭೆಯಲ್ಲಿ ನಡೆದ ಚಟುವಟಿಕೆಗಳು ಏನು ಮಜವಾಗಿವೆ ಅಂತೀರಿ. ಹಿರಿಯರಾದ ಕೋ. ಚನ್ನಬಸಪ್ಪ ಅವರು ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಬರಬೇಕಾದರೆ ನಡೆಯಲಿರುವ ಸುವರ್ಣ ಕರ್ನಾಟಕ ಆಚರಣೆ, ಬೆಳಗಾವಿಯ ವಿಶ್ವ ಕನ್ನಡ ಸಮ್ಮೇಳನ, ಶಿವಮೊಗ್ಗದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಹಿಷ್ಕರಿಸಲು ಒತ್ತಾಯಿಸಿದರಂತೆ. ಘಟಾನುಘಟಿ ಮುದಿ ಸಾಹಿತಿಗಳೆಲ್ಲ ಹೀಗೆ ಬಹಿಷ್ಕಾರ ಹಾಕಿದರೆ ಅಲ್ಲಿ ತಾವು ಮೆರೆಯಲು ಅವಕಾಶ ದೊರೆಯುವುದಲ್ಲಾ ಅಂತ ಕೆಲವು ಸಾಹಿತಿಗಳು 'ಬಹಿಷ್ಕಾರ ನಿರ್ಧಾರ ಅಚಲ' ಅಂತ ಕೂಗಾಡಿದ್ದು; ಸರ್ಕಾರದ ಬಳಿಗೆ ಹೋಗಿ 'ಏನೇ ಬರಲಿ ಯಾರೇ ವಿರೋಧ ಮಾಡಲಿ ನಿಮ್ಮ ನಿರ್ಧಾರದಿಂದ ಹೊರಬರಬೇಡಿ' ಅಂತ ಒತ್ತಾಯದ ಸಲಹೆ ನೀಡಿದ್ದು ಖಚಿತವಾಗಿಲ್ಲ, ಚಂಪಾ ಮಾತ್ರ ಖಡಾಖಂಡಿತವಾಗಿ ಸುವರ್ಣ ಕರ್ನಾಟಕದ ಆಚರಣೆ ಹಾಗೂ ಬೆಳಗಾವಿಯ ವಿಶ್ವ ಕನ್ನಡ ಸಮ್ಮೇಳನದ ಬಹಿಷ್ಕಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರಂತೆ. ಆದರೆ ತಮ್ಮ ಮುಷ್ಟಿಯೊಳಗಿರುವ ಶಿವಮೊಗ್ಗ ಸಾಹಿತ್ಯ ಸಮ್ಮೇಳನ ಕುರಿತು ಏನೂ ಹೇಳಲಿಲ್ಲವಂತೆ!

ಇರಲಿ, ಕೋಚ ಅವರು ಸರ್ಕಾರ ನೀಡುವ ಒಂದು ಕೋಟಿಗೋ, ಎರಡು ಕೋಟಿ ಹಣಕ್ಕೋ ಬಲಿ ಬಿದ್ದು ಶಿವಮೊಗ್ಗ ಸಮ್ಮೇಳನ ನಡೆಸಲಾಗದು ಎಂದು ಹೇಳಿದ್ದಕ್ಕೆ 'ಸರ್ಕಾರ ಏನು ಅವರ ಅಪ್ಪನ ಮನೆಯಿಂದ ತಂದು ಕೊಡುತ್ತಾ' ಅಂತ ಚಂಪಾ ರೇಗಿದರಂತೆ. ಅದೂ ನಿಜವೆ. ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಹಣ ಅನ್ನೋದು ಸಾರ್ವಜನಿಕರ ಹಣ ತಾನೆ. ಒಂದು ಸಣ್ಣ ಅನುಮಾನ. ಸರ್ಕಾರ ಅವರಪ್ಪನ ಮನೆಯಿಂದ ಹಣ ತಂದು ಕೊಡಲ್ಲ, ಚಂಪಾ ಅವರ ಸಾರ್ವಭೌಮತ್ವದಲ್ಲಿ ಇದೆಯಲ್ಲ ಕನ್ನಡ ಸಾಹಿತ್ಯ ಪರಿಷತ್ತು ಅನ್ನೋ ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಅದಕ್ಕೆ ಹಣವನ್ನು ಚಂಪಾ ಅಪ್ಪನ ಮನೆಯಿಂದ ತರ್‍ತಾರಾ ಅಂತ!

ಸರ್ಕಾರದ ನಿಲುವನ್ನು ಬೆಂಬಲಿಸುವ ಎಲ್ಲರೂ ಚಂಪಾಗೆ ತಮ್ಮ ವಿರೋಧಿಗಳಂತೆ ಕಾಣುತ್ತಿದ್ದಾರಂತೆ. ಅವರೆಲ್ಲ ಇಂಗ್ಲಿಷಿನ ಗುಲಾಮರಾಗಿ, ಅಭಿನವ ಇನ್‌ಫೋಸಿಸ್ ನಾರಾಯಣಮೂರ್ತಿ ಅವರಂತೆ ಗೋಚರಿಸುತ್ತಿದ್ದಾರಂತೆ! ಇದರಲ್ಲಿ ಗುಟ್ಟೇನೂ ಇಲ್ಲ, ಚಂಪಾ ತೆರೆದ ಹೃದಯದ ಮನುಷ್ಯ, ಇದನ್ನು ಬಹಿರಂಗವಾಗಿಯೇ ಹೇಳ್ತಿದಾರೆ. ಆದರೆ ಒಂದು, ತಾವು ಯಾರ ಗುಲಾಮರು ಅಂತ ತಿಳಿಸಿದ್ದರೆ ಕನ್ನಡ ಜನತೆಗೆ ಮಹದುಪಕಾರ ಎಸಗಿದಂತಾಗುತ್ತಿತ್ತು!

ಅಲ್ಲ, ಯಾವುದೇ ಸಮಸ್ಯೆ ಬರಲಿ-ಗಡಿ ವಿವಾದ ಇರಲಿ, ಬಾಬಾಬುಡನ್‌ಗಿರಿ ವಿವಾದ ಇರಲಿ, ಇಂಗ್ಲಿಷ್ ಕಲಿಕೆ ವಿಚಾರ ಬರಲಿ, ಆರ್ಥಿಕ ನೀತಿ ಇರಲಿ, ಹೀಗೆ ಯಾವುದೇ ಬರಲಿ-ಈ ಸಾಹಿತಿಗಳು ಅನ್ನೋ ಸ್ಪೀಷೀಸು ಮೂಗು ತೂರಿಸಿಕೊಂಡು ಬರುತ್ತಲ್ಲಾ, ಅವರೇನು ಸಕಲವಿದ್ಯಾ ಪಾರಂಗತರಾ ಅಂತ. ಶಿಕ್ಷಣದ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾದವರು ಶಿಕ್ಷಣ ತಜ್ಞ ಮನೋವಿಜ್ಞಾನಿಗಳು. ಇಂಗ್ಲಿಷ್ ಕಲಿಕೆ ಬೇಕು ಬೇ ಅಂತ ಸಿಕ್ಕಿಸಿಕ್ಕಿದ ಕಡೆ ಎಲ್ಲ ಭಾಷ ಬಗೀತಾ, ಸಾಹಿತಿಗಳ ಮಾತು ಎಂ ಗಂಭೀರವಾಗಿ ತೆಗೆದುಕೊಳ್ಳುವ ಮು ಜನರನ್ನು ಅದು ಸರಿಯೋ ಇದು ಸರಿಯ ಎಂಬ ತಾಕಲಾಟಕ್ಕೆ ತಳ್ಳುತ್ತಿದ್ದಾರಲ್ಲ ಇವ ಏನೆನ್ನಬೇಕು. ಏನೂ ಅನ್ನು ವುದು ಬೇ 'ಓ ಇದು ಸಾಹಿತಿ ಮಾತು ತಾನೆ' ಅ ಜನ ಅವರ ಮಾತನ್ನು ಮೂರು ಕಾಸಿಗೆ ಹರಾ ಹಾಕುವ ದಿನಗಳು ದೂರ ಇಲ್ಲ ಅನ್ನಿಸುತ್ತೆ.

ಚಂಪಾ ಅವರು ನಗರಗಳಲ್ಲಿ ತಮ್ಮ ಅಭಿಪ್ರಾ ಮಂಡಿಸುವಾಗಲೆಲ್ಲ ಖಾಯಂ ಸದಸ್ಯರು ಇ ಇರುತ್ತಾರಲ್ಲ, ಅವರಲ್ಲಿ ಕೆಲವರ ಮುಖದ ಮೇ ಕನ್ನಡ, ಕನ್ನಡ ಸಾಹಿತ್ಯದ ಎಳೆಯೂ ಕಾಣುವುದಿಲ್ಲವಲ್ಲ ಅವರೇನು ಕನ್ನಡ ರಕ್ಷಣೆಗೆ ಬರ್‍ತಾರೋ ಅಥವಾ ಚಂ ರಕ್ಷಣೆಗೆ ಬರ್‍ತಾರೋ!

ಕೊನೆಯ ಮಾತು:

ಕನ್ನಡದ ಅಭಿಮಾನ ಜನರಲ್ಲಿ ಇದ್ದಕ್ಕಿದ್ದಂತೆ ಉ ಹರಿಯುತ್ತಿದೆ.

ಗಡಿ ವಿವಾದ ಬಂತು. ಸರ್ಕಾರ ಬೆಳಗಾವಿಯ ವಿಧಾನಮಂಡಲದ ಅಧಿವೇಶನ ನಡೆಸಿತು. ನವ ಜನಪ್ರಿಯ ಹಾಸ್ಯ ಕಂ ವಿಲನ್ ನಟ ಚಂದ್ರು ಗ ರಕ್ಷಣೆಗೆ ಸಂಚಾರ ಹೊರಟರು.

ಸುವರ್ಣ ಕರ್ನಾಟಕದ ಕುರಿತು ಕಾರ್ಯಕ್ರಮಗಳ ಸಿದ್ಧತೆ ಭರದಿಂದ ಸಾಗಿದೆ.

ಇಂಗ್ಲಿಷ್-ಕನ್ನಡ ವಿವಾದ ಕಾಳ್ಗಿಚ್ಚಿನಂತೆ ಹರಡುತ್ತಿ

ನವೆಂಬರ್ 1 ಬರುತ್ತಿದೆ!

ಕನ್ನಡದ ಅಲೆ ಮೇಲೇರಿ ಬರುತ್ತಿರುವ ಈ ಸುದಿ ವಸೂಲಿ ಕನ್ನಡಿಗರಿಗೆ ಸುಗ್ಗಿ!

* * * * * * *

ನವೆಂಬರ್ 1!

ಸಾಹಿತಿಗಳು, ಕಲಾವಿದರ ಹಿಂದು ಪ್ರಭಾವಿಶಾಲಿಗ ಮನೆಯ ಬಳಿ.

ಉದ್ದೇಶ: ರಾಜ್ಯೋತ್ಸವ ಪ್ರಶಸ್ತಿ!

ಈ ಸಾಲಿನಲ್ಲಿ ನವೆಂಬರ್ ಒಂದಕ್ಕೆ ಪ್ರಶಸ್ತಿ ಪ್ರಧಾ ಸಮಾರಂಭವೇ ಇಲ್ಲವಂತೆ.


ಕಾರಣ: ಸಮಯದ ಅಭಾವ!

ಇರಬೇಕು. ಕೋ-ಜಾ ಸರ್ಕಾರದಲ್ಲಿನ ಒಳ ಜಗ ತಲೆಗೆ ಬಂದಿರುವ ಚಾಮುಂಡೇಶ್ವರಿ ಕ್ಷೇತ್ರದ ಚುನಾವ ಇನ್ನು ಸಮಯ ಎಲ್ಲಿ ಸಿಗಬೇಕು?

-ಎಚ್.ಎಲ್. ಕೇಶವಮೂರ್ತಿ

ಇಪತ್ತು ವರ್ಷ ವನವಾಸದ 'ಕಾನ್ಶಿ'ರಾಂ

"ಪರಭಾಷಾ ಚಿತ್ರಗಳನ್ನು ಕನ್ನಡದಲ್ಲಿ ಡಬ್ಬಿಂಗ್ ಮಾಡುತ್ತೇವೆ. ಹಾಗೂ ಅಮಿತಾಭ್, ಚಿರಂಜೀವಿ, ರಜನಿಕಾಂತ್ ಇವರುಗಳ ಬಾಯಿಂದ ಕನ್ನಡದ ಡೈಲಾಗ್‌ಗಳನ್ನು ಕನ್ನಡಿಗರಿಗೆ ಕೇಳಿಸುತ್ತೇವೆ" ಎನ್ನುವ ಕನ್ನಡ ನಿರ್ಮಾಪಕರ ಮಾತನ್ನು ಓದಿ ಗಾಬರಿಯಾಯಿತು. ಇಷ್ಟು ವರ್ಷಗಳ ಕಾಲ ಕನ್ನಡದ ನಾಯಕ ನಟರ ಚಿತ್ರದಿಂದ ಹಣವನ್ನು ಸಂಪಾದಿಸಿದ ಈ ನಿರ್ಮಾಪಕರು ಈ ವರ್ಷ ನಷ್ಟವಾದ ತಕ್ಷಣ ನಾಯಕನಟರ ಮೇಲೆ ತಪ್ಪು ಹೊರೆಸುವುದು ಸಮಂಜಸವಲ್ಲ, ಕಳೆದ ವರ್ಷ 'ಜೋಗಿ', 'ಅಮೃತಧಾರೆ', 'ಆಕಾಶ್', 'ನೆನಪಿರಲಿ', 'ಅಣ್ಣತಂಗಿ' ಎಂಬ ಹಲವು ಚಿತ್ರಗಳು ಸೂಪರ್ ಹಿಟ್ ಆದವು. ಆದರೆ ಈ ವರ್ಷ ಅಂತಹ ಯಾವುದೇ ಚಿತ್ರ ತೆರೆ ಕಾಣಲಿಲ್ಲ, ನಿರ್ಮಾಪಕರಲ್ಲಿಯೇ ದೋಷವಿದೆ, ನಾಯಕ ನಟರಲ್ಲಲ್ಲ, ಉತ್ತಮ ಕಥೆ ಇಟ್ಟುಕೊಂಡು ಚಿತ್ರ ಮಾಡಿದರೆ ಯಾವ ನಟನನ್ನು ಹಾಕಿಕೊಂಡರು ಸೂಪರ್ ಹಿಟ್ ಆಗುತ್ತೆ, ಡಬ್ಬಿಂಗ್ ಮಾಡುತ್ತೇವೆ ಎನ್ನುವ ನಿರ್ಮಾಪಕರು ಹಾಕತ್ತಿದ್ದರೆ ಅಮಿತಾಭ್, ಚಿರಂಜೀವಿ, ರಜನಿಕಾಂತ್ ಇವರುಗಳನ್ನು ಕನ್ನಡಕ್ಕೆ ಕರೆತಂದು ಸ್ವಂತ ಕನ್ನಡ ಚಿತ್ರವನ್ನು ನಿರ್ಮಿಸಲಿ. ಆಗ ಗೊತ್ತಾಗುತ್ತೆ ಈ ನಿರ್ಮಾಪಕರುಗಳ ಬಂಡವಾಳ.




-ಎಸ್. ಪ್ರಸನ್ನ, ಯಾದಗಿರಿ

'ಲಂಕೇಶ್'ನಲ್ಲಿ ಮೂಡಿ ಬಂದ 'ದಾವಣಗೆರೆ ಧಣಿಗೆ ಬೆಳ್ಳಿ ಕಿರೀಟ' ವರದಿ ಕುರಿತು ಈ ಪತ್ರ. ನಮ್ಮ ಕಮ್ಯುನಿಸ್ಟ್ ನಾಯಕರಿಗೆ ಒಂದಿಷ್ಟು ಮಾನ ಮರ್ಯಾದೆ ಇದ್ದರೆ ಈ ಕೆಲಸ ಮಾಡುತ್ತಿರಲಿಲ್ಲ, ಏಕೆಂದರೆ ನಾವೂ ಸಹ ಕಮ್ಯುನಿಸ್ಟ್ ಮುಖಂಡರಾದ ಜೆ.ಎಂ. ಹನುಮಂತಪ್ಪನ ಹಿಂದೆ 96-97 ರಲ್ಲಿ ನಡೆದ ನಗರಸಭೆ ಚುನಾವಣೆಯಲ್ಲಿ ಅವರ ಪರ ನಿಂತು ಆಟೋಗೆ ಮೈಕ್ ಕಟ್ಟಿಕೊಂಡು ಕೂಗಿ ಸುತ್ತಿ ಆಸೆಯಿಂದ ಗೆಲ್ಲಿಸಿದ್ದೆವು. ಅವರ ಭಾಷಣದಲ್ಲಿ ರಷ್ಯಾ ಕ್ರಾಂತಿ, ಲೆನಿನ್‌ನ ಆದರ್ಶಗಳನ್ನು ಕೇಳಲು ಜನ ಗುಂಪು ಸೇರುತ್ತಿದ್ದರು. ಅವಾಗ ಶಾಮನೂರ್ ಧಣಿಯ ಬಗ್ಗೆ ಹೀನಾಯವಾಗಿ ಬಯ್ಯುತ್ತಿದ್ದ ವ್ಯಕ್ತಿ ಇಂದು ಬೆಳ್ಳಿ ಕಿರೀಟವನ್ನು ತೊಡಿಸುತ್ತಿರುವುದು ವಿಪರ್ಯಾಸ.

-ಮುತ್ತಣ್ಣ, ಪೂಜಾರ್,
ಕದಲಬಾಳು

ಅಕ್ಟೋಬರ್ 18, 2006 ರ 'ಲಂಕೇಶ್' ಸಂಚಿಕೆಯಲ್ಲಿ ಪ್ರಕಟವಾದ 'ಶಬಾನಾ ಎಂಬ ನಿಜ ಶರಣೆ' ಎಂಬ ಗೌರಿ ಲಂಕೇಶರ ಸಂಪಾದಕೀಯ ಗಮನ ಸೆಳೆಯಿತು. ಈ ಬಾರಿಯ 'ಬಸವಶ್ರೀ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಶಬಾನಾರವರಿಗೆ ನಮ್ಮ ಅಭಿನಂದನೆಗಳು. "ನಾನು ಮಗಳು, ತಾಯಿ, ಸಹೋದರಿ, ನಟಿ, ಮಹಿಳೆ, ಭಾರತೀಯಳು, ಮುಸಲ್ಮಾನಳು. ಎಲ್ಲವೂ ಸಹ ಆಗಿದ್ದೇನೆ" ಎಂಬ ಮಾತು ಹಿಡಿಸಿತು.

-ಕೆ.ವಿ. ಶಿವಕುಮಾರ್,
ಕಾಳೀಹುಂಡಿ



ದಲಿತರ ಉದ್ಧಾರದ ಪಣ ತೊಟ್ಟು ಯಾರಿಗೂ ಹೇಳದೆ ಏಕಾಏಕಿ ಮನೆ-ಮಠ ತ್ಯಜಿಸಿ ಬಂದಿದ್ದ ಕಾನ್ಶಿರಾಮ್ ಸುಮಾರು 2 ದಶಕಗಳವರೆಗೂ ವನವಾಸದಲ್ಲಿದ್ದ ರಾಮನಂತಾಗಿದ್ದರು. ಸರ್ಕಾರಿ ನೌಕರಿಯಲ್ಲಿದ್ದ ಕಾನ್ಶಿರಾಮ್ ಇಡೀ ಕುಟುಂಬದ ಜವಾಬ್ದಾರಿ ಹೊತ್ತಿದ್ದರೂ ತನ್ನನ್ನು ಪೂರ್ತಿಯಾಗಿ ಚಳವಳಿಯಲ್ಲಿ ತೊಡಗಿಸಿಕೊಳ್ಳಲು ನೌಕರಿ ತೊರೆದು ಹೊರಬಂದರು.

ಕಾನ್ಶಿರಾಮ್ ಬಾಲ್ಯದಲ್ಲಿದ್ದಾಗ ಅವರಿಗೆ ದೊರೆತ ಡಾ. ಅಂಬೇಡ್ಕರ್ ಅವರ ಅನಿಹಿಲೇಷನ್ ಆಫ್ ಕ್ಯಾಸ್ಟ್ ಪುಸ್ತಕವನ್ನು ನಿದ್ರೆ ಮರೆತು ಒಂದೇ ರಾತ್ರಿ ಮೂರು ಬಾರಿ ಓದಿದ್ದರಂತೆ. ಇದೇ ಪುಸ್ತಕ ಅವರ ಹೋರಾಟದ ಜೀವನಕ್ಕೆ ಪ್ರೇರಣೆ ನೀಡಿತ್ತು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಇತರೆ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಂಘಟನೆ, ಅಖಿಲ ಭಾರತ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ನೌಕರರ ಒಕ್ಕೂಟ ಎಂಬ ಸಂಘಟನೆಗಳನ್ನು ತರುವ ಮೂಲಕ ಚಳವಳಿಗ ಅಡಿಗಲ್ಲು ಹಾಕಿದರು. ಅತ್ಯಂತ ಸಂಕೀರ್ಣ ಮನೋ ಭಾವದ ರಾಜಕಾರಣಿಯಾಗಿದ್ದರು. ಉತ್ತರ ಪ್ರದೇಶದಲ್ಲಿ ದಲಿತರನ್ನು ರಾಜಕೀಯ ಮುಖ್ಯವಾಹಿನಿಗ ತರುವಲ್ಲಿ ಅವರ ಕಾಣಿಕೆ ಅಪಾರ.


-ದಿ.ಎಲ್. ನಾಗರಾಜ್,
ಹರಪನಹಳ್ಳಿ

'ಟಿಪ್ಪು ಹೆಸರೇ ಸ್ವಾತಂತ್ರ್ಯ' ಎಂಬ ಕೆ.ಆರ್. ವಿದ್ಯಾಧರರ ಲೇಖನ ಓದಿದೆ ಟಿಪ್ಪುವಿನ ಮರಣದ ನಂತರವೂ ಕೂಡ ಆತನ ಸೈನಿಕನಾಗಿದ್ದ ಧೊಂಡಿಯಾ ವಾಘ್ ವಿಟ್ಲದ ದೊಂಬ ಹೆಗ್ಗಡೆ, ಸುಬ್ಬರಾವ್ ತಾನೇ ಟಿಪ್ಪುವಿನ ಮಗನೆಂದು ಜನರ ಮಧ್ಯೆ ಪ್ರತ್ಯಕ್ಷವಾಗುವ ಆಡೂರಿನ ಮೆಹ್ತಾಬ್ ಖಾನ್ ಐಗೂರಿನ ಪಾಳೇಯಗಾರ, ವೆಂಕಟಾದ್ರಿ ನಾಯಕ ಗುಲಾಮ್ ಮಹಮದ್ ಖಾನ್, ಸ್ವಾಮಿ ಅಪರಂಪರ ಪುಟ್ಟಬಸಪ್ಪ, ಶಿರಸಿ ದಂಗೆಯ ಹೋರಾಟಗಾರ ಪಕೀರ್ ಇಸ್ಲಾಂ ಶಾನನ್ನು ಟಿಪ್ಪುವಿನ ಮಗನೆಂದೇ ಪ್ರತಿಬಿಂಬಿಸಲಾಗಿತ್ತು... ಇತ್ಯಾದಿ ಅಂಶಗಳನ್ನು ದಾಖಲೆ ಸಮೇತ ವಿವರಗಳೊಂದಿಗೆ ಟಿಪ್ಪುವಿನ ಬಗ್ಗೆ ಉಲ್ಲೇಖಿಸಿದ್ದಾರೆ. ಆತನ ವ್ಯಕ್ತಿತ್ವ ವಿವಿಧ ಹೋರಾಟಗಾರರಿಗೆ ಹೇಗೆ ಸ್ವಾತಂತ್ರ್ಯಾಭೀಪ್ಸೆಯ ಸಂಕೇತವಾಗಿದೆ ಅನ್ನೋ ದನ್ನು ತಣ್ಣಗೆ ಚಿಡ್ಡಿಗಳೂ ಕೂಡಾ ಅಭಿಮಾನಪಡುವ ರೀತಿಯಲ್ಲಿ ವಿದ್ಯಾಧರ ಬರೆದಿದ್ದಾರೆ. ಇತಿಹಾಸ ತಿರುಚುವವರಾದ (ಚಿ.ಮೂ. ಭೈರಪ್ಪ ಶಂಕರಮೂರ್ತಿ) ಇಂತವರಿಗೆ ಇತಿಹಾಸದ ಪಾಠ ಮಾಡಿದಂತಿದೆ.

-ಟಿ. ರಂಗಪ್ಪ, ಮಡಿಕೇರಿ



ಅಭಿಮಾನಿ ದೇವರುಗಳ ಪ್ರೀತಿ ಮತ್ತು ಅಪ್ಪಾಜಿಯ ಉಪವಾಸ



ಅಪ್ಪಾಜಿ ಏನೇ ಮಾಡಿದರೂ ತುಂಬಾ ಆಲೋಚನೆ ಮಾಡಿ ಮಾಡುತ್ತಿದ್ದರು. ಅವರು ನಮಗಿಂತಲೂ ಹೆಚ್ಚು ಎಮೋಷನಲ್ ಮನುಷ್ಯ. ಹೀಗಾಗಿ ಕೆಲವೊಮ್ಮೆ ಅವರ ನಿಲುವುಗಳು ನಮಗೆ ಅರ್ಥವಾಗುತ್ತಿರಲಿಲ್ಲ ಅಥವಾ ಅವರ ವರ್ತನೆಯನ್ನು ಅರ್ಥಮಾಡಿಕೊಳ್ಳುವಷ್ಟು ನಾವು ಬೌದ್ಧಿಕವಾಗಿ ಬೆಳೆದಿರಲಿಲ್ಲ.

ಇದೆಲ್ಲ ಪೀಠಿಕೆ ಯಾಕೆಂದು ನಿಮಗೆ ಗೊತ್ತಲ್ಲವೇ? ಕಳೆದವಾರ ನನ್ನ ಮದುವೆಯ ದಿನ ಅಪ್ಪಾಜಿ ಊಟ ಮಾಡದಿದ್ದ ವಿಷಯವನ್ನು ಪ್ರಸ್ತಾಪಿಸಿದ್ದೆ. ಮಗನ ಮದುವೆಯ ದಿನ ತಂದೆ ಯಾಕೆ ಊಟ ಮಾಡಲಿಲ್ಲ ಎಂಬ ಕುತೂಹಲ ಸಹಜ. ಆದರೆ ಅವತ್ತು ಅಪ್ಪಾಜಿ ಊಟ ಮಾಡಲಿಲ್ಲ ಎಂದು ಕೇಳಿದಾಗ ನನಗೆ ಅಚ್ಚರಿ ಆಗಲಿಲ್ಲ. ಯಾಕೆ ಎಂದು ಹೇಳುತ್ತೇನೆ, ಕೇಳಿ.



ಅವತ್ತು ಮದುವೆಗೆ ನಿರೀಕ್ಷಿಸಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಜನ ಬಂದಿದ್ದರು. ಆ ಜನಸಾಗರವನ್ನು ನಿಭಾಯಿಸಲು ಪೊಲೀಸರಿಗೆ ಕಷ್ಟವಾಗುತ್ತಿತ್ತು. ಆದರೆ ಯಾವುದೇ ಕಾರಣಕ್ಕೂ ಜನರನ್ನು ನಿಯಂತ್ರಿಸಲು ಲಾಠಿ ಪ್ರಹಾರ ಮಾಡಬಾರದೆಂದು ಅಪ್ಪಾಜಿ ಮತ್ತು ಬಂಗಾರಪ್ಪನವರು ಕಟ್ಟಪ್ಪಣೆ ಮಾಡಿದ್ದರು. ಹೀಗಾಗಿ ಪೊಲೀಸರು ಯಾರನ್ನೂ ತಡೆಯುವ ಗೋಜಿಗೇ ಹೋಗಲಿಲ್ಲ.


ಅಷ್ಟು ಜನ ಬಂದಿದ್ದರಿಂದ ಅಡಿಗೆಯವರು ಟನ್ನುಗಟ್ಟಲೆ ಅಡುಗೆ ಮಾಡುತ್ತಲೇ ಇದ್ದರು. ಆದರೂ ಅದೆಷ್ಟೋ ಜನರಿಗೆ - ಆಹ್ವಾನಿತರು ಮತ್ತು ಆಹ್ವಾನವಿಲ್ಲದೇ ಬಂದವರು- ಸರಿಯಾದ ಊಟ ಸಿಕ್ಕದೆ ಮದುವೆ ಊಟ ಮಾಡಲು ಸಾಧ್ಯವಾಗಲಿಲ್ಲ. ಇದನ್ನೆಲ್ಲ ಗಮನಿಸಿದ್ದ ಅಪ್ಪಾಜಿಯವರು "ನಮ್ಮ ಮಗನ ಮದುವೆಗೆ ಬಂದವರು ಊಟ ಮಾಡಲು ಸಾಧ್ಯವಾಗಿಲ್ಲವೆಂದಮೇಲೆ ನಾನು ಮಾಡಿದರೆ ನನ್ನ ಆತ್ಮಕ್ಕೆ ದ್ರೋಹ ಬಗೆದಂತಾಗುತ್ತದೆ. ಅವರೆಲ್ಲ ಅವರ ಮನೆಯ ಮಗನ ಮದುವೆಯೆಂದೇ ಬಂದಿದ್ದಾರೆ. ಆ ಅಭಿಮಾನಿ ದೇವರುಗಳ ಆಶೀರ್ವಾದದಿಂದ ತಾನೇ ನಾವೆಲ್ಲ ಇಲ್ಲಿರುವುದು? ಅಭಿಮಾನಿ ದೇವರುಗಳೇ ಊಟ ಮಾಡಲು ಸಾಧ್ಯವಾಗಿಲ್ಲ ಎಂದಮೇಲೆ ನಾನು ಮಾಡಬಾರದು" ಎಂದು ನಿರ್ಧರಿಸಿದ್ದರು. ಹೀಗಾಗಿ ಮಗನ ಮದುವೆಯಲ್ಲಿ ಊಟ ಮಾಡದೆ ಅರಮನೆಯ ಮೈದಾನದಿಂದ ಹೊರಬಂದ ಅಪ್ಪಾಜಿ ನೇರವಾಗಿ ಜನಾರ್ಧನ್ ಹೋಟೆಲಿಗೆ ಹೋಗಿ ಊಟ ಮಾಡಿದ್ದರು. ನಿಜವಾಗಲೂ ಅಭಿಮಾನಿ ದೇವರುಗಳಿಗೆ ತೊಂದರೆ ಆದರೆ ಅಪ್ಪಾಜಿ ದುಃಖ ಪಡುತ್ತಿದ್ದರು. ಹೀಗಾಗಿ ಅಭಿಮಾನಿಗಳು ಕೂಡ ಅವರ ಬಗ್ಗೆ ಅಷ್ಟೊಂದು ಪ್ರೀತಿ ಹೊಂದಿದ್ದರು.

ನನ್ನ ಮದುವೆ ದಿನ ನಾನು ಹೇಗಿದ್ದೆ? ಏನು ಮಾಡಿದೆ? ಇದ್ಯಾವುದನ್ನೂ ನನಗೆ ಹೇಳಲು ಸಾಧ್ಯವಾಗುತ್ತಿಲ್ಲ, ಯಾಕೆಂದರೆ ಅಷ್ಟೊಂದು ಜನಸಾಗರದ ನಡುವೆ ಫ್ರೀ ಆಗಿ ಓಡಾಡಲು, ಮಾತನಾಡಲು ನನಗೆ ಸಾಧ್ಯವಾಗಲೇ ಇಲ್ಲ. ಅಂದು ಸಂಜೆ ಆರತಕ್ಷತೆಗೆ ನಾನು ಮತ್ತು ಗೀತಾ ಬಂದು ಕಾರಿನಿಂದ ಇಳಿದಾಕ್ಷಣ ನಮ್ಮಿಬ್ಬರನ್ನೂ ಜನರು ಎತ್ತಿಕೊಂಡು ವೇದಿಕೆ ಮೇಲೆ ಬಿಡುಕೊಂಡು ಹೋದರು. ಅವರನ್ನು, ಅವರ ಉತ್ಸಾಹವನ್ನು ತಡೆಯಲು ನಮ್ಮಿಂದಾಗಲಿ, ಪೊಲೀಸರಿಂದಾಗಲಿ ಸಾಧ್ಯವೇ ಆಗಲಿಲ್ಲ.

ಆ ಜನರು ನಮ್ಮಿಬ್ಬರನ್ನು ಎತ್ತಿಕೊಂಡು ಹೋಗುವಾಗ ನನಗೆ ಒಮ್ಮೆಲೇ ಹೆದರಿಕೆಯಾದರೂ ಆಮೇಲೆ ಅವರ ಪ್ರೀತಿ, ವಿಶ್ವಾಸ ಕಂಡು ಬೆರಗಾದೆ. ಅವರು ಯಾರು? ಎಲ್ಲಿಯವರು? ಏನು? ಎಂಬುದೆಲ್ಲ ಗೊತ್ತಿರದಿದ್ದರೂ ಅವರ ಪ್ರೀತಿ ಅಷ್ಟು ಮನ ಮುಟ್ಟುವಂತಿತ್ತು.

ಇಲ್ಲಿ ರಿಸೆಪ್ಷನ್ ಆದ ಮೇಲೆ ಮದ್ರಾಸಿನಲ್ಲಿ ಒಂದು ಔತಣ ಕೂಟವನ್ನು ಏರ್ಪಡಿಸಿದ್ದೆವು. ಅದಕ್ಕೆ ನನ್ನ ಕಾಲೇಜಿನ ಗೆಳೆಯರೆಲ್ಲಾ ಬಂದಿದ್ದರು. ಹೆಚ್ಚಿನ ಗೆಳೆಯರು ಮದುವೆಗೆ ಬೆಂಗಳೂರಿಗೇ ಬಂದಿದ್ದರೆಂಬುದು ಬೇರೆ ವಿಷಯ. ಆ ಔತಣ ಕೂಟಕ್ಕೆ ಕಮಲ್ ಸರ್, ರಜನಿ ಸರ್‌ರಿಂದ ಹಿಡಿದು ತಮಿಳು ಚಿತ್ರರಂಗದ ಬಹುತೇಕ ಎಲ್ಲ ನಟ ನಟಿಯರು ಆಗಮಿಸಿ ನಮ್ಮಿಬ್ಬರನ್ನು ಆಶೀರ್ವದಿಸಿದ್ದರು.

ಇಲ್ಲಿ ಒಂದು ಮುಖ್ಯ ಅಂಶವನ್ನು ಹೇಳಲೇಬೇಕು. ಅವತ್ತು ಅಲ್ಲಿಗೆ ಒಬ್ಬ ಮಹಾನ್ ವ್ಯಕ್ತಿ ಆಗಮಿಸಿದ್ದರು. ಅವರು ಬೇರೆ ಯಾರೂ ಅಲ್ಲ, ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಎಂ.ಜಿ. ರಾಮಚಂದ್ರನ್.




ಅವತ್ತು ಅವರ ಆರೋಗ್ಯ ಅಷ್ಟು ಸರಿ ಇರಲಿಲ್ಲವಾದ್ದರಿಂದ ವೈದ್ಯರು ಹೊರಗೆ ಓಡಾಡಬಾರದೆಂದು ಹೇಳಿದ್ದರು. ಆದರೆ ನನ್ನ ಸೌಭಾಗ್ಯವೋ ಏನೋ, ಅವರು ನಮ್ಮ ಔತಣಕೂಟಕ್ಕೆ ಬಂದಿದ್ದರು. ಅಷ್ಟೇ ಅಲ್ಲ, ಕಲ್ಯಾಣ ಮಂಟಪದ ಒಳಗೆ ಕಾಲಿಡುವ ಮುನ್ನ ತಮ್ಮ ಭದ್ರತಾ ಸಿಬ್ಬಂದಿಗಳಿಗೆ ಹೊರಗೇ ಇರಲು ಆದೇಶ ನೀಡಿದರು. "ನೀವು ಯಾವುದೇ ಕಾರಣಕ್ಕೆ ಕಲ್ಯಾಣಮಂಟಪದ ಒಳಗೆ ಬರಬಾರದು. ಇದು ನಮ್ಮ ಮನೆಯ ಸಮಾರಂಭ. ಈತ ನನ್ನ ಮಗನ ತರಹ. ಇಲ್ಲಿ ನನಗೆ ಭದ್ರತೆಯ ಅವಶ್ಯಕತೆಯಿಲ್ಲ''ಎಂದು ಅವರು ಹೇಳಿದಾಗ ಭದ್ರತಾ ಸಿಬ್ಬಂದಿಗಳು ತಬ್ಬಿಬ್ಬಾದರು.

ಹಾಗೆ ಹೇಳುತ್ತಾ ಭದ್ರತಾ ಸಿಬ್ಬಂದಿಯ ಉತ್ತರಕ್ಕೂ ಕಾಯದೆ ಎಂ.ಜಿ. ರಾಮಚಂದ್ರನ್ ಪಟಪಟನೆ ಹೆಜ್ಜೆಯಿಟ್ಟು ವೇದಿಕೆಗೆ ಬಂದು ನಮ್ಮಿಬ್ಬರನ್ನೂ ಆಶೀರ್ವದಿಸಿದರು. ಹೀಗೆ ಆಶೀರ್ವಾದ ಮಾಡಿದ ಕೂಡಲೆ ಅವರು ವಾಪಸ್ಸು ಹೋಗುತ್ತಾರೆ ಎಂದು ಅಂದುಕೊಂಡಿದ್ದೆ. ಆದರೆ ಅವರು ನೇರವಾಗಿ ಹೋಗಿ ಒಂದು ಖುರ್ಚಿಯಲ್ಲಿ ಕುಳಿತರು. ಹಾಗೆ ಕೂತವರು ಸುಮಾರು ಎರಡು ಗಂಟೆಗಳ ಕಾಲ ಎಲ್ಲರೊಂದಿಗೆ ಬೆರೆತು ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು.

ಆದರೆ ಹೊರಗಡೆಯಿದ್ದ ಭದ್ರತಾ ಸಿಬ್ಬಂದಿಗಳು

ನಿರೂಪಣೆ: ಸದಾಶಿವ ಶೆಣೈ



ತುಂಬ ಟೆನ್ಷನ್‌ನಲ್ಲಿ ಚಡಪಡಿಸುತ್ತಿದ್ದರಂತೆ. ಯಾಕೆಂದರೆ ಎಂ.ಜಿ.ಆರ್. ಯಾವುದೇ ಮದುವೆಯಲ್ಲಿ ಅಷ್ಟು ಹೊತ್ತು ಕಾಲ ಕಳೆಯುತ್ತಿರಲಿಲ್ಲವಂತೆ. ಅವತ್ತು ಎಂಜಿಆರ್ ಜೊತೆ ನಮ್ಮ ಫ್ಯಾಮಿಲಿಯ ಎಲ್ಲರೂ ಒಬ್ಬೊಬ್ಬರಾಗಿ ಫೋಟೊ ತೆಗೆಸಿಕೊಂಡರು. ಅಷ್ಟೇ ಅಲ್ಲ, ನನ್ನ ಮಾವ ಬಂಗಾರಪ್ಪನವರ ಕುಟುಂಬದವರು ಕೂಡಾ ಅವರ ಜೊತೆ ಫೋಟೋ ತೆಗೆಸಿಕೊಂಡರು. ಇದಕ್ಕೆಲ್ಲ ಸಾಕಷ್ಟು ಸಮಯ ಹಿಡಿದರೂ, ತಮ್ಮ ಅನಾರೋಗ್ಯದ ನಡುವೆಯೂ ಅವರು ತುಂಬಾ ಸಹಕರಿಸಿದರು.

ಅವತ್ತು ಎಂ.ಜಿ.ಆರ್ ಅವರನ್ನು ನೋಡಿದಾಗ ನನಗೆ ಅವರ ಚಾರಿಶ್ಮ ಅರ್ಥವಾಯಿತು. ಅವರ ಮುಖದಲ್ಲಿ ಏನೋ ಒಂಥರಾ ಸೆಳೆತವಿತ್ತು, ಅದನ್ನು ವಿವರಿಸಲು ನನ್ನಲ್ಲಿ ಪದಗಳಿಲ್ಲ. ಬಹುಶಃ ಅಂತಹ ಸೆಳೆತ ಮತ್ತು ಚಾರಿಶ್ಮ ಇಲ್ಲದಿದ್ದರೆ ಅವರಿಗೆ ಕೋಟ್ಯಂತರ ಜನರ ಪ್ರೀತಿ ಸಿಗಲು ಹೇಗೆ ಸಾಧ್ಯವಾಗುತ್ತಿತ್ತು?

ಎಂಜಿಆರ್ ಅವರನ್ನು ನಾನು ಇಷ್ಟೆಲ್ಲಾ ಹೊಗಳುತ್ತಿರುವುದು ಕೆಲವರಲ್ಲಿ ಆಶ್ಚರ್ಯ ಉಂಟುಮಾಡಬಹುದು. ಆದರೆ ನನಗನಿಸಿದ್ದನ್ನು ಹೇಳುತ್ತಿದ್ದೇನೆ ಎಂದಷ್ಟೇ ಹೇಳಬಲ್ಲೆ. ಇವತ್ತು ಎಂಜಿಆರ್ ನಮ್ಮ ನಡುವೆ ಇಲ್ಲ, ಆದ್ದರಿಂದ ಅವರನ್ನು ಹೊಗಳಿ ನನಗೇನೂ ಆಗಬೇಕಾಗಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ; ಅಂತಹ ಮಹಾನ್ ಮನುಷ್ಯ ನನ್ನ ಮದುವೆಗೆ ಬಂದು ಆಶೀರ್ವದಿಸಿದ್ದು ಒಂದು ಶುಭ ಸೂಚನೆಯೆಂದೇ ನಾನು ನಂಬಿದ್ದೇನೆ.

ಈ ಸಂದರ್ಭದಲ್ಲಿ ನನ್ನ ಮದುವೆಗೆ ಬಂದು ಶುಭ ಹಾರೈಸಿದ್ದ ಕನ್ನಡ ಚಿತ್ರರಂಗದ ಎಲ್ಲ ನಟ-ನಟಿಯರಿಗೆ ನನ್ನ ಧನ್ಯವಾದಗಳನ್ನು ಹೇಳಲೇಬೇಕು. ವಿಷ್ಣುವರ್ಧನ್, ಅಂಬರೀಶ್, ರವಿಚಂದ್ರನ್ ಆದಿಯಾಗಿ ನಿರ್ದೇಶಕರುಗಳು, ನಿರ್ಮಾಪಕರುಗಳು, ಹಂಚಿಕೆದಾರರು, ವಾಲ್‌ಪೋಸ್ಟ್ ಅಂಟಿಸುವವರು.... ಹೀಗೆ ಚಿತ್ರರಂಗದ ಎಲ್ಲ ವರ್ಗದ ಜನರೂ ನನ್ನನ್ನು ಅಂದು ಆಶೀರ್ವದಿಸಿದ್ದರು.

ನನಗಿನ್ನೂ ನೆನಪಿದೆ, ನನ್ನ ಮದುವೆಯ ಆಹ್ವಾನಪತ್ರಿಕೆ ಕಾಳಸಂತೆಯಲ್ಲಿ ಮಾರಾಟವಾಯಿತು ಎಂದು ದಿನಪತ್ರಿಕೆಯಲ್ಲಿ ವರದಿಯಾಗಿತ್ತು. ಅವನ್ನು ಅಭಿಮಾನಿಗಳು ಬ್ಲಾಕ್‌ನಲ್ಲಿ ಖರೀದಿಸಿದ್ದರು. ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಆಗ ನಾನಿನ್ನೂ ಸ್ಟಾರ್ ಆಗಿರಲಿಲ್ಲ. ನನ್ನ 'ಆನಂದ್' ಚಿತ್ರ ಬಿಡುಗಡೆಯಾಗಿರಲಿಲ್ಲ. ಆದರೂ ಚಿತ್ರರಂಗದ ಪ್ರತಿಯೊಬ್ಬರೂ ಬಂದು ನನ್ನನ್ನು ಹರಸಿದ್ದನ್ನು ನೋಡಿ ನನ್ನ ಹೃದಯ ಅರಳಿತ್ತು. ನಾನು ಡಾ. ರಾಜ್‌ಕುಮಾರ್ ಅವರ ಮಗ ಎಂಬ ಏಕೈಕ ಅಂಶ ಬಿಟ್ಟರೆ ಇಷ್ಟು ಜನರನ್ನು ಆಕರ್ಷಿಸಲು ಬೇರೆ ಯಾವುದೇ ಅರ್ಹತೆ ನನಗಿರಲಿಲ್ಲ. ಇದೆಲ್ಲವನ್ನು ಕಂಡು ನನಗೆ ಮತ್ತೊಮ್ಮೆ ಅನ್ನಿಸಿದ್ದು ಇಷ್ಟೇ- 'ನಾನು ಎಂತಹ ಅದ್ಭುತ ಮನುಷ್ಯನ ಮಗನಾಗಿ ಹುಟ್ಟಿದ್ದೇನೆ ಕೋಟಿ ಜನರಲ್ಲಿ ಅಪ್ಪಾಜಿಯ ಮಗನಾಗಿ ಹುಟ್ಟುವ ಸೌಭಾಗ್ಯವನ್ನು ದೇವರು ನನಗೆ ಕೊಟ್ಟಿದ್ದಕ್ಕೆ ಕೋಟಿ ಕೋಟಿ ನಮನಗಳು. ಇಂತಹ ಒಂದು ಯೋಗ್ಯತೆ ಪಡೆದ ನಾನು ನಿಜಕ್ಕೂ ಧನ್ಯ. ಒಂದು ವೇಳೆ ಪುನರ್ಜನ್ಮ ಎಂಬುದಿದ್ದರೆ, ಮತ್ತೆ ಈ ಮನುಷ್ಯನ ಮಗನಾಗಿಯೇ ನನಗೆ ಜನ್ಮ ನೀಡು'

ಅಂದು ಅಪ್ಪಾಜಿಯ ಅಭಿಮಾನಿಗಳು, ಅವರ ಹಿತೈಷಿಗಳು ಬಂದು ನನಗೆ ಶುಭ ಹಾರೈಕೆ ಮಾಡಿದ್ದರಿಂದಲೇ ನನ್ನ ಸಾಂಸಾರಿಕ ಜೀವನ ಇಂದಿಗೂ ಚೆನ್ನಾಗಿದೆ ಎಂದು ನಾನು ನಂಬಿದ್ದೇನೆ.

ಅಪ್ಪಾಜಿ ಯಾವಾಗಲೂ ಹೇಳುತ್ತಿದ್ದರು "ಮನೆಯವರ ಆಶೀರ್ವಾದ ಯಾವಾಗಲೂ ಇದ್ದೇ ಇರುತ್ತದೆ. ಆದರೆ ಹೊರಗಿನ ಜನರ ಆಶೀರ್ವಾದ ಅತಿಮುಖ್ಯ" ಎಂದು. ಅವರ ಮಾತನ್ನು ನಾನು ಸಂಪೂರ್ಣವಾಗಿ ನಂಬುತ್ತೇನೆ. ನನ್ನ ಮದುವೆಗೆ ಬಂದು ಹಾರೈಸಿದ ಪ್ರತಿಯೊಬ್ಬರಿಗೂ ಇಪ್ಪತ್ತು ವರ್ಷಗಳ ನಂತರ ಈಗ ನಾನು ತುಂಬು ಹೃದಯದ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

(ಮುಂದುವರೆಯುತ್ತದೆ..)

ಶಾಟ್ ಕಟ್

ಮುನ್ನಾಭಾಯಿ ನೇಮ್‌ಸೇಕ್!



'ಲಗೆರಹೊ ಮುನ್ನಾಭಾಯಿ' ಎನ್ನದಿರಿ! ಮುನ್ನಾಭಾಯಿ ನಹಿಂ ರುಖತಾ!

ಇದೀಗ ಮುನ್ನಾಭಾಯಿ ಎಂಬಿಬಿಎಸ್ ಇಂಟರ್‌ನ್ಯಾಷನಲ್ ಲೆವೆಲ್‌ಗೆ ಹೋಗುತ್ತಿದ್ದಾನೆ. ವಿಧು ವಿನೋದ್ ಚೋಪ್ರಾ ನಿರ್ಮಾಣದ, ರಾಜು ಹಿರಾನಿ ನಿರ್ದೇಶನದ 'ಮುನ್ನಾಭಾಯಿ ಎಂಬಿಬಿಎಸ್'ನ್ನು ಮೀರಾ ನಾಯರ್ ಹಾಲಿವುಡ್‌ಗೆ ಒಯ್ದು ಆತನನ್ನು 'ಗ್ಯಾಂಗ್‌ಸ್ಟಾ ಎಂ.ಡಿ' ಆಗಿ ಪರಿವರ್ತಿಸಲಿದ್ದಾರೆ.

ರಿತುಪರ್ಣೊ ಕಮರ್ಷಿಯಲ್‌ಗೆ

ಕಳೆದ ಬಾರಿ 'ರೇನ್‌ಕೋಟ್' ತೊಟ್ಟಾಗಲೂ ತೊಯ್ದಿದ್ದರು ರಿತುಪರ್ಣೊ ಘೋಷ್. ಅಂತರರಾಷ್ಟ್ರೀಯ ಖ್ಯಾತಿಯ ಈ ಬಂಗಾಳಿ ನಿರ್ದೇಶಕ ಅಜಯ್‌ದೇವಗನ್, ಐಶ್ವರ್ಯ ರೈ ಹಾಕಿಕೊಂಡು ಮಾಡಿದ ಮೊದಲ ಹಿಂದಿ ಚಿತ್ರ 'ರೇನ್‌ಕೋಟ್' ಇನ್ನಿಲ್ಲದಂತೆ ಮುಗ್ಗರಿಸಿತ್ತು.



ಈಗ ರಿತುಪರ್ಣೊ ಘೋಷ್ ಅಪ್ಪಟ ಕಮರ್ಷಿಯಲ್ ಕಾಮಿಡಿ ಮಾಡಲು 'ಸನ್‌ಗ್ಲಾಸ್' ಧರಿಸಿದ್ದಾರೆ.

ಮಾಧವನ್, ಕೊಂಕೊಣಾ ಸೇನ್, ನಾಶಿಸಿರುದ್ದೀನ್ ಶಾ, ಜಯಾ ಬಚ್ಚನ್ ಇರುವ 'ಸನ್‌ಗ್ಲಾಸ್' ಈ ವರ್ಷಾಂತ್ಯಕ್ಕೆ ತೆರೆ ಕಾಣಲಿದೆ. 'ರೇನ್‌ಕೋಟ್' ತೊಟ್ಟೂ ತೊಯ್ದ ರಿತು, 'ಸನ್‌ಗ್ಲಾಸ್' ತೊಟ್ಟು 'ಸೂರ್ಯ'ನ ತಾಪಕ್ಕೆ ಬಲಿಯಾಗದಿರಲಿ...

ನಿನ್ನ ಹೆಸರು ಕುಹೂನಾ ಕೋಗಿಲೆನಾ?

ಮಣಿ ಮಣಿ ಮಣಿ ಮಣಿ ಮಣಿಗೊಂದು ಹೆಸರು... ಆದರೀ ಮುತ್ತಿನ ಮಣಿಗೆ ಇಲ್ವಂತೆ ಖಾಯಂ ಹೆಸರು! ಇವೆ, ಮೂರು ಹೆಸರಿವೆ. ಆದರೆ ಅದರಲ್ಲಿ ಯಾವುದನ್ನು ಆಯ್ದುಕೊಳ್ಳುವುದು ಎಂಬ ನಿರ್ಧಾರ ಮಾಡಲಾಗುತ್ತಿಲ್ಲವಂತೆ!


ಈಕೆ ಮಾಜಿ ಮಿಸ್ ಆಂಧ್ರ.... ಶೆರ್ಲಿನ್ ಅನ್ನಿ, ಮೋನಾ ಅನ್ನಿ.... ಮೋನಿಕಾನೂ ಅನ್ನಿ... ಬೆಚ್ಚನೆ ದೇಹ, ಬಿಸಿಯುಸಿರು ಸೃಷ್ಟಿಸುವ ನೋಟ ಇತ್ಯಾದಿ ಥ್ರಿಲ್‌ಗಳ ಈ ಹುಡುಗಿ 'ಗೇಮ್' ಚಿತ್ರದಲ್ಲಿ ಮಿಂಚು ಹರಿಸಿದ್ದಾಳಂತೆ... ಮೊನ್ನೆ ಆ ಚಿತ್ರದ ಆಡಿಯೋ ಫಂಕ್ಷನ್‌ಗೆ ಈ ಮೋನಾ ಏನು ಉಡುಗೆ ತೊಟ್ಟಿದ್ದಳು? ನಿಮ್ಮ ರಾಂಗ್ ಗೆಸ್! ಆಕೆ ಬುರ್ಖಾ ಧರಿಸಿ ಬಂದಿದ್ದಳು. ಕಾರಣ: ಚಿತ್ರದ ನಿರ್ದೇಶಕ ಆಕೆಯನ್ನು 'ಮೋನಾ' ಅಂತಲೇ ಕರೆಯುತ್ತಿದ್ದುದನ್ನು ಪ್ರತಿಭಟಿಸಲು!



R.B.P. LANKESH, Kannada Weekly Price Rs. 10/- 1-11-2006 RNI No. KARKAN2005/14648 Regd.No.KA/BG(S)/2036/20

ಏಳುಮಲೆ ಮ್ಯಾಲೇರಿದ 'ವಿಶ್ವಮಾನವ' ಎಸ್ಪಿ

-ಶೆನೈ



ಅಮೆರಿಕ ಕನ್ನಡಿಗರಿಗೆ ಸಂಗೀತವೆಂದರೆ ಪಂಚಪ್ರಾಣ ಇರಬಹುದೇ? ಈ ಪ್ರಶ್ನೆ ಯಾಕೆಂದರೆ, 'ಅಕ್ಕ' ಸಂಚಾಲಕರು ಎರಡನೆ ಬಾರಿ ತಮ್ಮ ಸಮ್ಮೇಳನಕ್ಕೆ ಎಸ್.ಪಿ. ಬಾಲಸುಬ್ರಮಣ್ಯಂರವರನ್ನು ಆಹ್ವಾನಿಸಿದ್ದರು.

ಮ್ಯಾರಿಲ್ಯಾಂಡಿನಲ್ಲಿ ನಡೆದ ಸಮ್ಮೇಳನದ ಎರಡನೇ ದಿನ ಸಾಯಂಕಾಲ ಏಳು ಗಂಟೆಗೆ ಡಾ. ರಾಜ್‌ಕುಮಾರ್ ಸಭಾಂಗಣದಲ್ಲಿ ಎಸ್ಪಿಯವರ ರಸಮಂಜರಿ ಕಾರ್ಯಕ್ರಮವಿತ್ತು. ಅಂದು ಬೆಳಗ್ಗಿನಿಂದಲೇ ಜನರ ಬಾಯಲ್ಲಿ ಎಸ್ಪಿಯವರ ಹೆಸರು ಗುನುಗುತ್ತಿತ್ತು. ಅವತ್ತು ಅಲ್ಲಿ ಅದೆಷ್ಟು ಜನರಿದ್ದರೆಂದರೆ ಆ ಮೂರು ದಿನದ ಸಮಾವೇಶದಲ್ಲಿ ಆ ಸಭಾಂಗಣ ಕಿಕ್ಕಿರಿದಿದ್ದು ಅದೇ ಮೊದಲ ಬಾರಿ ಮತ್ತು ಅದೇ ಕೊನೆ ಬಾರಿ. ಏಕೆಂದರೆ ಎಸ್ಪಿಯವರು ಹಾಡಲು ಪ್ರಾರಂಭಿಸುವ ಮೊದಲೇ ಸುಮಾರು ಐದು ಸಾವಿರ ಜನ ಜಮಾಯಿಸಿದ್ದರು.

ಎಸ್ಪಿ ಎಂದಿನಂತೆ ಶಿಸ್ತಿನ ಸಿಪಾಯಿಯಂತೆ ಕಂಡರು. ಇಲ್ಲಿ ಈ ಟೀವಿಯಲ್ಲಿ ವಾರಗಟ್ಟಲೆ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮ ನೋಡಿರುವವರಿಗೆ ಅವರ ಮಾತು ಮತ್ತು ನಡೆ ಮಾಮೂಲಿ ಎನಿಸಿತು. ಆದರೆ ಅಮೆರಿಕನ್ನಡಿಗರು ಮಾತ್ರ ಅವರ ಮಾತು ಮತ್ತು ಹಾಡನ್ನು ಕೇಳಿ ಸ್ತಂಬೀಭೂತರಾದರು. ಮುಖ್ಯವಾಗಿ ಅವರು ಹಳೆಯ ಕಾಲದ ಹಾಡುಗಳನ್ನು ಹಾಡುವಾಗ ಚಪ್ಪಾಳೆ ತಟ್ಟಿ ಸಂತೋಷ ಪಡುತ್ತಿದ್ದರು. ಎಸ್ಪಿ ಎಂದಿನಂತೆ ಆ ಹಾಡಿನ ಪ್ರಾಮುಖ್ಯತೆ ಹೇಳುತ್ತಾ ಅದರ ಸಂಗೀತ ನಿರ್ದೇಶಕರನ್ನು ಮತ್ತು ಗೀತರಚನೆಕಾರರನ್ನು ಹೊಗಳುತ್ತಿದ್ದರು. ಅವರ ಹೊಗಳಿಕೆಗೆ ಆಗಾಗ ಪಾತ್ರರಾದವರೆಂದರೆ ಹಂಸಲೇಖ, ನಿರ್ದೇಶಕ ದಿನೇಶ್ ಬಾಬು, ಆರ್.ಎನ್.ಜಯಗೋಪಾಲ್ ಮತ್ತು ಜಿ.ಕೆ. ವೆಂಕಟೇಶ್.



"ನನ್ನ ತೂಕವನ್ನು ಈ ವೇದಿಕೆ ತಡೆಯಲು ಸಾಧ್ಯವಾಗುವುದಿಲ್ಲ ಆದ್ದರಿಂದ ನಾನು ಇಲ್ಲಿ ನೃತ್ಯ ಮಾಡಬಾರದೆಂದು ಆದೇಶ ನೀಡಿದ್ದಾರೆ" ಎಂದು ಎಸ್ಪಿ ತಮ್ಮ ದೈಹಿಕ ಗಾತ್ರದ ಬಗ್ಗೆ ತಾವೇ ತಮಾಷೆ ಮಾಡಿದಾಗ ಅಮೆರಿಕನ್ನಡಿಗರಿಗೆ ಖುಷಿಯೋ ಖುಷಿ. ಇಷ್ಟು ದೊಡ್ಡ ವ್ಯಕ್ತಿ ಎಷ್ಟು ಸಿಂಪಲ್ ಅಲ್ವಾ? ಎಂದು ಅವರಲ್ಲಿ ಹಲವಾರು ಜನ ಆಶ್ಚರ್ಯ ವ್ಯಕ್ತಪಡಿಸಿದರು.

ಎಸ್ಪಿ ತಂಡದಲ್ಲಿ ಅವರ ಸಹೋದರಿ ಎಸ್ಪಿ ಶೈಲಜಾ ಮತ್ತು ಯುವ ಹಾಡುಗಾರ ಮಲ್ಲಿಕಾರ್ಜುನ್ ಇದ್ದರು. ಈ ಮಲ್ಲಿಕಾರ್ಜುನ್ ಕೂಡಾ ನೆರೆಯ ಆಂಧ್ರದ ಹುಡುಗ. ಈತ ಅಣ್ಣಾವ್ರು ಹಾಡಿದ "ಹುಟ್ಟಿದರೇ ಕನ್ನಡ ನಾಡಲ್ಲಿ ಹುಟ್ಟಬೇಕು" ಎಂಬ ಹಾಡನ್ನು ಆಂಧ್ರ-ಕನ್ನಡ ಶೈಲಿಯಲ್ಲಿ ಹಾಡಿದರೂ ಜನ ಹುಚ್ಚೆದ್ದು ಕುಣಿದರು. ಅಲ್ಲಿನ ಕನ್ನಡಿಗರು ಅಣ್ಣಾವ್ರನ್ನ ಎಷ್ಟು ಇಷ್ಟ ಪಡುತ್ತಾರೆ ಎಂಬುದು ಆ ಹಾಡಿನಿಂದ ಸಾಬೀತಾಯಿತು. ಅದಾದ ನಂತರ ಎಸ್ಪಿಯವರು 'ಜೋಗಿ' ಚಿತ್ರದ ಹಾಡನ್ನು ಶುರು ಮಾಡಿದರು. "ಈ ಹಾಡಿಗೆ ನೀವು ಕುಣಿದು ಕುಪ್ಪಳಿಸಬಹುದು" ಎಂದು ಅವರ ಆಹ್ವಾನ ನೀಡಿದರೂ 'ಏಳೂಮಲೆ ಮ್ಯಾಲೇರಿ ಕುಂತ ನಮ್ಮ ಮಾದೇವ' ಎಂಬ ಹಾಡಿಗೆ ಅದ್ಯಾಕೋ ಯಾರೂ ಎದ್ದು ಕುಣಿಯಲೇ ಇಲ್ಲ. ಎಸ್ಪಿ ಹಾಡುತ್ತಿದ್ದಾಗ ಸ್ವಲ್ಪ ಅಪ್ಸೆಟ್ ಆಗುತ್ತಿದ್ದವರೆಂದರೆ ಗುರುಕಿರಣ್! ಯಾಕೆಂದರೆ ಮರುದಿನ ತಾವು ಹಾಡಬೇಕೆಂದಿದ್ದ ಹಾಡುಗಳನ್ನೆಲ್ಲಾ ಎಸ್ಪಿ ಹಾಡುತ್ತಿದ್ದರು. ಹೀಗಾಗಿ ಅವರು ತಮ್ಮ ಕಾರ್ಯಕ್ರಮಕ್ಕೆ ಹೊಸ ಹಾಡುಗಳನ್ನು ತಲಾಷ್ ಮಾಡಿ ಹಾಡಬೇಕಾಗಿತ್ತು. ಆಗ "ಯು ಗೋ ಫಾರ್ ಫಾಸ್ಟ್ ಸಾಂಗ್ ಯಾರ್" ಎಂದು ಗುರುವಿಗೆ ಧೈರ್ಯ ಕೊಟ್ಟದ್ದು ಅವರ ಹೆಂಡತಿ ಪಲ್ಲವಿ.

ಎಸ್ಪಿಯವರ ಹಾಡು ಮತ್ತು ಮಾತು ಅಲ್ಲಿದ್ದ ಹೆಚ್ಚಿನವರನ್ನು ಖುಷಿಪಡಿಸಿತು. ಆದರೆ ಯುವಕರು ಮಾತ್ರ ಅದನ್ನು ಇಷ್ಟಪಡಲೇ ಇಲ್ಲ. "ವಾಟ್ ಯಾರ್, ವಿ ಆರ್ ಮಿಸ್ಸಿಂಗ್ ಡೀಜೆ. ನೋ ಡೀಜೆ.... ನೋ ಎಕ್ಸೈಟ್‌ಮೆಂಟ್" ಎಂದು ಗೊಣಗಾಡುತ್ತಿದ್ದರು.

ಕೊನೆಯಲ್ಲಿ ಎಸ್ಪಿಯವರು ಅಮೆರಿಕನ್ನಡಿಗರನ್ನು ಹಾಡಿ ಕೊಂಡಾ "ನಾನು ತೆಲುಗಿನವನಾದರೂ ನನ್ನ ಬಾಯಲ್ಲಿ ಕನ್ನಡದ ಹಾಡನ್ನು ಕನ್ನಡ ಸಮ್ಮೇಳನದಲ್ಲಿ ಹಾಡುವ ಅವಕಾಶ ಕೊಟ್ಟಿದ್ದಕ್ಕೆ ನಾನು ಚಿ ಕಳೆದ ಬಾರಿ ಬಂದಿದ್ದೆ. ಈ ಬಾರಿಯೂ ಬಂದಿದ್ದೇನೆ. ಮುಂದಿನ ಬಾ ನನಗೆ ನೀವು ಪ್ರೀತಿಯಿಂದ ಆಹ್ವಾನಿಸುತ್ತೀರಿ ಎಂದು ನಂಬಿರುವೆ" ಅವರು ಹೇಳಿದಾಗ ಅಲ್ಲಿದ್ದ ಜನರೆಲ್ಲಾ ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು.

ಎಸ್ಪಿಯವರು ಅಂದಿನ ಸಮಾರಂಭ ಮುಗಿಸಿ ಅಮೆರಿಕದಲ್ಲೇ ತಿಂಗಳ ಕಾಲ ಬೇರೆ, ಬೇರೆ ಕಡೆ ಕಾರ್ಯಕ್ರಮ ನೀಡಲು ಉಳಿದುಕೊಂ ಆದರೆ ಎಲ್ಲ ಕಡೆ ಕನ್ನಡ ಕಾರ್ಯಕ್ರಮವಲ್ಲ! ಕೆಲವೆಡೆ ಕನ್ನಡ, ತೆಲುಗು, ಕೆಲವೆಡೆ ತಮಿಳು, ಇನ್ನು ಕೆಲವೆಡೆ ಹಿಂದಿ .....ಅಂದ ವಿಶ್ವಮಾನವನೆಂದಾಯಿತಲ್ಲವೇ? ಅಮೆರಿಕ ಪ್ರವಾಸ ಮುಗಿಸಿ ಅವರು ತಾ ವಾಪಸ್ಸು ಬಂದಾಗ ಅವರ ಬ್ಯಾಂಕ್ ಬ್ಯಾಲೆನ್ಸ್ ಕನಿಷ್ಠ ಎರಡು ಹೆಚ್ಚಾದರೂ ಆಶ್ಚರ್ಯವಿಲ್ಲ.

ಅದೇನೇ ಇರಲಿ, ವಿಶ್ವ ಕನ್ನಡ ಸಮ್ಮೇಳನದಲ್ಲಿ ಅವರು ರಾಯಭಾರಿಯಂತೆ ಹಾಡಿದರು... ಮಾತನಾಡಿದರು... ಜ ಮಂತ್ರಮುಗ್ಧರನ್ನಾಗಿಸಿದರು...

ಡಕೋಟಾ ಕಾಮಿಡಿ!



ಹೊಡಿ, ಬಡಿ ಚಿತ್ರಗಳು ಸೋತಿದ್ದಾಯ್ತು, ತಂಗಿ ಸೆಂಟಿಮೆಂಟ್ ಚಿತ್ರಗಳು ನೆಲಕಚ್ಚಿದ್ದಾಯ್ತು, ಈಗ ಮತ್ತೆ ಹಾಸ್ಯ ಚಿತ್ರಗಳಿಗೆ ಡಿಮ್ಯಾಂಡಪ್ಪೊ ಡಿಮ್ಯಾಂಡು. ಅದಕ್ಕೆ ರಾಕ್‌ಲೈನ್ ವೆಂಕಟೇಶ್ ಮತ್ತು ಓಂ ಪ್ರಕಾಶ್ ಎಂಬ 'ಡಕೋಟಾ ಎಕ್ಸ್‌ಪ್ರೆಸ್' ಜೋಡಿ ತಮ್ಮ ತಲೆಹರಟೆಯನ್ನು ಮುಂದುವರೆಸಿ 'ಡಕೋಟಾ ಬ್ರದರ್ಸ್' ಆಗಿ ಬೆಳ್ಳಿತೆರೆಯ ಮೇಲೆ ಸದ್ಯದಲ್ಲೇ ಬರಲಿದ್ದಾರೆ.

ಅವರಿಬ್ಬರು ತೊರೆದಿರುವ 'ಎಕ್ಸ್‌ಪ್ರೆಸ್' ಗಾಡಿಯನ್ನು ಇತ್ತೀಚೆಗೆ ಹತ್ತಿದ ಜಗ್ಗೇಶ್ ಮತ್ತು ಎಸ್. ನಾರಾಯಣ್ ಎಂಬ ಮತ್ತೊಂದು ಕಾಮಿಕ್ ಜೋಡಿ 'ಹನಿಮೂನ್ ಎಕ್ಸ್‌ಪ್ರೆಸ್' ಮಾಡಿ ಬಾಕ್ಸ್ ಆಫೀಸಿನಲ್ಲಿ ಗೆದ್ದಿತ್ತು. ಅಂದಹಾಗೆ, ಹನಿಮೂನ್ ಆದ ಮೇಲೆ ಸಂಸಾರ ಎಂಬುದು ಗ್ಯಾರಂಟಿ ತಾನೆ? ಅದಕ್ಕೇ ಈ ಜೋಡಿ ಸದ್ಯದಲ್ಲೇ 'ಫ್ಯಾಮಿಲಿ ಎಕ್ಸ್‌ಪ್ರೆಸ್' ಎಂಬ ಮತ್ತೊಂದು ಗಾಡಿ ಏರಿ ಬರಲಿದೆಯಂತೆ.

'ಬ್ರದರ್ಸ್' ಗೆಲ್ಲುತ್ತಾರೋ, 'ಫ್ಯಾಮಿಲಿ' ಗೆಲ್ಲುತ್ತದೋ ಎಂಬುದನ್ನು 'ಡಕೋಟ' ಪ್ರೇಕ್ಷಕರೇ ನಿರ್ಧರಿಸಬೇಕು.

ಏಳು ಕೋಟಿಗೆ AK97

'ಎಕೆ 47' ಖ್ಯಾತಿಯ ನಿರ್ದೇಶಕ ಓಂ ಪ್ರಕಾಶ್‌ರಾವ್ ಈಗ ಬಡ್ತಿ ಪಡೆದು 'ಎಕೆ 97' ಎಂಬ ಚಿತ್ರದ ತಯಾರಿಯಲ್ಲಿದ್ದಾರೆ. ಹಿಂದಿಯ ಓಂ ಪುರಿ ಮತ್ತು ಸುನೀಲ್ ಶೆಟ್ಟಿ ನಟಿಸಲಿರುವ ಈ ಚಿತ್ರದ ಬಜೆಟ್ ಏಳುಕೋಟಿಗಿಂತ ಹೆಚ್ಚಂತೆ. ಅಂದರೆ ಇದು 'ಕುಮಾರರಾಮ' ಚಿತ್ರದ ಬಜೆಟನ್ನು ಓವರ್ ಟೇಕ್ ಮಾಡಲಿದೆ. ಬಜೆಟ್‌ನಲ್ಲಷ್ಟೇ ಅಲ್ಲ, ಗಲ್ಲಾ ಪೆಟ್ಟಿಗೆಯ ಕಲೆಕ್ಷನ್‌ನಲ್ಲೂ ಓವರ್‌ಟೇಕ್ ಮಾಡುತ್ತದೆಯೆ ಎಂಬುದು ಹತ್ತು ಕೋಟಿ ರೂಪಾಯಿಯ ಪ್ರಶ್ನೆ!

ಚೀನಾ ಚಿಂಗಾರಿ!

'ಪ್ರೀತಿ ಏಕೆ ಭೂಮಿ ಮೇಲಿದೆ?' ಎಂಬ ಚಿತ್ರಕ್ಕೆ ಕೊನೆಗೂ ಪ್ರೇಂ ಇಬ್ಬರು ನಾಯಕಿಯನ್ನು ಆಯ್ಕೆ ಮಾಡಿದ್ದಾರೆ. ಒಬ್ಬಳು ನ್ಯೂಯಾರ್ಕ್‌ನವಳು, ಮತ್ತೊಬ್ಬಳು ಚೀನಾದವಳು. ಇವರಿಬ್ಬರ ನಡುವೆ ಐಟಂಸಾಂಗ್‌ಗೋಸ್ಕರ ಮುಂಬೈನ ಮಲ್ಲಿಕಾ ಶೆರಾವತ್ ಇದಾಳೆ.

ಹೀಗೆ ನ್ಯೂಯಾರ್ಕ್, ಚೀನಾ, ಮುಂಬೈ ನಂಟಿನಿಂದ ಪ್ರೇಂ ವಿಶ್ವಮಾನವರಾಗಲು ಹೊರಟಿದ್ದಾರಾ?

ಹತ್ತಿದ ಏಣಿ ಒದ್ದು....

ನಮ್ಮ ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕ ಮತ್ತು ನಿರ್ದೇಶ ಸಂಬಂಧ ಹೇಗಿದೆ ಎಂಬುದಕ್ಕೆ ಒಂದು ಎಕ್ಸಾಂಪಲ್ ಕೊಡುತ್ತಿದ್ದೇ

'ಮಣಿ' ಎಂಬ ಚಿತ್ರದ ಮುಖಾಂತರ ಯೋಗರಾಜ್ ಭ ಸ್ವತಂತ್ರ ನಿರ್ದೇಶಕರಾದರು. ಆ ಚಿತ್ರವನ್ನು ನಿರ್ಮಿಸಿದ್ದ ಕರಿಸು ನಿರ್ದೇಶಕ ಕೇಳಿದಷ್ಟು ಹಣವನ್ನು ಸುರಿದಿದ್ದರು. ಆ ಸಿನಿಮಾದಿ ಚೊಚ್ಚಲ ನಿರ್ದೇಶಕ ಯೋಗರಾಜ್ ಭಟ್‌ಗೆ ಒಳ್ಳೆಯ ಹೆಸ ಬಂದಿತಾದರೂ, ನಿರ್ಮಾಪಕರಿಗೆ ಸಾಕಷ್ಟು ನಷ್ಟವಾಯಿತು.

ಈಗ ಕರಿಸುಬ್ಬು ತಮ್ಮ ಸಾಲಗಳಿಂದ ಚೇತರಿಸಿಕೊಳ್ಳಲು ಒ ಅದ್ಭುತವಾದ ಹೊಸ ಸ್ಟುಡಿಯೋವನ್ನು ಆರಂಭಿಸಿದ್ದಾರೆ. ಕ ಚಿತ್ರರಂಗದ ಬಹುತೇಕ ನಿರ್ದೇಶಕರು ಕರಿಸುಬ್ಬುರನ್ನು ಬೆಂಬಲಿಸ ಇಲ್ಲೇ ತಮ್ಮ ಚಿತ್ರದ ಡಬ್ಬಿಂಗ್, ರೀರೆಕಾರ್ಡಿಂಗ್ ಕೆಲಸಗಳ ಮಾಡಿಸುತ್ತಿದ್ದಾರೆ. ಈ ಮಧ್ಯೆ ಕರಿಸುಬ್ಬು ನೆರವಿನಿಂದ ನಿರ್ದೇಶಕರ ಯೋಗರಾಜ್ ಭಟ್ 'ಮುಂಗಾರಿನ ಮಳೆ' ಎಂಬ ತಮ್ಮ ಹೆ ಚಿತ್ರದ ಕೆಲಸಗಳನ್ನು ಮದ್ರಾಸಿನ ಸ್ಟುಡಿಯೋ ಒಂದ ಮಾಡಿಮುಗಿಸಿದ್ದಾರೆ.

ಹತ್ತಿದ ಏಣಿಯನ್ನು ಒದೆಯುವುದು ಎಂದರೆ ಇದೇ ಅಲ್ಲ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi
Fax : 26604536, E-mail :lankesh70@rediffmail